ಮಂಗಳವಾರ, ಸೆಪ್ಟೆಂಬರ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 254 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಸಮತೋಲನಕ್ಕೂ ಸಾಮರಸ್ಯಕ್ಕೂ ಹತ್ತಿರದ ನಂಟು, ಗಂಟು. ವಸ್ತುಗಳ ಸಮತೋಲನ ಸರಿಯಿದ್ದಾಗ ಮಾತ್ರ ಅಲ್ಲಿ ಸಾಮರಸ್ಯ ಸಾಧ್ಯ.

ಆಳ-ಅಗಲ: ಕೋರ್ಟ್ ಕಟಕಟೆಯಲ್ಲಿ 'ಜ್ಞಾನವಾಪಿ'

ರೋಗಿಯ ಜೀವ ಉಳಿಸಲು 3 ಕಿ.ಮೀ ಓಡಿದ ವೈದ್ಯ 7

ಟಿ20 ವಿಶ್ವಕಪ್: ಭಾರತ ತಂಡ ಪ್ರಕಟ 14

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,115 ▲	17,936 ▲	₹52,250 (ಬೆಂಗಳೂರು)	₹56,300 (ಬೆಂಗಳೂರು)	79.53 ▲

ಅಮೃತ್ 2.0: ಕೇಂದ್ರ ನಿಗದಿ ₹9,230 ಕೋಟಿ: ರಾಜ್ಯದ ಲೆಕ್ಕ ₹16,900 ಕೋಟಿ!

ಶೇ 83ಕ್ಕಿಂತ ಹೆಚ್ಚು ವೆಚ್ಚಕ್ಕೆ ತಯಾರಿ?

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವ 247 ಪಟ್ಟಣಗಳಲ್ಲಿ ಪ್ರತಿಮನೆಗೂ ನಲ್ಲಿ ನೀರು ಒದಗಿಸುವ ಕೇಂದ್ರ ಸರ್ಕಾರದ 'ಅಮೃತ್ 2.0' ಯೋಜನೆಗೆ ಆರಂಭದಲ್ಲೇ ಕಂಟಕ ಎದುರಾಗಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ವೆಚ್ಚಕ್ಕಿಂತ ಅಧಿಕಾರಿಗಳು ಶೇ 83ಕ್ಕೂ ಹೆಚ್ಚು ವೆಚ್ಚದ ಅಂದಾಜು ಪಟ್ಟಿಯನ್ನು ಸಲ್ಲಿಸಿರುವುದೇ ಇದಕ್ಕೆ ಕಾರಣ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೃತ್ 2.0 ಯೋಜನೆಯನ್ನು 2021ರ ಅಕ್ಟೋಬರ್ 2ರಂದು ಪ್ರಕಟಿಸಿದ್ದರು. ಈ ಯೋಜನೆ ಆರಂಭಕ್ಕೆ ಸೂಚನೆ ನೀಡಿ ಕೇಂದ್ರ ಸರ್ಕಾರ ಮೇ 17ರಂದು ಆದೇಶವನ್ನೂ ಹೊರಡಿಸಿದೆ. ಈ ಯೋಜನೆ ಅನುಷ್ಠಾನ ಮಾಡಲು ಸಂಸ್ಥೆಯನ್ನು (ಪಿಡಿಎಂಸಿ) ರಚಿಸಬೇಕಿದೆ. ಇದಕ್ಕೆ ಕೇಂದ್ರ ನಿಗದಿಪಡಿಸಿರುವ ಹಣಕ್ಕಿಂತ ₹38 ಕೋಟಿ ಹೆಚ್ಚು ಅಂದಾಜುಪಟ್ಟಿ ಸಲ್ಲಿಸಲಾಗಿದೆ. ಮುಖ್ಯ ಕಾರ್ಯದರ್ಶಿ ನೇತೃತ್ವದ ರಾಜ್ಯಮಟ್ಟದ ಉನ್ನತ ಸಮಿತಿ ಸಭೆಯಲ್ಲಿ ಈ ಅಂದಾಜು ಪಟ್ಟಿಗೆ ಸಮ್ಮತಿ ನೀಡಬೇಕಿತ್ತು. ಇದ್ಯಾವುದಕ್ಕೂ ಒಪ್ಪದ ಮುಖ್ಯ ಕಾರ್ಯದರ್ಶಿಯವರು, ಕೇಂದ್ರ ನಿಗದಿ ಮಾಡಿರುವ ಹಣಕ್ಕೇ ಅಂದಾಜುಪಟ್ಟಿ, ಕ್ರಿಯಾ ಯೋಜನೆ ಮತ್ತೆ ಸಲ್ಲಿಸಿ ಎಂದು ಹೇಳಿ ಸಭೆಯನ್ನು ಮುಂದೂಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪೌರಾಡಳಿತ ನಿರ್ದೇಶನಾಲಯ ಅಮೃತ್ 2.0 ಯೋಜನೆಯನ್ನು ನಿರ್ವಹಣೆ ಮಾಡಬೇಕಿದೆ.

10ನೇ ಪುಟ ನೋಡಿ

ಅಮೃತ್ 2.0 ಲೆಕ್ಕಾಚಾರ



₹8,690.72 ಕೋಟಿ ನೀರು ಪೂರೈಕೆ ಯೋಜನೆಗಳು (ಕೇಂದ್ರ ನಿಗದಿ)

₹14,084 ಕೋಟಿ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಂದಾಜುಪಟ್ಟಿ

ಯಾವ ಯೋಜನೆಗೆ ಎಷ್ಟು ಹಣ? (₹ಕೋಟಿಗಳಲ್ಲಿ)

ಕಾಮಗಾರಿ	ಕೇಂದ್ರದಿಂದ	ರಾಜ್ಯದ ಪಾಲು	ಸ್ಥಳೀಯ ಸಂಸ್ಥೆ ವೆಚ್ಚ
ನೀರು ಪೂರೈಕೆ ಯೋಜನೆ	4,345.36	3,476.28	869.07
ಜಲಮೂಲ ಪುನರುಜ್ಜೀವನ	215.71	172.57	43.14
ಹಸಿರು ಪ್ರದೇಶ ಮತ್ತು ಉದ್ಯಾನ	53.92	43.14	10.78

ಜಲಮೂಲಗಳ ಪುನರುಜ್ಜೀವನ (ಅಂದಾಜುಪಟ್ಟಿಯಂತೆ)

ವಿಭಾಗ	ಸ್ಥಳೀಯ ಸಂಸ್ಥೆ	ಯೋಜನೆ	ಜಲ ಮೂಲ	ವೆಚ್ಚ (ಕೋಟಿಗಳಲ್ಲಿ)
ಬೆಂಗಳೂರು	63	53	206	₹460.63
ಮೈಸೂರು	62	42	109	₹143.08
ಬೆಳಗಾವಿ	101	69	219	₹1,021.8
ಕಲಬುರ್ಗಿ	59	43	117	₹137.2
ಒಟ್ಟು	285	207	651	₹1,762.7

ಕೇಂದ್ರದಿಂದ ನಿಗದಿ: ₹431

ಹಸಿರು ಪ್ರದೇಶ, ಉದ್ಯಾನ ಅಭಿವೃದ್ಧಿ (ಅಂದಾಜುಪಟ್ಟಿಯಂತೆ)

ವಿಭಾಗ	ಸ್ಥಳೀಯ ಸಂಸ್ಥೆಗಳು	ಪ್ರಸ್ತಾವನೆ ಸಲ್ಲಿಕೆ	ಯೋಜನೆ ಸಂಖ್ಯೆ	ವೆಚ್ಚ (ಕೋಟಿಗಳಲ್ಲಿ)
ಬೆಂಗಳೂರು	63	61	319	₹205.4
ಮೈಸೂರು	62	50	212	₹119.03
ಬೆಳಗಾವಿ	101	78	332	₹541.6
ಕಲಬುರ್ಗಿ	59	52	228	₹188.5
ಒಟ್ಟು	285	241	1,091	₹1,054.6

ಕೇಂದ್ರದಿಂದ ನಿಗದಿ: ₹107.85

ಜ್ಞಾನವಾಪಿಯಲ್ಲಿ ಪೂಜೆ ಅರ್ಜಿ ವಿಚಾರಣೆಗೆ ಅರ್ಹ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿಗೆ ಸಂಬಂಧಿಸಿ ಮಹತ್ವದ ಮತ್ತು ಸುದೀರ್ಘ ಕಾನೂನು ಸಮರಕ್ಕೆ ಕಾರಣವಾಗಬಹುದಾದ ತೀರ್ಪನ್ನು ವಾರಾಣಸಿ ಜಿಲ್ಲಾ ನ್ಯಾಯಾಲಯ ಸೋಮವಾರ ನೀಡಿದೆ. ಜ್ಞಾನವಾಪಿ ಮಸೀದಿ ಆವರಣದಲ್ಲಿ ಇದೆ ಎಂದು ಹೇಳಲಾಗುವ ಶೃಂಗಾರ ಗೌರಿ ದೇಗುಲದಲ್ಲಿ ದಿನವೂ ಪೂಜೆ ಸಲ್ಲಿಸಲು ಅವಕಾಶ ಕೋರಿ ಸಲ್ಲಿಕೆಯಾಗಿರುವ ಅರ್ಜಿಯು ವಿಚಾರಣೆಗೆ ಅರ್ಹ ಎಂದು ಕೋರ್ಟ್ ತೀರ್ಪು ಕೊಟ್ಟಿದೆ.

ಜ್ಞಾನವಾಪಿ ಮಸೀದಿಯ ಆಡಳಿತ ಮಂಡಳಿ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಯ ಆಕ್ಷೇಪಗಳನ್ನು ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶೇಷ್ ತಳ್ಳಿ ಹಾಕಿದರು. ವಿಚಾರಣೆಯ ಬಳಿಕ ಆಗಸ್ಟ್ 24ರಂದು ತೀರ್ಪನ್ನು ಕಾಯ್ದಿರಿಸಲಾಗಿತ್ತು. ಪ್ರಕರಣದ ಮುಂದಿನ ವಿಚಾರಣೆಯನ್ನು ಇದೇ 22ಕ್ಕೆ ನಿಗದಿ ಮಾಡಲಾಗಿದೆ.

ಜಿಲ್ಲಾ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಜ್ಞಾನವಾಪಿ ಮಸೀದಿ ಸಮಿತಿಯು ಹೇಳಿದೆ.

ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991ರ ಪ್ರಕಾರ, ಇಂತಹ ಅರ್ಜಿ ಸಲ್ಲಿಕೆಗೆ ಅವಕಾಶವೇ ಇಲ್ಲ ಎಂಬ ಜ್ಞಾನವಾಪಿ ಮಸೀದಿ ಸಮಿತಿಯ ವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ ಎಂದು ಹಿಂದೂ ದೂರುದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿದ್ದಾರೆ.

'ಈ ತೀರ್ಪು ದೂರಗಾಮಿ ಪರಿಣಾಮಗಳನ್ನು ಹೊಂದಿದೆ. ಮಸೀದಿ ಸಂಕೀರ್ಣದ ಒಳಭಾಗದಲ್ಲಿ ನಡೆಸಲಾದ ವಿಡಿಯೊ ಚಿತ್ರೀಕರಣವನ್ನು ಈಗ ನ್ಯಾಯಾಲಯವು ವೀಕ್ಷಿಸಬಹುದು' ಎಂದು ಜೈನ್ ಅವರು ಹೇಳಿದ್ದಾರೆ. ಮಸೀದಿ ಸಂಕೀರ್ಣದ ಒಳಭಾಗದಲ್ಲಿ ವಿಡಿಯೊ ಚಿತ್ರೀಕರಣ ನಡೆಸುವಂತೆ ನ್ಯಾಯಾಲಯವೇ ಈ ಹಿಂದೆ ಆದೇಶ ನೀಡಿತ್ತು. ಈ ವಿಡಿಯೊ ಸಮೀಕ್ಷೆಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಜ್ಞಾನವಾಪಿ ಪ್ರಕರಣದ ಅರ್ಜಿದಾರ ಮಹಿಳೆಯರು ಮತ್ತು ಅವರ ವಕೀಲರು ಸೋಮವಾರ ವಾರಾಣಸಿಯಲ್ಲಿ ಸಂಭ್ರಮಿಸಿದರು –ಪಿಟಿಐ ಚಿತ್ರ

10ನೇ ಪುಟ ನೋಡಿ

ಹಣದುಬ್ಬರ ಪ್ರಮಾಣ ಆಹಾರ ವಸ್ತುಗಳಲ್ಲಿ ಹೆಚ್ಚು

ಸಂಬಾರ ಪದಾರ್ಥ	14.90
ತರಕಾರಿ	13.23
ಬಟ್ಟೆ, ಪಾದರಕ್ಷೆ	9.91
ಏಕದಳ ಧಾನ್ಯಗಳು ಮತ್ತು ಉತ್ಪನ್ನಗಳು	9.7
ಸಿದ್ಧಪಡಿಸಿದ ಊಟ, ಕುರುಕಲು, ಸಿಹಿ	7.75
ಆಹಾರ, ಪಾನೀಯ	7.57
ಹಣ್ಣುಗಳು	7.39
ಹಾಲು ಮತ್ತು ಅದರ ಉತ್ಪನ್ನಗಳು	6.39
ಅಡುಗೆ ಎಣ್ಣೆ, ಕೊಬ್ಬಿನ ಪದಾರ್ಥ	4.62
ಮಾಂಸ, ಮೀನು	0.98
ಮೊಟ್ಟೆ	-4.57

(ಬೆಲೆ ಏರಿಕೆಯನ್ನು ಶೇಕಡಾವಾರು ಪ್ರಮಾಣದಲ್ಲಿ ನೀಡಲಾಗಿದೆ)

ಮಾಹಿತಿ: ಕೆಬಿಕೆ ಇನ್ಫೋಗ್ರಾಫಿಕ್ಸ್

ಮತ್ತೆ ಏರಿಕೆಯ ಹಾದಿಗೆ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಮೂರು ತಿಂಗಳುಗಳಿಂದ ಇಳಿಕೆಯ ಹಾದಿಯಲ್ಲಿ ಇದ್ದ ಚಿಲ್ಲರೆ ಹಣದುಬ್ಬರ ದರವು ಆಗಸ್ಟ್‌ನಲ್ಲಿ ಶೇಕಡ 7ಕ್ಕೆ ಏರಿಕೆ ಆಗಿದೆ. ಆಹಾರ ವಸ್ತುಗಳ ಬೆಲೆ ಹೆಚ್ಚಳವು ಹಣದುಬ್ಬರ ಏರಿಕೆಗೆ ಕಾರಣ.

ಹಣದುಬ್ಬರಕ್ಕೆ ಕಡಿವಾಣ ಹಾಕಲು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ತಿಂಗಳಲ್ಲಿ ರೆಪೊ ದರವನ್ನು ಮತ್ತೆ ಹೆಚ್ಚಿಸುವ ಸಾಧ್ಯತೆ ಇದೆ.

ಆರ್‌ಬಿಐ ರೆಪೊ ದರವನ್ನು ತೀರ್ಮಾನಿಸುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಸತತ ಎಂಟು ತಿಂಗಳುಗಳಿಂದ ಗರಿಷ್ಠ ಮಿತಿಯನ್ನು (ಶೇ 6) ಮೀರಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 6ರೊಳಗೆ ಇರಿಸಬೇಕಾದ ಹೊಣೆ ಆರ್‌ಬಿಐ ಮೇಲಿದೆ.

11ನೇ ಪುಟ ನೋಡಿ

ತಗ್ಗಿದ ಕೈಗಾರಿಕಾ ಉತ್ಪಾದನೆ 11

ಒಳ ಪುಟ

ಬಿಬಿಎಂಪಿ ಜಂಟಿ ಆಯುಕ್ತ, ಪಿಎ ಬಂಧನ 7

2,500 ಶಿಕ್ಷಕರ ನೇಮಕ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 2,500 ಶಿಕ್ಷಕರ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಿಕೊಳ್ಳುವುದಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಟ್ವೀಟ್ ಮಾಡಿದ್ದಾರೆ.

ರಾಜ್ಯದಲ್ಲಿ 4,736 ಸರ್ಕಾರಿ ಪ್ರೌಢ ಶಾಲೆಗಳಿವೆ. ಖಾಲಿ ಇರುವ 2,200 ಸಹ ಶಿಕ್ಷಕರು, 200 ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ವಿಶೇಷ ಶಿಕ್ಷಕರ 100 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತದೆ ಎಂದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಗೂಢಚರ್ಯೆ: ₹ 10 ಲಕ್ಷ ಪರಿಹಾರ

ನವದೆಹಲಿ: ಗೂಢಚರ್ಯೆ ಆರೋಪದಲ್ಲಿ ಪಾಕಿಸ್ತಾನದಿಂದ ಬಂಧಿತನಾಗಿ, ಜೈಲುಶಿಕ್ಷೆ ಅನುಭವಿಸಿದ ಭಾರತದ 75 ವರ್ಷದ ವ್ಯಕ್ತಿಗೆ ಸುಪ್ರೀಂ ಕೋರ್ಟ್ ಸೋಮವಾರ ₹ 10 ಲಕ್ಷ ಪರಿಹಾರ ನೀಡಬೇಕೆಂದು ಆದೇಶಿಸಿದೆ.

ದಸಂಸ ರಾಜ್ಯ ಸಮ್ಮೇಳನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮ್ಮೇಳನ ಮತ್ತು ರಾಜ್ಯ ಪಕ್ಷ ಉದ್ಘಾಟನಾ ಸಮಾರಂಭ ಬುಧವಾರ ನಡೆಯಲಿದೆ.

ವಸಂತನಗರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವಂಡರ್ ಆನ್ ವೀಲ್ಸ್'ಗೆ ಚಾಲನೆ

ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಅಂಗನವಾಡಿ ಮಕ್ಕಳ ಮನೆ ಬಾಗಿಲಿಗೆ ಆರಂಭಿಕ ಕಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ 'ವಂಡರ್ ಆನ್ ವೀಲ್'ಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೋಮವಾರ ಚಾಲನೆ ನೀಡಿದರು.

ಪ್ರಿಥಿಂಕಿಂಗ್ ಫೌಂಡೇಷನ್ ಸಂಸ್ಥೆಯು ಬಿಬಿಎಂಪಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಭಾಗಿತ್ವದಲ್ಲಿ 'ವಂಡರ್ ಆನ್ ವೀಲ್' ಮೂಲಕ ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಅಂಗನವಾಡಿಯ ಮಕ್ಕಳಿಗೆ ಆರಂಭಿಕ ಕಲಿಕೆಯನ್ನು ಅವರ ಮನೆ ಬಾಗಿಲಿಗೆ ಕೊಂಡೊಯ್ಯಲಿದೆ.

'ಶಾಲಾ ಶಿಕ್ಷಣವು ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿ ನಡೆಯದೆ, ಹತ್ತಿರದ ಉದ್ಯಾನದಲ್ಲಿ, ಬಸ್ಸಿನಲ್ಲಿ ಮಕ್ಕಳ ವಿದ್ಯಾಭ್ಯಾಸ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಬಸ್ಸುಗಳನ್ನು ಒದಗಿಸಿದ್ದು, ಪ್ರತಿಯೊಂದು ಬಸ್ಸಿನಲ್ಲಿ ವಿದ್ಯಾರ್ಥಿಗಳು ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗುತ್ತದೆ. ಅಂಗನವಾಡಿಯ ಮಕ್ಕಳಿಗೆ ವಿನೂತನ ಕಲಿಕಾ ಸಾಮಗ್ರಿ, ಸಂಸ್ಥೆಯಿಂದ ನುರಿತ ಶಿಕ್ಷಕರು ಹಾಗೂ ವಿಭಿನ್ನ ವಾತಾವರಣವನ್ನು ಕಲ್ಪಿಸಿ ಅಂಗನವಾಡಿ ಮಕ್ಕಳ ಆಮೂಲಾಗ್ರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಶಿಕ್ಷಕರಿಗೆ ತರಬೇತಿಯನ್ನು ಸಹ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮವನ್ನು ಹೆಚ್ಚು ಪ್ರದೇಶಗಳಿಗೆ ವಿಸ್ತರಿಸಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ವತಿಯಿಂದ 10 ಬಸ್ಸುಗಳಲ್ಲಿ ಶಾಲೆಗಳಿಂದ ಹೊರಗುಳಿದ ಮಕ್ಕಳಿಗೆ ವಿದ್ಯಾಭ್ಯಾಸ ನೀಡಲಾಗುತ್ತಿದೆ. ವಾಹನದಲ್ಲಿ ಇಬ್ಬರು ಶಿಕ್ಷಕರು, ಒಬ್ಬ ಗ್ರೂಪ್ ಡಿ ನೌಕರ, ಬಿಳಿ ಹಲಗೆ (ವೈಟ್ ಬೋರ್ಡ್), ಮಕ್ಕಳಸ್ನೇಹಿ ಚಿತ್ರಗಳ ಅಳವಡಿಕೆ, ಕುಡಿಯುವ ನೀರು ಸೇರಿ ಇನ್ನಿತರ ಮೂಲಸೌಲಭ್ಯಗಳು ಇರಲಿವೆ ಎಂದರು.

ಪ್ರಿಥಿಂಕಿಂಗ್ ಫೌಂಡೇಷನ್ ಸಂಸ್ಥೆ ಮತ್ತು ಬಿಬಿಎಂಪಿಯ ಸಹಭಾಗಿತ್ವದಲ್ಲಿ 'ಮಾಂಟೆಸ್ಸರಿ ಸ್ಕೂಲ್ ಆನ್ ವೀಲ್' ಅನ್ನು ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಮೇ 25ರಂದು ಪ್ರಾರಂಭಿಸಲಾಯಿತು. ಮಕ್ಕಳಿಗೆ ಮಾಂಟೆಸ್ಸರಿ ವಿಧಾನದಲ್ಲಿ ಬೋಧನೆ ಮಾಡಲು ಶಿಕ್ಷಕರಿಗೆ ತರಬೇತಿಯನ್ನು ಸಹ ನೀಡಲಾಗಿದೆ. ಬೆಂಗಳೂರಿನ ಕೊಳೆಗೇರಿಗಳಲ್ಲಿ ವಾಸಿಸುವ ಎರಡೂವರೆ ವರ್ಷದಿಂದ 6 ವರ್ಷದ ಅಂಗನವಾಡಿಯಲ್ಲಿರುವ ಮಕ್ಕಳ ಆರಂಭಿಕ ಕಲಿಕೆಯನ್ನು ಅವರ ಮನೆ ಬಾಗಿಲಿಗೆ ಕೊಂಡೊಯ್ಯುವ ಕಾರ್ಯಕ್ರಮ ಇದಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಡಾ. ರಾಮ್ ಪ್ರಸಾದ್ ಮನೋಹರ್, ಸಹಾಯಕ ಆಯುಕ್ತರಾದ ಉಮೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರಾದ ಉಷಾ, ಪ್ರಿಥಿಂಕಿಂಗ್ ಫೌಂಡೇಷನ್ ಸಂಸ್ಥೆಯ ಮುಖ್ಯಸ್ಥರಾದ ಸುನೋಜ್ ಫಿಲಿಪ್ ಉಪಸ್ಥಿತರಿದ್ದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಡಾ. ರಾಮ್ ಪ್ರಸಾದ್ ಮನೋಹರ್ ಅವರು ಸೋಮವಾರ 'ವಂಡರ್ ಆನ್ ವೀಲ್'ಗೆ ಚಾಲನೆ ನೀಡಿದರು

ಕೆಪಿಸಿಸಿ ಅಧ್ಯಕ್ಷ: ಅ.16ರಂದು ಚುನಾವಣೆ

ಪ್ರಜಾವಾಣಿ ವಾರ್ತೆ

ರಾಯಚೂರು: 'ಎಐಸಿಸಿ ವೇಳಾಪಟ್ಟಿಯಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ನೂತನ ಅಧ್ಯಕ್ಷರ ಆಯ್ಕೆಗೆ ಅ.16ರಂದು ಚುನಾವಣೆ ನಡೆಯಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

'ನಾನು ಅಧ್ಯಕ್ಷನಾಗಿ ಎರಡು ವರ್ಷದ ಅವಧಿ ಮುಗಿದಿದೆ. ಮತ್ತೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದು ಕೊನೆಯ ದಿನದಂದು ನಿರ್ಧಾರವಾಗಲಿದೆ' ಎಂದೂ ಸೋಮವಾರ ಪತ್ರಕರ್ತರೊಂದಿಗೆ ತಿಳಿಸಿದರು.

ಕಾಂಗ್ರೆಸ್ ಹಗರಣಗಳ ಬಯಲಿಗೆ ಎಳೆಯುತ್ತೇವೆ ಎಂಬ ಮುಖ್ಯಮಂತ್ರಿ ಅವರ ಹೇಳಿಕೆಗೆ ಅವರು, 'ಮೂರು ವರ್ಷಗಳಿಂದ ಬಿಜೆಪಿಯವರು ಹೇಳುತ್ತಿದ್ದಾರೆ. ಇದು ಸರ್ಕಾರದ ಕರ್ತವ್ಯ. ಇಂದಿನಿಂದಲೇ ಆ ಕೆಲಸ ಮಾಡಲಿ' ಎಂದರು.

'ನನ್ನ ಜೊತೆ ಸಿದ್ದರಾಮಯ್ಯ ಅವರ ಮೇಲೆ ಬಿಜೆಪಿಯವರಿಗೆ ಪ್ರೀತಿ ಜಾಸ್ತಿ. ಅದಕ್ಕೆ ನಮ್ಮ ವಿರುದ್ಧ ಆರೋಪಿಸುತ್ತಾರೆ. ಸಾಮಾಜಿಕ ಮಾಧ್ಯಮಗಳ ಮೂಲಕ ಬಿಜೆಪಿಯವರಿಗೆ ನಾವು ಪ್ರತಿದಿನ ಒಂದು ಪ್ರಶ್ನೆ ಕೇಳುತ್ತಿದ್ದೇವೆ. ಅದಕ್ಕೆ ಏಕೆ ಉತ್ತರಿಸುತ್ತಿಲ್ಲ ಎಂಬುದನ್ನು ಮಾಧ್ಯಮದವರೇ ಅವರನ್ನು ಕೇಳಬೇಕು' ಎಂದರು.

'ಅಕ್ಟೋಬರ್ 22 ಮತ್ತು 23ರಂದು ಭಾರತ್ ಜೋಡೊ ಪಾದಯಾತ್ರೆ ರಾಯಚೂರು ಜಿಲ್ಲೆಗೆ ಬರಲಿದೆ. ಈ ಭಾಗದ ಪಕ್ಷದ ನಾಯಕರು, ಶಾಸಕರು, ಕಾರ್ಯಕರ್ತರು ಪಾದಯಾತ್ರೆಯಲ್ಲಿ ಭಾಗವಹಿಸುವರು' ಎಂದರು.

ಬಳ್ಳಾರಿಯಲ್ಲಿ ಮಾತ್ರ ರಾಹುಲ್ ಸಭೆ

ಬಳ್ಳಾರಿ: ರಾಹುಲ್ ಗಾಂಧಿ ಭಾರತ್ ಜೋಡೊ ಯಾತ್ರೆ ಸಂದರ್ಭದಲ್ಲಿ ಉತ್ತರ ಕರ್ನಾಟಕದ ನಗರ ಬಳ್ಳಾರಿಯಲ್ಲಿ ಮಾತ್ರ ಬಹಿರಂಗ ಸಭೆ ಆಯೋಜಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ನಾಗಸಂದ್ರದ ವಿನಾಯಕನಗರ ಹಾಗೂ ವಿಕಾಸನಗರದಲ್ಲಿ ಶ್ರೀ ವಿನಾಯಕ ಗೆಳೆಯರ ಬಳಗದಿಂದ 18ನೇ ವರ್ಷದ ಗಣೇಶೋತ್ಸವ ನಿಮಿತ್ತ ಭಾನುವಾರ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಹಾಗೂ ಬಾಲಕಿಯರು ವಿಶೇಷ ರಂಗೋಲಿ ಹಾಕಿದರು

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಎದುರು ಸೋಮವಾರ ಬೆಳಿಗ್ಗೆ ಸೇರಿದ್ದ ರೈತ ಮಹಿಳೆಯರು, ಹಸಿರು ಶಾಲು ಬೀಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು – ಪ್ರಜಾವಾಣಿ ಚಿತ್ರ

ಕೃಷಿ ಕಾಯ್ದೆ ವಿರುದ್ಧ ಪ್ರತಿಭಟನೆ

ಬೆಂಗಳೂರು: 'ರೈತ ವಿರೋಧಿ ಆಗಿರುವ ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು' ಎಂದು ಆಗ್ರಹಿಸಿ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ರೈತರನ್ನು ಪೊಲೀಸರು ವಶಕ್ಕೆ ಪಡೆದು, ಕೆಲ ಗಂಟೆಗಳ ಬಳಿಕ ಬಿಡುಗಡೆಗೊಳಿಸಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಎರಡು ಪ್ರತ್ಯೇಕ ಬಣಗಳ ನೇತೃತ್ವದಲ್ಲಿ ರೈತರು ಪ್ರತಿಭಟನೆ ಹಮ್ಮಿಕೊಂಡಿದ್ದರು. ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಬೆಳಿಗ್ಗೆ ಬಂದಿದ್ದ ರೈತರು, ಹಸಿರು ಶಾಲುಗಳನ್ನು ಬೀಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಲು ಮುಂದಾದ ರೈತರು ಹಾಗೂ ಮುಖಂಡರನ್ನು ತಡೆದ ಪೊಲೀಸರು, 'ಮೆರವಣಿಗೆಗೆ ಅನುಮತಿ ಇಲ್ಲ. ವಾಪಸು ಹೋಗಿ' ಎಂದು ಕೋರಿದರು. ಇದಕ್ಕೆ ಒಪ್ಪದ ಪ್ರತಿಭಟನಕಾರರು, ಮೆರವಣಿಗೆ ಮುಂದುವರಿಸಿದರು. ಇದೇ ಸಂದರ್ಭದಲ್ಲೇ ಪೊಲೀಸರು, ಎರಡೂ ಬಣಗಳ 300ಕ್ಕೂ ಹೆಚ್ಚು ರೈತರನ್ನು ವಶಕ್ಕೆ ಪಡೆದರು.

ಉದ್ಯಾನದಲ್ಲಿ ಪ್ರತಿಭಟನೆ: ಸ್ವಾತಂತ್ರ್ಯ ಉದ್ಯಾನದಲ್ಲಿ ಮಧ್ಯಾಹ್ನ ಸೇರಿದ್ದ ರೈತರು, ಕೆಲ ಗಂಟೆ ಪ್ರತಿಭಟನೆ ಸಹ ನಡೆಸಿದ್ದರು. ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, ರೈತರಿಂದ ಮನವಿ ಸ್ವೀಕರಿಸಿದರು. 'ಬೇಡಿಕೆ ಈಡೇರಿಕೆ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

2 ಸಂಸ್ಥೆ ಮೇಲೆ ದಾಳಿ: 8 ಮಂದಿ ವಶಕ್ಕೆ

ಕೋಲಾರ: ಸಾರ್ವಜನಿಕರಿಂದ ಅನಧಿಕೃತವಾಗಿ ಕೋಟ್ಯಂತರ ರೂಪಾಯಿ ಠೇವಣಿ ಸಂಗ್ರಹಿಸಿರುವ ಆರೋಪದ ಮೇಲೆ 'ಖುಷಿ ಸಂಪದ' ಹಾಗೂ 'ಮಾಡರ್ನ್ ಸೋಲ್ಸ್' ಎಂಬ ಸಂಸ್ಥೆಗಳ ಮೇಲೆ ಪೊಲೀಸರು ಸೋಮವಾರ ನಗರದ ಮೂರು ಕಡೆ ದಾಳಿ ನಡೆಸಿ ಒಟ್ಟು ಎಂಟು ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಕೋಲಾರ – ಮುಳಬಾಗಿಲು ರಾಷ್ಟ್ರೀಯ ಹೆದ್ದಾರಿ ಪಕ್ಕದ ಚೌಡೇಶ್ವರಿ ನಗರದಲ್ಲಿನ 'ಖುಷಿ ಸಂಪದ' ಎಂಬ ಹೆಸರಿನ ಸಂಸ್ಥೆಯ ಕಚೇರಿ, ನಗರದ ಮಹಾಲಕ್ಷ್ಮಿ ಬಡಾವಣೆ ಹಾಗೂ ಇಟಿಸಿಎಂ ವೃತ್ತದ ಬಳಿ ಇರುವ 'ಮಾಡರ್ನ್ ಸೋಲ್ಸ್' ತೆರೆದಿರುವ 'ಬ್ಯುಸಿನೆಸ್ ಟ್ರೇನಿಂಗ್ ಸೆಂಟರ್' ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ನೇತೃತ್ವದಲ್ಲಿ ದಾಳಿ ನಡೆದಿದೆ.

'ಖುಷಿ ಸಂಪದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ನಟರಾಜ್ ಬಿ.ಒಡೆಯರ್, ಮಧುಕಿರಣ್, ವರಲಕ್ಷ್ಮಿ ಸೇರಿದಂತೆ ಎಂಟು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಚಿಕ್ಕಬಳ್ಳಾಪುರ–562 101

ಅಲ್ಪಾವಧಿ ಟೆಂಡರ್ ಅಧಿಸೂಚನೆ

4702 ಪ್ರಧಾನ ಕಾಮಗಾರಿಗಳು ಕೆರೆಗಳ ಅಭಿವೃದ್ಧಿ ಯೋಜನೆ

... ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2, ಮತ್ತು 3 ನೇ ದರ್ಜೆ (ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ) ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 19/09/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 22/09/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/MIS-2575/2021–22/1375/2022–23 ದಿನಾಂಕ: 12.09.2022

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಚಿಕ್ಕನಾಯಕನಹಳ್ಳಿ ಗ್ರಾಮದ ಸರ್ವೆ ನಂ. 33/1 ರಲ್ಲಿನ 4 ಗುಂಟೆ ಸರ್ವೆ ನಂ. 33/2ರಲ್ಲಿ 00ಎಕರೆ–33ಗುಂಟೆ ಮತ್ತು ಸರ್ವೆ ನಂ. 33/3ರಲ್ಲಿ 01ಎಕರೆ–2ಗುಂಟೆ ಒಟ್ಟು 1ಎಕರೆ–39ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶದ ಕಟ್ಟಡ ನಕ್ಷೆ ಅನುಮೋದಿಸಲು **ಶ್ರೀ ಸಿ.ಆರ್. ವಿಶ್ವನಾಥ್, ಶ್ರೀ ಸಿ.ಆರ್. ವೇದಮೂರ್ತಿ, ಶ್ರೀ ಸಿ.ಆರ್. ಪುರುಷೋತ್ತಮ್ ಮತ್ತು ಶ್ರೀ ಸಿ.ಆರ್. ಲೋಕೇಶ್** ರವರ ಪರವಾಗಿ ಜಿಪಿಎದಾರರಾದ Mana Project Pvt. Ltd. ರವರು ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ವಿಭಾಗ ಪತ್ರದಲ್ಲಿ ಸರ್ವೆ ನಂ. 33ರಲ್ಲಿನ 4ಗುಂಟೆ ವಿಸ್ತೀರ್ಣದ ಜಮೀನನ್ನು ಸಮಾಧಿಗಳಿಗಾಗಿ ಬಿಟ್ಟಿರುತ್ತೇವೆ ಎಂದು ನಮೂದಾಗಿದ್ದು, "ಜಮೀನಿನಲ್ಲಿರುವ ಸಮಾಧಿಯ ಬಗ್ಗೆ ಯಾವುದೇ ರೀತಿಯಾದ ನಮ್ಮ ಕುಟುಂಬಸ್ಥರ ತಂಟೆ ತಕರಾರು ಮತ್ತು ಆಕ್ಷೇಪಣೆ ಇರುವುದಿಲ್ಲ ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ರೀತಿಯಾದ ತಂಟೆ ತಕರಾರು, ಆಕ್ಷೇಪಣೆ ಬಂದ ಪಕ್ಷದಲ್ಲಿ ನಾವೇ ಜವಾಬ್ದಾರರಾಗಿ ಬಗೆಹರಿಸಿಕೊಡುತ್ತೇವೆಂದು" ಜಮೀನಿನ ಮಾಲೀಕರು ಸಹಿ ಮಾಡಿ ನೋಟರೀಕರಿಸಿದ ಪ್ರಮಾಣ ಪತ್ರವನ್ನು ಜಿ.ಪಿ.ಎ.ದಾರರು ಸಲ್ಲಿಸಿರುತ್ತಾರೆ. ಆದುದರಿಂದ ಚಿಕ್ಕನಾಯಕನಹಳ್ಳಿ ಗ್ರಾಮದ ಸರ್ವೆ ನಂ. 33/1 ರಲ್ಲಿನ 4ಗುಂಟೆ ವಿಭಾಗ ಪತ್ರದಲ್ಲಿ ಸಮಾಧಿಗಾಗಿ ಬಿಟ್ಟ ಜಮೀನು ಮತ್ತು ಸರ್ವೆ ನಂ. 33/2ರಲ್ಲಿ 00ಎಕರೆ–33ಗುಂಟೆ ಮತ್ತು ಸರ್ವೆ ನಂ. 33/3ರಲ್ಲಿ 01ಎಕರೆ–2ಗುಂಟೆ ಒಟ್ಟು 1ಎಕರೆ–39ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶದ ಕಟ್ಟಡ ನಕ್ಷೆ ಅನುಮೋದಿಸಲು ಸಂಬಂಧಪಟ್ಟ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ ದಿನಾಂಕದಿಂದ **7 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರವರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 7 ದಿವಸಗಳ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

BDA/PRO/CLU/95/2022-23

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿ–ಇ–296–ಬಿಎಡಬ್ಲ್ಯು–ಹೆಚ್‌ಎಎಸ್–01ಬಿ ದಿನಾಂಕ : 05–09–2022 (ಮರು–ಟೆಂಡರ್)

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ, ಬೆಂಗಳೂರು ವಿಭಾಗದ ರೈಲ್ವೆ ವಿದ್ಯುದೀಕರಣ ಕಾಮಗಾರಿಯ ಚಿಕ್ಕಬಾಣಾವರ – ಹಾಸನ ಸೆಕ್ಷನ್ ನಡುವೆ ಜಿಆರ್–296ನ ಸಿದ್ದಾಪುರ, ಶ್ರವಣಬೆಳಗೊಳ ನಿಲ್ದಾಣಗಳಲ್ಲಿ 02 ಸಂಖ್ಯೆಗಳ ನಿಯಂತ್ರಣ ಕಟ್ಟಡದ ಉದ್ದೇಶಿತ ನಿರ್ಮಾಣ, ರೀಟೇನಿಂಗ್ ಗೋಡೆ, ಭೂಮಿ ಕಾಮಗಾರಿ, ನೀರು ಸರಬರಾಜು ವ್ಯವಸ್ಥೆ ಮತ್ತು ಇತರೆ ಪೂರಕ ಕಾಮಗಾರಿಗಳು. ಕಾಮಗಾರಿಯ ಪೂರ್ಣಗೊಳಿಸುವ ಅವಧಿ ಆರು ತಿಂಗಳು.	ರೂ. 2,72,71,381/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–09–2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ರೈಲ್ವೆ ವಿದ್ಯುದೀಕರಣ, ಬೆಂಗಳೂರು

ಪಿಯುಬಿ/352/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways | SWRRLY | SWRRLY

ನೈಋತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂ. ಬಿಇ–29–2022–23–ಓಟ–13, 14

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಓಟ ಸಂ.	ಕೆಲಸದ ಹೆಸರು	ಅಂದಾಜು ಮೌಲ್ಯ
13	ಕೃಷ್ಣರಾಜಪುರಂ ಶೆಡ್‌ನಲ್ಲಿ ವಿದ್ಯುತ್ ಲೋಕೋಮೋಟಿವ್‌ಗಳ ಹೋಮಿಂಗ್‌ಗಾಗಿ ಸೌಲಭ್ಯಗಳು ಮತ್ತು ಟೆಸ್ಟ್ ಸೆಟ್‌ಅಪ್ ಹಾಗೂ ನಂದಿ ರೈಲ್ವೆ ನಿಲ್ದಾಣದ ಬಳಿ ಲ್ಯಾಂಡ್‌ಸ್ಕೇಪಿಂಗ್‌ನೊಂದಿಗೆ ರೈಲ್ ಮ್ಯೂಸಿಯಂ, ಸಂಪರ್ಕ ರಸ್ತೆ, ಇತ್ಯಾದಿಗಳನ್ನು ಒದಗಿಸುವುದು – ವಿದ್ಯುತ್ ವ್ಯವಸ್ಥೆಗಳು.	ರೂ. 46,78,901/–
14	ದೇವನಗೊಂತಿ ಮತ್ತು ತ್ಯಾಕಲ್ ನಿಲ್ದಾಣಗಳಲ್ಲಿ ಎಸ್&ಟಿ ಗೇರ್‌ಗಳ ಹಳೆಯದಾದ ಇಂಟರ್‌ಲಾಕಿಂಗ್‌ನ್ನು ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್‌ಗೆ ಬದಲಿಸುವುದು – ವಿದ್ಯುತ್ ವ್ಯವಸ್ಥೆಗಳು.	ರೂ. 25,04,899/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–09–2022ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್, ಬೆಂಗಳೂರು

ಪಿಯುಬಿ/348/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways | SWRRLY | SWRRLY

ಆಕ್ಸಿಸ್ ಬ್ಯಾಂಕ್

ಸಾರ್ವಜನಿಕ ಸೂಚನೆ
ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟೀಸ್

ಸಾಲಗಾರರು ಹಾಗೂ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಈ ಮೂಲಕ ತಿಳಿಸುವುದೇನೆಂದರೇ ಕೆಳಗಿನ ಖಾತೆಗಳಲ್ಲಿನ ಚಿನ್ನಾಭರಣಗಳ ಒತ್ತೆಯ ಸಾರ್ವಜನಿಕ ಹರಾಜನ್ನು ಆಕ್ಸಿಸ್ ಬ್ಯಾಂಕ್ ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್‌**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರನ್ನು ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 23.09.2022 ರಂದು ಮಧ್ಯಾಹ್ನ 12:30 ಗಂಟೆಯಿಂದ ಮಧ್ಯಾಹ್ನ 3:30** ವರೆಗೆ ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರ ಮತ್ತು ಬಾಕಿ ಮೊತ್ತಗಳ ವಿವರಗಳು

ಕ್ರ. ಸಂ.	ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
1	ಬಿಡದಿ, ಬೆಂಗಳೂರು (ಕ)	XXXXXXXXXXX6443	ಹೇಮಂತ್ ಕುಮಾರ್.ಬಿ	206629	29-Jul-22	57.1	55
2	ಚಾಮರಾಜಪೇಟೆ, ಬೆಂಗಳೂರು (ಕ)	XXXXXXXXXXX6673	ಜಿ.ಮೊಹಮ್ಮದ್ ತನ್ವೀರ್	172688	18-Jul-22	57.6	54.2
3	ಹೊಸಕೋಟೆ, ಬೆಂಗಳೂರು (ಕ)	XXXXXXXXXXX8422	ವಿ.ಬಿ.ನರೇಂದ್ರ	56351.04	21-Apr-22	24.4	22
4	ಮಾರತಹಳ್ಳಿ, ಬೆಂಗಳೂರು (ಕ)	XXXXXXXXXXX4724	ನವೀನ್.ಎ	109266	20-Jun-22	38.2	33.5
5	ಮಾರತಹಳ್ಳಿ, ಬೆಂಗಳೂರು (ಕ)	XXXXXXXXXXX0634	ರೋಹಿತ್ ಮೆನಿನೋ ಫೆರ್ನಾಂಡಿಸ್	103051.3	20-Jun-22	34.2	32.8
6	ಸಂಜಯ್ ನಗರ, ಬೆಂಗಳೂರು (ಕ)	XXXXXXXXXXX9168	ಆರ್.ರಾಜೇಂದ್ರ	36121	28-Jul-22	15.3	13
7	ಯಲಹಂಕ, ಬೆಂಗಳೂರು (ಕ)	XXXXXXXXXXX4786	ಶಿವ ಶಂಕರ.ಸಿ.	112254.75	11-Aug-22	39.5	34
8	ಕನಕಪುರ (ಕ)	XXXXXXXXXXX4635	ನವೀನ್‌ಕುಮಾರ್.ಎಸ್	71901	29-Jul-22	24.5	20.7
9	ಚನ್ನಪಟ್ಟಣ (ಕ)	XXXXXXXXXXX5502	ಸಿ ಟಿ ಮಂಜುನಾಥ	34512	2-Aug-22	12.1	11.1

ಆಕ್ಸಿಸ್ ಬ್ಯಾಂಕ್. ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ.
ಹರಾಜು ಆನ್‌ಲೈನ್ https://gold.samil.in ನಲ್ಲಿ ದಿನಾಂಕ : 23.09.2022 ರಂದು ಮಧ್ಯಾಹ್ನ 12:30 ರಿಂದ 3:30ಕ್ಕೆ ನಡುವೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ https://gold.samil.in ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು | ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್.,

ಕೆನರಾ ಬ್ಯಾಂಕ್ / Canara Bank

ಪ್ರಾದೇಶಿಕ ಕಚೇರಿ, ಬೆಂಗಳೂರು ಸೆಂಟ್ರಲ್
ನಂ. 86, ಸ್ಪೆನ್ಸರ್‌ಟವರ್, ಎಂ. ಜಿ.ರಸ್ತೆ, ಬೆಂಗಳೂರು – 560 001.

ಲಾಕರ್‌ಗಳನ್ನು ಒಡೆದು ತೆರೆಯುವ ಕುರಿತಾದ ಸೂಚನೆ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇವರ ದಿನಾಂಕ 18.09.2021ರ ಸುತ್ತೋಲೆ ನಂ. RBI/2021-2022/86 DOR.LEG.REC/40/09.07.005/2021-22 ರ ಅನುಸಾರ ಆರ್‌ಬಿಐ ನೀಡಿರುವ ಮಾರ್ಗಸೂಚಿಗಳು ಮತ್ತು ನಿಗದಿಪಡಿಸಿದ ಕಾರ್ಯವಿಧಾನಗಳ ಪ್ರಕಾರ ಬಾಡಿಗೆ ಪಾವತಿಸದಿದ್ದಕ್ಕಾಗಿ ಈ ಕೆಳಗೆ ಸೂಚಿಸಿರುವ ಲಾಕರ್‌ಗಳನ್ನು ತೆರೆಯುವ ಬ್ಯಾಂಕ್‌ನ ಉದ್ದೇಶವನ್ನು ನಾವು ನಿಮಗೆ ಈ ಮೂಲಕ ತಿಳಿಸುತ್ತಿದ್ದೇವೆ. ಈ ಕೆಳಗೆ ಸೂಚಿಸಿರುವ ವ್ಯಕ್ತಿಗಳು ನಮ್ಮ ಶಾಖೆಗಳಿಂದ ಸುರಕ್ಷಿತ ಠೇವಣಿ ಲಾಕರ್‌ಗಳನ್ನು ಬಾಡಿಗೆಗೆ ಪಡೆದುಕೊಂಡಿದ್ದು, ಆದರೆ ಲಾಕರ್ ಒಪ್ಪಂದದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಿರುವುದಿಲ್ಲ. ಈ ಕಾರಣದಿಂದಾಗಿ ಲಾಕರ್‌ಗಳನ್ನು ಒಡೆದು ತೆರೆಯಲು ನಾವು ನಿರ್ಬಂದಿತರಾಗಿದ್ದೇವೆ. ಈ ಮೂಲಕ ಲಾಕರ್ ಬಾಡಿಗೆದಾರರಿಗೆ/ಕಾನೂನುಬದ್ಧ ವಾರಸುದಾರರಿಗೆ/ಕಾರ್ಯ ನಿರ್ವಾಹಕರುಗಳಿಗೆ/ ನಿರ್ವಾಹಕರುಗಳಿಗೆ ಸೂಚಿಸುವುದೇನೆಂದರೆ, ನೀವುಗಳು ಪರ್ಯಾಯ ವ್ಯವಸ್ಥೆಯನ್ನು ಮಾಡಲು ದಿನಾಂಕ **29.09.2022**ರಂದು ಅಥವಾ ಅದಕ್ಕೂ ಮೊದಲು ವ್ಯವಹಾರದ ಸಮಯದಲ್ಲಿ ಬ್ಯಾಂಕನ್ನು ಸಂಪರ್ಕಿಸಬೇಕು, ವಿಫಲರಾದಲ್ಲಿ **ದಿನಾಂಕ 30.09.2022ರಂದು** ಸದರಿ ಲಾಕರ್‌ಗಳನ್ನು ಒಡೆದು ತೆರೆಯಲು ನಾವು ನಿರ್ಬಂಧಿತರಾಗಿದ್ದೇವೆ ಮತ್ತು ಲಾಕರ್‌ನಲ್ಲಿರುವ ಸ್ವತ್ತುಗಳನ್ನು ಬಹಿರಂಗವಾಗಿ ಹರಾಜಿನ ಮೂಲಕ ಅಥವಾ ಖಾಸಗಿಯಾಗಿ ದಲ್ಲಾಳಿಗಳು, ಹರಾಜುದಾರರ ಮೂಲಕ ಮುಂದುವರಿದಂತೆ ಯಾವುದೇ ಸೂಚನೆಯನ್ನು ನೀಡದೆ ಮಾರಾಟ ಮಾಡಲಾಗುವುದು. ಮಾರಾಟದ ಆದಾಯವನ್ನು ವೆಚ್ಚಗಳು, ಬಾಡಿಗೆಗಳು, ಇತರ ಸಾಂದರ್ಭಿಕ ವೆಚ್ಚಗಳಿಗಾಗಿ ಬ್ಯಾಂಕಿಗೆ ಪಾವತಿಸಬೇಕಾದ ಮೊತ್ತಕ್ಕೆ ವಿನಿಯೋಗಿಸಲಾಗುವುದು. ಯಾವುದೇ ಹೆಚ್ಚುವರಿ ಇದ್ದರೆ ಅದನ್ನು ಲಾಕರ್ ಬಾಡಿಗೆದಾರರ ಹೆಸರಿನಲ್ಲಿ ಸಸ್ಪೆನ್ಸ್ ಖಾತೆಗೆ ಜಮಾ ಮಾಡಲಾಗುತ್ತದೆ. ಅದರ ಮೇಲೆ ಯಾವುದೇ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಆದಾಗ್ಯೂ, ಮಾರಾಟವು ಕೊರತೆಯನ್ನು ಉಂಟುಮಾಡಿದಲ್ಲಿ ಅಂತಹ ಕೊರತೆಯನ್ನು ಪಾವತಿಸುವುದು ಸಂಬಂಧಪಟ್ಟ ಲಾಕರ್ ಬಾಡಿಗೆದಾರನ ಜವಾಬ್ದಾರಿ.

ಕ್ರ. ಸಂ.	ಶಾಖೆ	ಲಾಕರ್ ನಂ.	ಗ್ರಾಹಕರ ಹೆಸರು	ವಿಳಾಸ	ಬಾಕಿ ಇರುವ ಬಾಡಿಗೆ
1	ಎನ್‌ಆರ್‌ಐ ಶಾಖೆ	123005356303	ಬಿ. ವಿ. ಅಗ್ಖಿಂ ಡಿಆರ್	ಪಿ.ಬಿ. ನಂ. 46091, ಇಟ್ಟಿಹಾದ್ ಮೆಡಿಕಲ್, ಹಮ್ದಾನ್ ಬೀದಿ, ಅಬುದಾಬಿ ಯುಎಇ.	2,360
2	ಎನ್‌ಆರ್‌ಐ ಶಾಖೆ	123005358467	ಹಿಜನ ಆನಂದ್ ಮೊಗೇರ ಮತ್ತು ಶಿರ್ಲಿ ಆನಂದ್	ಪಿ.ಒ. ಬಾಕ್ಸ್ 39455,ವೆಸ್ಟ್ ರಿಫಾ , ಬಹರೈನ್,ಕಿಂಗ್ಡಮ್ ಆಫ್ ಬಹರೈನ್,	2,360
3	ಇನ್ಫೆಂಟ್ರಿ ರಸ್ತೆ	04316010000322	ಅಬ್ದುಲ್ ಹಮೀದ್ ಜೆ.	41, ಮೀನಾಕ್ಷಿ ಕೊಯಿಲ್ ಸ್ಟ್ರೀಟ್, ಶಿವಾಜಿನಗರ, ಬೆಂಗಳೂರು – 560 051.	7,670
4	ಇನ್ಫೆಂಟ್ರಿ ರಸ್ತೆ	123006043684	ರವಿಶಂಕರ್ ಕೆ. ಎಂ.	3/1, ಹಳೆ ನಂ. 115/3, 5ನೇ ಮಾಡೆಲ್, ಬಸವನಗುಡಿ, ಬೆಂಗಳೂರು–04.	15,340
5	ಇನ್ಫೆಂಟ್ರಿ ರಸ್ತೆ	123005908054	ಫಾರೂಕ್ ಕಮುರ್ರುನ್ನಿ	ಪಿಬಿ ನಂ. 307 ಅಬುದಾಬಿ , ಯುಎಇ	24,780
6	ಗಾಂಧಿನಗರ	04006010001063	ನಾಗಮ್ಮ/ಗೀತಾ	ಕೋಂ. ಕೃಷ್ಣ ರೆಡ್ಡಿ, 292, 10ನೇ ಕ್ರಾಸ್, ವಿದ್ಯಾಪೀಠ ವಿಭಾಗ, ಚನ್ನಮ್ಮನಕೆರೆ ಅಚ್ಚುಕಟ್ಟು ಬೆಂಗಳೂರು	7,670
7	ಗಾಂಧಿನಗರ	04006010002910	ವಸಂತ್ ಕುಮಾರ್/ ನರಸಿಂಹ ಪೂಜಾರಿ	ನಂ. 207, ಸುಖ್‌ಸಾಗರ್ ಜ್ಯೂಸ್ ಹೌಸ್, ಬಳೆಪೇಟೆ ರಸ್ತೆ, ಬೆಂಗಳೂರು – 53.	7,670
8	ಗಾಂಧಿನಗರ	04006010002157	ಅನಿತಾ ಎಸ್	ನಂ. 42/6, ಪಾರಾಮೌಂಟ್ ರಾಘವೇಂದ್ರ , ಅಪಾರ್ಟ್‌ಮೆಂಟ್, ಟಿ–1–12 ಸಿ ಬ್ಲಾಕ್, ಕೊಂದಮ್‌ಹಳ್ಳಿ ಗೇಟ್, ಮಾರತ್‌ಹಳ್ಳಿ,	7,670
9	ಗಾಂಧಿನಗರ	04006010001140	ಕರ್ಜಗಿ ವೀರಪ್ಪಸಣ್ಣತಮ್ಮ	ಚೇರ್‌ಮೆನ್, ಫಾರ್ಮರ್ಸ್ ಕೊ–ಆಪರೇಟಿವ್ ಸ್ಪಿನ್ನಿಂಗ್ ಮಿಲ್, ರಾಣೆಬೆನ್ನೂರು	7,670
10	ಗಾಂಧಿನಗರ	04006010001117	ಖಂಡಟೆ ಓಂ ಪ್ರಕಾಶ್ ನಾರಾಯಣ್	ಪಿ.ಒ. ಬಾಕ್ಸ್ 2842, ದುಬೈ , ಯುಎಇ	7,670
11	ಗಾಂಧಿನಗರ	04006010001155	ಶ್ಯಾಂ ಸುಂದರ್ ನಿಜಾನಿ	46/ಸಿ, ಫೈರ್ ಫೀಲ್ಡ್ ಲೇಔಟ್, ಆರ್ ಸಿ ರಸ್ತೆ, ಬೆಂಗಳೂರು	7,670
12	ಗಾಂಧಿನಗರ	04006010001661	ಗಂಗೊಜಿ ರಾವ್ ಜೆ	ವೆಂಕೋಜಿ ರಾವ್, ಡೋರ್ ನಂ. 976, ಸಣ್ಣಕ್ಕಿ ಬಯಲು, ವೃಷಭಾವತಿ ನಗರ ಕಾಮಾಕ್ಷಿಪಾಳ್ಯ	7,670
13	ಗಾಂಧಿನಗರ	04006010001290	ಮುನಿರಾಜು ಎನ್	ನಂ.18, 1ನೇ ಅಡ್ಡರಸ್ತೆ, ಡಬ್ಬಲ್ ರಸ್ತೆ,	7,670
14	ಗಾಂಧಿನಗರ	04006010000766	ಲೀಲಾವತಿ ದಿವಾಕರ್	ನಂ. 19/1, 1ನೇ ಮಹಡಿ, ವೆಂಕಟಸ್ವಾಮಿ ನಾಯ್ಡು ರಸ್ತೆ ರಸ್ತೆ, ಟಸ್ಕರ್ ಟೌನ್	7,670
15	ಗಾಂಧಿನಗರ	0400601000732	ಪ್ರೇಮ್‌ಚಂದ್ ಎಸ್.	ನಂ.190, ನಗರತ್‌ಪೇಟ್, ಡಬ್ಬಲ್ ರಸ್ತೆ–53	7,670
16	ಗಾಂಧಿನಗರ	04006010000747	ಅಬ್ದುಲ್‌ಮಜೀದ್ ಶೇಕ್	C/O ಪೈಸ್ ವಾಟರ್ ಹೌಸ್ ಕೊ–ಆಪರ್ಸ್, ಸೂಟ್ 303, ಸಿಟಿ ಟವರ್ 2, ಪಿಒ ಬಾಕ್ಸ್ 11987	7,670
17	ಗಾಂಧಿನಗರ	04006010002200	ವಿ. ಪ್ರಭಾಕರ್	19/2, 6ನೇ ಮುಖ್ಯ ರಸ್ತೆ, ಗಾಂಧಿನಗರ	7,670
18	ಗಾಂಧಿನಗರ	04006010002253	ರಮಣಿಕ್‌ಲಾಲ್ ಆರ್. ಮೆಹ್ತಾ	ನಂ. 164, 'ಬಿ' ಸ್ಟ್ರೀಟ್, 6ನೇ ಅಡ್ಡರಸ್ತೆ, ಗಾಂಧಿನಗರ	7,670
19	ಗಾಂಧಿನಗರ	04006010002514	ವಿವೇಕಾನಂದ ಹೆಚ್.ಕೆ.	ನಂ. 10, ಕಾವ್ಯಾ 2ನೇ ಬಿ ಅಡ್ಡರಸ್ತೆ, ಅಜ್ಜಪ್ಪ ಬ್ಲಾಕ್, ದಿಣ್ಣೂರು, ಆರ್.ಟಿ. ನಗರ	7,670
20	ಗಾಂಧಿನಗರ	04006010002977	ಅನುಸೂಯ	63, 4ನೇ ಮುಖ್ಯ ರಸ್ತೆ, 2ನೇ ಘಟ್ಟ ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಂಜುನಾಥನಗರ	5,626
21	ಗಾಂಧಿನಗರ	0400601001550	ಕಸ್ತೂರಿ ದೀಕ್ಷಿತ್	ರಿಟೈರ್ಡ್ ಸರಕಾರಿ ಕಾಲೇಜ್ ರೀಡರ್, 68, ಜಯಲಕ್ಷ್ಮಿ ಲೇಔಟ್, ದೊಡ್ಡ ಬೊಮ್ಮಸಂದ್ರ, ವಿದ್ಯಾರಣ್ಯಪುರ	7,670
22	ಗಾಂಧಿನಗರ	04006010002123	ಶಾಂತಾ ಜೈನ್/ ಯಶವಂತ್	15 ವಿ.ಎಸ್. ಲೇನ್, ಚಿಕ್ಕಪೇಟೆ ಕ್ರಾಸ್ ಎ, ಬೆಂಗಳೂರು – 560 053.	7,670
23	ಗಾಂಧಿನಗರ	04006010001864	ಮುದ್ದುಕೃಷ್ಣ	ನಂ. 39, 2ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು – 9	7,670
24	ಗಾಂಧಿನಗರ	04006010002008	ಮಧು ಆರ್.	ಎಂಪ್ಲಾಯಿ ನಂ. 477745, ಸಬ್ ಸ್ಟಾಫ್, ಸಿಂಡಿಕೇಟ್ ಬ್ಯಾಂಕ್, ಗಾಂಧಿನಗರ	6,343
25	ಗಾಂಧಿನಗರ	04006010001956	ನೇಹಾ ಮನೋಹರ್	13/14, ರಾಮ ಕೃಪಾ, ಗಾಂಧಿನಗರ, ಬೆಂಗಳೂರು – 9	6,642

ದಿನಾಂಕ : 13.09.2022
ಸ್ಥಳ : ಬೆಂಗಳೂರು

ಸಹಿ/– ಹಿರಿಯ ಪ್ರಬಂಧಕರು
ಕೆನರಾ ಬ್ಯಾಂಕ್, ಪ್ರಾದೇಶಿಕ ಕಚೇರಿ, ಬೆಂಗಳೂರು ಕೇಂದ್ರ

ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ.,
Sree Subramanyeswara Co-operative Bank Ltd.,

ESTD:1971

(R.B.I. Licence No. UBD-KA 550 P)

ರಜತ ಭವನ, ನಂ.106, ಆರ್.ವಿ.ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004

Ph : 080-22422461/63, 26500879, Email: recovery@subcobank.com. Website: subcobank.com

ಸ್ಥಿರಾಸ್ತಿಯ ಟೆಂಡರ್–ಕಮ್ ಬಹಿರಂಗ ಹರಾಜು ನೋಟೀಸ್

ಸೆಕ್ಯುರಿಟೈಜೇಷನ್ಸ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ **ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟೀವ್ ಬ್ಯಾಂಕ್ ಲಿಮಿಟೆಡ್, ರಜತ ಭವನ, ನಂ.106, ಆರ್.ವಿ. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560 004** ಇವರಿಗೆ ಈ ಸಾಲಗಾರರಿಂದ ಬರಬೇಕಾದ ಸಾಲ ವಸೂಲಾತಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಾಸ್ತಿಯು **"ಎಲ್ಲಿ ಹೇಗಿದೆಯೋ ಹಾಗೆಯೇ"** ಮತ್ತು **"ಏನಿದೆಯೋ ಹಾಗಿನ ಆಧಾರದ"** ಮೇಲೆ ಹರಾಜು ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು	ಆಸ್ತಿಯ ವಿವರಣೆ	ಹರಾಜಿನ ದಿನಾಂಕ ಮತ್ತು ಸಮಯ ಮತ್ತು ಸ್ಥಳ	ಮೀಸಲು ಬೆಲೆ ಮತ್ತು ಇಎಂಡಿ ಮೊತ್ತ
ಶ್ರೀ ಮಂಜುನಾಥ ಪಿ ಎನ್ ಶ್ರೀಮತಿ ವೀಣಾ ಎನ್ ಮಂಜುನಾಥ್	ಶ್ರೀಮತಿ ವೀಣಾ ಮಂಜುನಾಥ್ ಅವರಿಗೆ ಸೇರಿದ ಪ್ರಸ್ತುತ ಬೆಂಗಳೂರು ಜೆ.ಪಿ.ನಗರ, ಡಾಲರ್ಸ್ ಲೇಔಟ್, 4ನೇ ಹಂತ, 4ನೇ ಮುಖ್ಯರಸ್ತೆ, ವಿಳಾಸದ ಬಿಬಿಎಂಪಿ ಆಡಳಿತದ ವ್ಯಾಪ್ತಿಗೆ ಒಳಪಡುವ ಬೆಂಗಳೂರಿನ ಕಾರ್ಪೋರೇಶನ್ ವಾರ್ಡ್ ನಂ. 177 (ಹಳೆಯ ವಾರ್ಡ್ ನಂ.57) ಪಿಐಡಿ ನಂ. 57–322–190ರಲ್ಲಿರುವ ಮುನಿಸಿಪಲ್ ನಂ. 190ರ (ಈ ಹಿಂದಿನ ಮುನಿಸಿಪಲ್ 190ರ ಸಂಯುಕ್ತ ಆಸ್ತಿಯ ಉತ್ತರ ಭಾಗ) ಬಿಡಿಎ ನಿವೇಶನ 190, ಜೆ.ಪಿ.ನಗರ ಲೇಔಟ್, 4ನೇ ಹಂತ, ಡಾಲರ್ಸ್ ಯೋಜನೆ ಪೂರ್ವದಿಂದ ಪಶ್ಚಿಮಕ್ಕೆ 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (49 ಅಡಿ 6 ಅಂಗುಲ + 32 ಅಡಿ 7 ಅಂಗುಲ)/2 ಅಳತೆಯ ಒಟ್ಟು ವಿಸ್ತೀರ್ಣ ಸುಮಾರು 2057 ಚದರ ಅಡಿಗಳಲ್ಲಿರುವ ಕಟ್ಟಡವೂ ಸೇರಿದ ಸಂಪೂರ್ಣ ಸ್ವತ್ತು. ಚೆಕ್ಕುಬಂದಿ : ಪೂರ್ವಕ್ಕೆ: ಬಿಡಿಎ ನಂ.191ರ ನಿವೇಶನ. ಪಶ್ಚಿಮಕ್ಕೆ: ರಸ್ತೆ. ಉತ್ತರಕ್ಕೆ: ರಸ್ತೆ. ದಕ್ಷಿಣಕ್ಕೆ : ಮುನಿಸಿಪಲ್ ನಂ.190/2 ಮತ್ತು 190/3ರ ಆಸ್ತಿ (ಬಿಡಿಎ ನಂ.190ರ ದಕ್ಷಿಣದ ಭಾಗ). **ಬರಬೇಕಾದ ಬಾಕಿ ಮೊತ್ತ : ರೂ.4,50,01,384.00 (ರೂಪಾಯಿ ನಾಲ್ಕು ಕೋಟಿ ಐವತ್ತು ಲಕ್ಷದ ಒಂದು ಸಾವಿರ ಮುನ್ನೂರ ಎಂಭತ್ತ ನಾಲ್ಕು ಮಾತ್ರ)** ಮತ್ತು **01.08.2022** ರಿಂದ ಬಡ್ಡಿ ಮತ್ತು ಇತರೆ ವೆಚ್ಚಗಳು.	ದಿನಾಂಕ: 17/10/2022 ಸೋಮವಾರ ಬೆಳಿಗ್ಗೆ : 11.00 ಕ್ಕೆ; ರಜತ ಭವನ, ನಂ.106, ಆರ್.ವಿ.ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–04.	ರೂ.4,60,00,000/–; ಇಎಂಡಿ : ರೂ.46,00,000/–

ಟೆಂಡರ್ – ಕಮ್ – ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳು:

(1) ಟೆಂಡರ್ ಫಾರ್ಮ್‌ಅನ್ನು ಪಡೆಯಲು ಕಛೇರಿ ಸಮಯದಲ್ಲಿ ಶ್ರೀ **ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ರಜತ ಭವನ, ನಂ.106, ಆರ್.ವಿ ರಸ್ತೆ, ವಿವಿ ಪುರಂ, ಬೆಂಗಳೂರು–560004 (ಫೋನ್ ನಂ.080–26622462, 22422461/63, 26500879, 990607365, 9449890085)** ಎಲ್ಲಾ ಕೆಲಸದ ದಿನಗಳಲ್ಲಿಮತ್ತು ಕಛೇರಿ ಸಮಯದಲ್ಲಿ ಸಂಪರ್ಕಿಸಿ. (2) ಉದ್ದೇಶಿತ ಬಿಡ್ದುದಾರರು ಟೆಂಡರ್ ಅರ್ಜಿ ನಮೂನೆಯನ್ನು ಮುಚ್ಚಿದ ಲಕೋಟೆ ಮೂಲಕ ಜೊತೆಗೆ ಮೀಸಲು ಬೆಲೆಯ 10% ಅನ್ನು ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್/ ಪೇ ಆರ್ಡರ್ ಮೂಲಕ ಶ್ರೀ **ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ರಜತ ಭವನ, ನಂ. 106, ಆರ್ ವಿ ರಸ್ತೆ, ವಿ ವಿ ಪುರಂ, ಬೆಂಗಳೂರು–560004** ಇವರ ಪರವಾಗಿ ಸಂದಾಯ ಮಾಡತಕ್ಕದ್ದು. ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್/ ಪೇ ಆರ್ಡರ್ ಅನ್ನು ಈ ಟೆಂಡರ್–ಕಮ್–ಹರಾಜು ಸೂಚನೆ ಪ್ರಕಟಣೆ ನಂತರ ಡ್ರಾ ಮಾಡುವುದು. (3) ಟೆಂಡರ್ ನಮೂನೆ ಅನುಸಾರವಿಲ್ಲದ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ. ಟೆಂಡರ್ ಜೊತೆಗೆ ಇಎಂಡಿಯನ್ನು ಶ್ರೀ **ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು** ಇವರಿಗೆ ಹರಾಜಿನ ದಿನಾಂಕದ ಒಂದು ದಿನ ಮುಂಚೆ ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಬೇಕು. ಟೆಂಡರ್ ಜೊತೆಗೆ ಇಎಂಡಿ ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು. (4) ಮೀಸಲು ಬೆಲೆಯ ಕಡಿಮೆ ಮೊತ್ತಕ್ಕೆ "ಸ್ಥಿರಾಸ್ತಿಯನ್ನು ಹರಾಜು ಮಾಡಲಾಗುವುದಿಲ್ಲ". (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮುಚ್ಚಿದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಗಳಮೂಲಕ ಲಭ್ಯವಿರುವ / ಹಾಜರಿರುವ ಬಿಡ್ದುದಾರರ ಸಮ್ಮುಖದಲ್ಲಿ ತೆರೆಯಲಾಗುವುದು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ದುದಾರರಿಗೆ ಅಧಿಕೃತ ಅಧಿಕಾರಿರವರ ವಿವೇಚನೆಯಂತೆ ಕೊಡುಗೆ ಬೆಲೆಯನ್ನು ಹೆಚ್ಚಿಸಲು ಅವಕಾಶಗಳನ್ನು ನೀಡಲಾಗುವುದು. (9) ಯಶಸ್ವಿ ಬಿಡ್ದುದಾರರು ಹರಾಜು ಮೊತ್ತದ 25%ಅನ್ನು (ಇಎಂಡಿ ಒಳಗೊಂಡಂತೆ) ಹರಜು ಪ್ರಕ್ರಿಯೆ ಮುಗಿದ ಕೂಡಲೇ, ಅದೇ ದಿನದಂದು ನೆಫ್ಟ್/ಆರ್‌ಟಿಜಿಎಸ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು ಮತ್ತು ಉಳಿದ ಮೊತ್ತವನ್ನು ಹರಾಜಿನ **15 ದಿನಗಳ ಒಳಗಾಗಿ** ಪಾವತಿಸತಕ್ಕದು. ಒಂದು ವೇಳೆ ಯಶಸ್ವಿ ಬಿಡ್ದುದಾರರು ಹಣ ಪಾವತಿಸುವಲ್ಲಿ ವಿಫಲರಾದಲ್ಲಿ ಠೇವಣಿ ಇಟ್ಟಿರುವ ಮೊತ್ತವನ್ನು ಯಾವುದೇ ಸೂಚನೆ ನೀಡದೇ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸ್ಥಿರಾಸ್ತಿಯನ್ನು ಮರು ಹರಾಜು ಮಾಡಲಾಗುವುದು. (10) ಅನ್ವಯಿಸುವ ನಿಯಮಗಳ ಅನುಸಾರ ಶಾಸನಬದ್ಧ ಬಾಕಿ ಮೊತ್ತಗಳು/ ತೆರಿಗೆಗಳು/ ಶುಲ್ಕಗಳು/ ಆಸ್ತಿ ತೆರಿಗೆಗಳು/ ಶುಲ್ಕಗಳು/ ನೀರಿನ ಶುಲ್ಕಗಳು/ ಸ್ಟ್ಯಾಂಪ್ ಡ್ಯೂಟಿ, ನೊಂದಣಿ ಶುಲ್ಕಗಳು ಇತ್ಯಾದಿಗಳಂತಹ ವರ್ಗಾವಣೆ ಶುಲ್ಕಗಳನ್ನು ಯಶಸ್ವಿ ಬಿಡ್ದುದಾರರೇ ಭರಿಸಬೇಕು. (11) ಅಧಿಕೃತ ಅಧಿಕಾರಿಯು ಯಾವುದೇ ಅಥವಾ ಎಲ್ಲಾ ಟೆಂಡರ್ ಅನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಅಥವಾ ಬಿಡ್/ ಕೊಡುಗೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ಹರಾಜು ಮಾರಾಟವನ್ನು ಮುಂದೂಡಲು / ರದ್ದುಗೊಳಿಸಲು ಮತ್ತು ಮಾರಾಟದ ಎಲ್ಲಾ ನಿಯಮಗಳು ಮತ್ತು ಷರತ್ತು ಮಾರ್ಪಾಡು ಮಾಡಲು ಸಂಪೂರ್ಣ ಹಕ್ಕುಗಳನ್ನು ಹೊಂದಿರುತ್ತಾರೆ. (12) ಹರಾಜು ಪ್ರಕ್ರಿಯೆಯು ಬ್ಯಾಂಕ್‌ನ ಅನುಮೋದನೆ ನಂತರ ಧೃಢೀಕರಣಗೊಳ್ಳುತ್ತದೆ. (13) ಉದ್ದೇಶಿತ ಬಿಡ್ದುದಾರರು **ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.00 ಗಂಟೆಯ** ಒಳಗೆ ಸ್ವಂತ ಖರ್ಚಿನಲ್ಲಿಯೇ ಮೇಲ್ಕಂಡ ಸ್ಥಿರಾಸ್ತಿಯ ವಿವರಗಳಲ್ಲಿರುವ ವಿಳಾಸದಲ್ಲಿ ಆಸ್ತಿಯ ಪರಿವೀಕ್ಷಣೆ ನಡೆಸಬಹುದು. (14) ಸ್ಥಿರಾಸ್ತಿಯನ್ನು **"ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗಿನ ಆಧಾರದಲ್ಲಿ"** ಹರಾಜು ನಡೆಸಲಾಗುವುದು. ಉದ್ದೇಶಿತ ಬಿಡ್ದುದಾರರು ಸ್ಥಿರಾಸ್ತಿಯ ಶೀರ್ಷಿಕೆ, ಮಾಲೀಕತ್ವ, ಶಾಸನಬದ್ಧ ಒಪ್ಪಂದಗಳು, ಋಣಭಾರಗಳು ಇತ್ಯಾದಿಗಳನ್ನು ತಾವೆ ಖುದ್ದಾಗಿ ಧೃಢೀಕರಿಸಿಕೊಳ್ಳಬೇಕು. (15) ಡಿಆರ್‌ಟಿ/ಡಿಆರ್‌ಎಟಿ/ಹೈಕೋರ್ಟ್ ಅಥವಾ ಇತರ ಯಾವುದೇ ನ್ಯಾಯಾಲಯದ ಮುಂದಿನ ಪ್ರಕ್ರಿಯೆಗಳಿಗೆ ತಡೆ ನೀಡಿದರೆ, ಹರಾಜನ್ನು ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಮಾರಾಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಅಂತಹ ಮುಂದೂಡಿಕೆ ಅಥವಾ ರದ್ದತಿಗಾಗಿ ಹಾನಿ, ಪರಿಹಾರ ಅಥವಾ ವೆಚ್ಚವನ್ನು ಕ್ಲೈಮ್ ಮಾಡುವ ಹಕ್ಕನ್ನು ಹೊಂದಿಲ್ಲ. (16) ತಮ್ಮ ಬಾಕಿಗಳನ್ನು ಪೂರ್ಣವಾಗಿ ಮರುಪಾವತಿಸದಿದ್ದರೆ, ಕಾಯಿದೆಯ ಪ್ರಕಾರ ಅನ್ವಯವಾಗುವ ಇತರ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸದಿದ್ದಲ್ಲಿ (ಸಾಲಗಾರರು/ಜಾಮೀನುದಾರರು/ ಅಡಮಾನದಾರರು) ಮೇಲೆ ಹೇಳಿದ ಸಾಲದ ಬಗ್ಗೆ ಸೂಚಿಸಲಾದ ದಿನಾಂಕದಂದು ಹರಾಜು ಮಾರಾಟವನ್ನು ನಡೆಸುವ ಬಗ್ಗೆ ಈ ಸೂಚನೆಯಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ರಜತ ಭವನ, ನಂ.106, ಆರ್.ವಿ ರಸ್ತೆ, ವಿ ವಿ ಪುರಂ, ಬೆಂಗಳೂರು–560004 ಮತ್ತು ಸ್ಥಿರಾಸ್ತಿಯ ವಿವರ ಮತ್ತು ಪರಿವೀಕ್ಷಣೆಗಾಗಿ ಸಂಪರ್ಕಿಸಿ: (ಫೋನ್ ನಂ. 080–26622462, 22422461/63, 26500879, 990607365, 9449890085).

ದಿನಾಂಕ: 09.09.2022
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿಗಳು
ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟೀವ್ ಬ್ಯಾಂಕ್ ಲಿ.,

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 25 ಯುಬಿಎಲ್ 2022–23
ದಿನಾಂಕ : 06–09–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಹುಬ್ಬಳ್ಳಿಯಲ್ಲಿ ವಿಪತ್ತು ನಿರ್ವಹಣಾ ಮೂಲಸೌಕರ್ಯಗಳ ಅಭಿವೃದ್ಧಿ. **ಸಬ್‌ವರ್ಕ್ 1 :** ಹುಬ್ಬಳ್ಳಿಯಲ್ಲಿ ವಿಪತ್ತು ನಿರ್ವಹಣಾ ಮೂಲಸೌಕರ್ಯಗಳ ಅಭಿವೃದ್ಧಿ (ಕವರ್ಡ್ ಶೆಡ್, ಪಾಥ್‌ವೇ, ಸೇವಾ ಕಟ್ಟಡ, ಸಂಪರ್ಕ ರಸ್ತೆ, ಪ್ರೋಪಿಂಗ್ ಬೇಸ್). **ಸಬ್‌ವರ್ಕ್ 2 :** ಹುಬ್ಬಳ್ಳಿಯಲ್ಲಿ ವಿಪತ್ತು ನಿರ್ವಹಣಾ ಮೂಲಸೌಕರ್ಯಗಳ ಅಭಿವೃದ್ಧಿ (ಪಿ.ವೇ ಪೋರ್ಷನ್)	ರೂ. 3,16,66,304.56
2	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಕ್ರಮಬದ್ಧವಾದ ಹೊಸ ಸ್ವಿಚ್ ರೂಮ್ ನಿರ್ಮಾಣದಿಂದ ಹುಬ್ಬಳ್ಳಿಯ ಗದಗ ರಸ್ತೆ ಉಪನಿಲ್ದಾಣಕ್ಕೆ ಅಭಿವೃದ್ಧಿ ಮತ್ತು ಉಪನಿಲ್ದಾಣದ ಸಾಮರ್ಥ್ಯದ ಉನ್ನತೀಕರಣ.	ರೂ. 95,63,203/–
3	ಹುಬ್ಬಳ್ಳಿ ವಿಭಾಗ : **ಸಬ್‌ವರ್ಕ್ 1 :** ಹುಬ್ಬಳ್ಳಿ ಯಾರ್ಡ್‌ನಲ್ಲಿ ಟ್ರೈನ್ ಲೈಟ್ನಿಂಗ್ ಡಿಪೋ, ಎಸಿ, ಎಲ್‌ಟಿ ಸಿಬ್ಬಂದಿ ಕೊಠಡಿ, ರೇಕ್ ನಿರ್ವಹಣಾ ಕೊಠಡಿ, ಸಿ&ಡಬ್ಲ್ಯು ಸಿಬ್ಬಂದಿ ಕೊಠಡಿ, ಮೆಷೀನ್ ಕೊಠಡಿ, ಬ್ಯಾಟರಿ ಚಾರ್ಜರ್ ಕೊಠಡಿ, ಟೂಲ್ಸ್ ಕೊಠಡಿ, ಡಿಎಂ ಪ್ಲಾಂಟ್ ಕೊಠಡಿ, ಕ್ಯಾರಿಯೇಜ್ ಸ್ಟೋರ್ಸ್ ಕೊಠಡಿ, ಐಒಹೆಚ್ ಶೆಡ್‌ಗೆ ಸುಧಾರಣೆ. **ಸಬ್‌ವರ್ಕ್ 2 :** ಹುಬ್ಬಳ್ಳಿ – ಜಿಎಸ್‌ಡಿಯಲ್ಲಿ ವೇರ್‌ಹೌಸ್‌ಗಳಲ್ಲಿನ ಕಛೇರಿಗಳ ಹಾಲಿ ಸೆಟ್‌ಅಪ್‌ಗೆ ರಿಪೇರಿಗಳು.	ರೂ. 56,52,829/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03–10–2022ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಹುಬ್ಬಳ್ಳಿ

ಪಿಯುಬಿ/349/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/71/2022
ದಿನಾಂಕ : 07–09–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಅರಸೀಕೆರೆ – ತುಮಕೂರು ಸೆಕ್ಷನ್ – ಉಳಿದಿರುವ ಪ್ಲಾಟ್‌ಫಾರಂಗಳು, ಪ್ಲಾಟ್‌ಫಾರಂ ಶೆಲ್ಟರ್‌ಗಳು, ಪಾದಚಾರಿ ಮೇಲ್ಸೇತುವೆಗಳು, ನಿಲ್ದಾಣ ಕಟ್ಟಡ ಎಸ್‌ಎಸ್‌ಇ/ಪಿ.ವೇ ಕಛೇರಿ ಮತ್ತು ಇತರ ಪ್ರಯಾಣಿಕ ಸೌಲಭ್ಯಗಳ ಕಾಮಗಾರಿಗಳು ಇತ್ಯಾದಿ. **(ಟೆಂಡರ್ ಉಲ್ಲೇಖ ಸಂ.ಎಸ್‌ಕೆ–ಟಿಕೆ–42ಆರ್)**	ರೂ. 38,92,99,635/–
2	ಗದಗ – ಹೊಟಗಿ ಡಬ್ಲಿಂಗ್ ಯೋಜನೆ : ಬಾಗಲಕೋಟೆ (ಬಾಗಲಕೋಟೆ ಯಾರ್ಡ್ ಹೊರತುಪಡಿಸಿ) ಜದ್ರಮಕುಂಟೆ ಯಾರ್ಡ್‌ವರೆಗೆ ನಡುವೆ ಕಿ.ಮೀ.94/600 ರಿಂದ 114/600ವರೆಗೆ ಟ್ರ್ಯಾಕ್ ಸಂಪರ್ಕಿಸುವುದು. **(ಟೆಂಡರ್ ಉಲ್ಲೇಖ ಸಂ. : ಹೆಚ್‌ಐಜಿಎ–89)**	ರೂ. 10,25,76,295/–
3	ಗದಗ – ಹೊಟಗಿ ಡಬ್ಲಿಂಗ್ ಯೋಜನೆ : ವಿಜಯಪುರ ಯಾರ್ಡ್‌ನಲ್ಲಿ ಟ್ರ್ಯಾಕ್ ಸಂಪರ್ಕಿಸುವುದು ಮತ್ತು ಹಾಕುವ ಕಾಮಗಾರಿ. **(ಟೆಂಡರ್ ಉಲ್ಲೇಖ ಸಂ. ಹೆಚ್‌ಐಜಿಎ–87)**	ರೂ. 3,96,51,419/–
4	ಲಿಂಕೆನ್ ಹೊಫ್‌ಮನ್ ಬುಷ್ (ಎಲ್‌ಹೆಚ್‌ಬಿ) ಕೋಚ್ ನಿಯತಕಾಲಿಕ ಸಂಪೂರ್ಣ ಪರೀಕ್ಷಾ ಸೌಲಭ್ಯ : ಹುಬ್ಬಳ್ಳಿಯ ಕಾರ್ಯಾಗಾರದಲ್ಲಿ ಕಟ್ಟಡ ವಾಸ್ತುಶಿಲ್ಪದ ಉನ್ನತೀಕರಣ ಮತ್ತು ಫೇಸ್ ಲಿಫ್ಟಿಂಗ್ ಕಾಮಗಾರಿಗಳು. **(ಟೆಂಡರ್ ಉಲ್ಲೇಖ ಸಂ.ಯುಬಿಎಲ್–ಪಿಒಹೆಚ್–03)**	ರೂ. 1,54,70,053/–
5	ಹುಬ್ಬಳ್ಳಿಯಲ್ಲಿ ಹಳೆಯ ಜಿಎಂ ಕಟ್ಟಡದ ಅಂದರೆ, ಸಿಇ–1, 2, 3 ಕಛೇರಿಗಳ ನಿರ್ಮಾಣ ಘಟಕ, ವೈದ್ಯಕೀಯ ವಿಭಾಗ, ಲೆಕ್ಕಪತ್ರ ವಿಭಾಗ ಮತ್ತು ಉಪ ಸಿಇ–ವಿ ಕಛೇರಿಯೊಂದಿಗೆ ತೋಟವನ್ನು ಒಳಗೊಂಡು ಆರ್‌ಆರ್‌ಸಿ ವಿಭಾಗ, ಸರ್ಕ್ಯುಲೇಟಿಂಗ್ ಪ್ರದೇಶ ಮತ್ತು ಪಾರ್ಕಿಂಗ್ ಪ್ರದೇಶದ ನಿರ್ವಹಣಾ ಕಾಮಗಾರಿಗಳು. **(ಟೆಂಡರ್ ಉಲ್ಲೇಖ ಸಂ. ಕೆಂಯುಡಿ–ಹೆಚ್‌ಜಿ–ಜಿಎಂಬಿಎಲ್‌ಡಿ–04)**	ರೂ. 64,57,412/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28–09–2022ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ, ಬೆಂಗಳೂರು ದಂಡು

ಪಿಯುಬಿ/350/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways | SWRRLY | SWRRLY

ಯಲಹಂಕ: ರಾಜಕಾಲುವೆ ಒತ್ತುವರಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಜಲಾವೃತದ ಭೀತಿ

ಪ್ರವಾಹದ ಭೀತಿ...ಎಚ್ಚರಿಕೆ ನಿರ್ಲಕ್ಷ್ಯ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿಯ ಯಲಹಂಕ ವಲಯದಲ್ಲಿ ರಾಜಕಾಲುವೆಗಳ ಒತ್ತುವರಿಯಿಂದ ಪ್ರವಾಹ ಉಂಟಾಗಬಹುದು. ಈ ಪ್ರದೇಶಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ತುರ್ತಾಗಿ ತೆಗೆದುಕೊಳ್ಳಬೇಕು...

ಹೀಗೆಂದು ಬಿಬಿಎಂಪಿಯ ಯಲಹಂಕ ವಲಯದ ಎಂಜಿನಿಯರ್‌ಗಳೇ ವರದಿ ನೀಡಿದ್ದಾರೆ. ಈ ಮಾಹಿತಿಯನ್ನು ಒತ್ತುವರಿಯ ವಿವರಗಳೊಂದಿಗೆ ನೀಡಿ ತಿಂಗಳುಗಳೇ ಕಳೆದರೂ ಯಾವ ಕ್ರಮವನ್ನೂ ಸಂಬಂಧಪಟ್ಟ ಇಲಾಖೆ ಕೈಗೊಂಡಿಲ್ಲ. ಮುಖ್ಯ ಆಯುಕ್ತರಿಗೆ ಈ ವರದಿಯನ್ನು ಸಲ್ಲಿಸಲಾಗಿದ್ದರೂ ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆಗೆ ಇನ್ನೂ ಆದೇಶ ನೀಡಿಲ್ಲ. ತುರ್ತಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗೂ ಇಂತಹ ವಿಳಂಬ ಅಥವಾ ನಿರ್ಲಕ್ಷ್ಯ ವಹಿಸಿರುವ ಬಗ್ಗೆ ಬಿಬಿಎಂಪಿ ಅಧಿಕಾರಿಗಳೇ ಅಸಮಾಧಾನ ವ್ಯಕ್ತಪಡಿಸುತ್ತಾರೆ. ನೀರೆಲ್ಲ ಬಡಾವಣೆಗಳಿಗೆ ಹರಿದು, ಜನ ಸಂಕಷ್ಟಕ್ಕೆ ಒಳಗಾದಾಗ ಮಾತ್ರ ಇವರು ಎಚ್ಚೆತ್ತುಕೊಳ್ಳುತ್ತಾರೆ ಎಂದು ಆಕ್ರೋಶಪಟ್ಟರು.

ಬಿಬಿಎಂಪಿ ವರದಿಯಲ್ಲಿ 96 ಪ್ರಕರಣಗಳಲ್ಲಿ ಮಾತ್ರ ರಾಜಕಾಲುವೆ ಒತ್ತುವರಿ ತೆರವಾಗಿಲ್ಲ ಎಂದು ಹೇಳಲಾಗಿದ್ದರೂ, ವಾಸ್ತವದಲ್ಲಿ ಒತ್ತುವರಿ ಅತಿ ಹೆಚ್ಚಾಗಿರುವುದು ಯಲಹಂಕ ವಲಯದಲ್ಲೇ. ಕೃಷಿ ಭೂಮಿಗಳಲ್ಲಿ ಸೂಚಿಸಲಾಗಿರುವ ಖರಾಬು ಜಾಗ ಸಂಪೂರ್ಣ ಒತ್ತುವರಿಯಾಗಿದೆ. ಈ ಬಗ್ಗೆ ಕೂಲಂಕಷ ತನಿಖೆ ಆಗಲೇಬೇಕಿದೆ. ಯಲಹಂಕ ವಲಯದಲ್ಲೂ ಕ್ಷಿಪ್ರಗತಿಯ ಅಭಿವೃದ್ಧಿ ಕಾಮಗಾರಿಗಳು, ಬೃಹತ್ ಕಟ್ಟಡಗಳು ಬರುತ್ತಿವೆ. ಒತ್ತುವರಿಯಲ್ಲಿ ಯಾರೂ ಹಿಂದೆ ಉಳಿದಿಲ್ಲ. ಮುಂದೆ ಸಮಸ್ಯೆ ಉಂಟಾಗಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲು ಕಷ್ಟವಾದಾಗ ವಾಸ್ತವ ಬೆಳಕಿಗೆ ಬರುತ್ತದೆ ಎಂದು ಸ್ಥಳೀಯರು ಎಚ್ಚರಿಸುತ್ತಿದ್ದಾರೆ.

ಯಲಹಂಕ ವಲಯಲ್ಲಿ ಯಲಹಂಕ ಸೇರಿ ಜಕ್ಕೂರು, ಅಲ್ಲಾಳಸಂದ್ರ, ಕೋಗಿಲು, ಅಟ್ಟೂರು, ಸಿಂಗಾಪುರ, ದೊಡ್ಡಬೊಮ್ಮಸಂದ್ರ, ಹೆಬ್ಬಾಳ, ನವನಗರ, ರಾಚೇನಹಳ್ಳಿ ಎಂಬ ದೊಡ್ಡ ಕೆರೆಗಳು ಸೇರಿ 30 ಕೆರೆಗಳಿವೆ. ಬಿಬಿಎಂಪಿ ಪಟ್ಟಿ ಮಾಡಿರುವಂತೆಯೇ ಈ ವಲಯದಲ್ಲಿ ಆದರೆ ಕೆರೆಯಿಂದ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಗಳು ಇಲ್ಲಿ ಮಾಯವಾಗಿವೆ ಎಂಬುದು ಸಿದ್ಧಪಡಿಸಿರುವ ನಕ್ಷೆಯಿಂದ ಸಾಬೀತಾಗುತ್ತಿದೆ. ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂಬ ಎಚ್ಚರಿಕೆಯನ್ನೂ ನಿರ್ಲಕ್ಷಿಸಲಾಗಿದೆ.

'ಬಿಬಿಎಂಪಿಯ ರಾಜಕಾಲುವೆ ವಿಭಾಗಕ್ಕೆ ಕೋಟ್ಯಂತರ ಹಣ ನೀಡಲಾಗಿದ್ದರೂ ಕೆಲಸ ಮಾತ್ರ ಎಲ್ಲೂ ಆಗಿಲ್ಲ, ಬಿಲ್ ಅಷ್ಟೆ ಆಗಿದೆ. ರಾಜಕಾಲುವೆ ಒತ್ತುವರಿ ತೆರವಾಗಿಲ್ಲದ ಮೇಲೆ ಹಣ ಹೇಗೆ ಬಿಡುಗಡೆ ಮಾಡಲಾಯಿತು ಎಂಬುದಕ್ಕೆ ಜನಪ್ರತಿನಿಧಿಗಳು ಸೇರಿ ಅಧಿಕಾರಿಗಳು ಉತ್ತರ ನೀಡಬೇಕಿದೆ. ಇನ್ನು ಕೆರೆಗಳ ಒತ್ತುವರಿಯಂತೂ ಈಗಲೂ ಆಗುತ್ತಿದೆ. ಕೇಳುವವರೇ ಇಲ್ಲದಂತಾಗಿದೆ. ತುರ್ತು ಕ್ರಮ ಅಗತ್ಯ' ಎಂದು ಯಲಹಂಕ ನಿವಾಸಿ ವಿಶ್ವನಾಥ್ ಆಗ್ರಹಿಸಿದರು.

ವಿಧಾನಸಭೆ ಕ್ಷೇತ್ರ

• ಯಲಹಂಕ 8 ಎಕರೆ 17 ಗುಂಟೆ

• ಬ್ಯಾಟರಾಯನಪುರ 5 ಎಕರೆ 28 ಗುಂಟೆ



ಕಾಲುವೆಗಳಿಗೆ ಸಿಮೆಂಟ್

ಯಲಹಂಕ ವಲಯದಲ್ಲಿ ಕೆರೆ ಒತ್ತುವರಿಯೂ ನಡೆದಿದೆ. 20 ವರ್ಷಗಳ ಹಿಂದೆ ಇದ್ದ ಕೆರೆಗಳ ಒಟ್ಟಾರೆ ವಿಸ್ತೀರ್ಣ ಕಡಿಮೆಯಾಗಿದೆ. ಭೂಮಾಲೀಕರು ಮತ್ತು ರಾಜಕಾರಣಿಗಳು ಕಂದಾಯ ಇಲಾಖೆ ನೆರವಿನಿಂದ ಕೆರೆಗಳನ್ನು ನುಂಗುತ್ತಾ ಬಂದಿದ್ದಾರೆ. ಕೆಲವು ಸ್ವಘೋಷಿತ ನಾಯಕರು ಕೆರೆ ಅಂಗಳದಲ್ಲಿ ಪೂಜಾ ಮಂದಿರ ನಿರ್ಮಿಸಿದ್ದಾರೆ. ನಿವೇಶನ ನೀಡಲು ಕಾಯ್ದೆಬದ್ಧವಾಗಿ ಸ್ಥಾಪಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂಗಳ್ಳರಿಗೆ ಹಾಗೂ ರಾಜಕಾರಣಿಗಳಿಗೆ ಯೋಜನಾರಹಿತ ಬಡಾವಣೆ ನಿರ್ಮಿಸಲು ನೆರವಾಗಿದೆ. ಮಳೆನೀರು ಹರಿದುಹೋಗಲು ಇದ್ದ ಕಾಲುವೆಗಳು ಅದೃಶ್ಯವಾಗಿವೆ. ಅದರ ಮೇಲೆ ಕಟ್ಟಡ ಇದ್ದರೆ, ಕೆಲವೆಡೆ ಅದರ ಮೇಲೆ ಚಪ್ಪಡಿ ಹಾಸಿ ಸಿಮೆಂಟಿನಿಂದ ಮುಚ್ಚಲಾಗಿದೆ. ಮಹಮದ್ ಸಾಬ್ ಪಾಳ್ಯದಲ್ಲಿ ಎಲ್ಲಾ ರೀತಿಯ ನೀರು (ಸ್ನಾನ, ಅಡಿಗೆ) ಮಳೆನೀರಿನ ಕಾಲುವೆಗೆ ಸೇರುತ್ತದೆ. ಅದು ನೇರವಾಗಿ ವಿದ್ಯಾರಣ್ಯಪುರದ ನರಸೀಪುರ ಕೆರೆಗೆ ಬಂದು ಸೇರಿ, ಕೆರೆ ಯಾವಾಗಲೂ ಕೊಚ್ಚೆ ನೀರಿನಿಂದ ಕೂಡಿರುತ್ತದೆ. ಮಹಮದ್ ಸಾಬ್ ಪಾಳ್ಯದಿಂದ ಹರಿವ ಕೊಳಚೆ ನೀರಿನಲ್ಲಿ ಕೆಲವು ಸಲ ಪ್ರಾಣಿಗಳ ರಕ್ತ, ಮಾಂಸ, ಮೂಳೆಗಳನ್ನೂ ಕಾಣಬಹುದು ಎಂದು ವಿದ್ಯಾರಣ್ಯಪುರದ ಎಚ್.ಗೋಪಾಲಕೃಷ್ಣ ಅಸಮಾಧಾನ ವ್ಯಕ್ತಪಡಿಸಿದರು.

ಕೆರೆ-ರಾಜಕಾಲುವೆಗಳಿಗೆ ಸಂಪರ್ಕವಿಲ್ಲ

ಇತ್ತೀಚಿನ ದಿನಗಳಲ್ಲಿ ರಾಜಕಾಲುವೆಗಳ ಒತ್ತುವರಿ ಜೊತೆಗೆ ಅದರ ಅಗಲವನ್ನೇ ಕಡಿಮೆ ಮಾಡಲಾಗಿದೆ. ನಗರದಲ್ಲಿ ಮೂಲಸೌಕರ್ಯದ ಕೊರತೆ ಇರುವ ಸಮಯದಲ್ಲಿ ಮಳೆ ನೀರು ಹಾಗೂ ಒಳಚರಂಡಿ ನೀರು ಸೇರಿಕೊಳ್ಳುವುದನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಅಗತ್ಯ ನಿಯಮಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸುವಲ್ಲಿಯೂ ಆಡಳಿತ ವಿಫಲವಾಗಿದೆ. ರಾಜಕಾಲುವೆಗಳ ಒತ್ತುವರಿಯನ್ನು ಗುರುತಿಸಿದ್ದರೂ ಬಿಬಿಎಂಪಿ ಕೆಲವನ್ನು ಮಾತ್ರ ತೆರವು ಮಾಡಿದೆ. ಹೀಗಾಗಿ ರಾಜಕಾಲುವೆಗಳ ಒತ್ತುವರಿಯಿಂದ ಮಳೆನೀರು ಹರಿಯಲು ಸ್ಥಳವಿಲ್ಲದಂತಾಗಿದೆ. ಕೆರೆಯಿಂದ ಕೆರೆಗೆ ಸಂಪರ್ಕ ಕಡಿತವಾಗಿದೆ ಎಂದು ಜಲಮಿತ್ರದ ಟ್ರಸ್ಟಿ ಹಾಗೂ ಪರಿಸರ ವಿಜ್ಞಾನಿ ಡಾ. ಶೋಭಾ ಆನಂದರೆಡ್ಡಿ ಹೇಳಿದರು.

ಪ್ರಜಾವಾಣಿ ಮಳೆಯ ಸವಾಲು ನಿಮ್ಮದೇನು ಜವಾಬು?

ಮಹದೇವಪುರ ವ್ಯಾಪ್ತಿಯ ಕೆಲವು ಪ್ರದೇಶಗಳು ಜೋರು ಮಳೆಗೆ ನಲುಗಿದ್ದೇ ತಡ, ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುವವರು ವ್ಯವಸ್ಥೆಯನ್ನು ಕಟುವಾಗಿ ದೂರಿದರು. ವ್ಯವಸ್ಥೆ ಹೀಗೆಯೇ ಇದ್ದರೆ ಪರ್ಯಾಯ ಮಾರ್ಗಗಳನ್ನು ಹುಡುಕಿ ಬೇರೆಡೆಗೆ ಹೊರಡಬೇಕಾದೀತು ಎಂದು ಉದ್ಯಮಿಗಳು ಎಚ್ಚರಿಸಿದ್ದಾರೆ. ಇದರ ಬೆನ್ನಲ್ಲೇ ಅಂಥವರಿಗೇ ಸವಾಲೊಡ್ಡುವಂಥ #Leavebengaluru ಎಂಬ ಟ್ವಿಟರ್ ಅಭಿಯಾನ ಶುರುವಾಗಿದೆ. ನಿಮ್ಮ ದೃಷ್ಟಿಯಲ್ಲಿ ಇಂತಹ ಸಮಸ್ಯೆಗೆ ಕ್ರಿಯಾತ್ಮಕ ಪರಿಹಾರ ಏನು? ನೀರು ನಿಲ್ಲುವ ಉಸಾಬರಿಯಿಂದ ಯಶಸ್ವಿಯಾಗಿ ಹೊರಬಂದ ಅನುಭವ ನಿಮ್ಮದೂ ಆಗಿದ್ದರೆ ಬರೆದು ಕಳುಹಿಸಿ. ಒತ್ತುವರಿ ತೆರವಿಗೆ ಪರಿಹಾರವನ್ನೂ ಸೂಚಿಸಬಹುದು. ಆಯ್ದ ಬರಹಗಳು ಪತ್ರಿಕೆಯಲ್ಲಿ ಪ್ರಕಟಗೊಳ್ಳಲಿವೆ. ಬರಹ 60 ಪದಗಳಿಗೆ ಸೀಮಿತವಾಗಿರಲಿ. ನಿಮ್ಮ ಪೂರ್ಣ ವಿಳಾಸ, ಫೋಟೊ ಕೂಡ ಕಳುಹಿಸಿ.

96060 38256

ಕಂಪನಿಗಳಿಂದ ಒತ್ತುವರಿ ಎಲ್ಲೆಲ್ಲಿ?

ಬೆಂಗಳೂರು: ಮಹದೇವಪುರ ವಲಯದಲ್ಲಿ ಬಾಗಮನೆ, ಪುರ್ವ ಪ್ಯಾರಡೈಸ್, ಪ್ರೆಸ್ಟೀಜ್, ಸಲಾಪುರಿಯಾ, ಆದರ್ಶ, ನಲಪಾಡ್, ನ್ಯೂ ಹೊರೈಜನ್ ಕಾಲೇಜು, ಕೊಲಂಬಿಯಾ ಆಸ್ಪತ್ರೆ, ಗೋಪಾಲನ್ ಸಂಸ್ಥೆಗಳಿಗೆ ರಾಜಕಾಲುವೆ ಒತ್ತುವರಿಗೆ ಆ.3ನೇ ವಾರದಲ್ಲೇ ನೋಟಿಸ್ ನೀಡಲಾಗಿತ್ತು. ಆದರೆ, ಸೆಪ್ಟೆಂಬರ್ ಮೊದಲ ವಾರ ಮಳೆಯಿಂದ ಅವಾಂತರವಾದ ನಂತರವೂ ಯಾವುದೇ ಕ್ರಮ ಕೈಗೊಂಡಿಲ್ಲ.

ಮಹದೇವಪುರ ವಲಯ ಆಯುಕ್ತರ ಸೂಚನೆ ಮೇರೆಗೆ ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳು 15 ಒತ್ತುವರಿದಾರರ ಹೆಸರು, ಗ್ರಾಮ, ಸರ್ವೆ ನಂಬರ್‌ಗಳ ಸಹಿತ ಮಾಹಿತಿಯನ್ನು ಆಗಸ್ಟ್ 17ರಂದೇ ಜಂಟಿ ಆಯುಕ್ತರಿಗೆ ಸಲ್ಲಿಸಿದ್ದಾರೆ. ಈ ಬಗ್ಗೆ ಕ್ರಮ ಕೈಗೊಂಡಿಲ್ಲ.

ರಾಜಕಾಲುವೆ ಒತ್ತುವರಿದಾರರ ವಿವರ ಹೀಗಿದೆ

ಒತ್ತುವರಿದಾರರ ಹೆಸರು	ಗ್ರಾಮ	ಸರ್ವೆ ನಂ
ಬಾಗಮನೆ ಟೆಕ್‌ಪಾರ್ಕ್, ಪುರ್ವ ಪ್ಯಾರಡೈಸ್ ಮತ್ತು ಇತರರು	ಮಹದೇವಪುರ	35, 38, 88, 89, 92, 94, 95, 96, 97, 102, 103, 104
ಆರ್.ಬಿ.ಡಿ	ಬುಂಗಸದ್ರ	19
	ದೊಡ್ಡನೆಕ್ಕುಂದಿ	36, 40, 41
ವಿಪ್ರೊ	ದೊಡ್ಡನೆಕ್ಕುಂದಿ	69, 77, 78, 79, 80
ಇಕೊ-ಸ್ಪೇಸ್	ಬೆಳ್ಳಂದೂರು	20, 21, 44, 45, 46, 49, 50, 55, 56, 59, 60, 61, 62, 63, 64, 66
ಗೋಪಾಲನ್	ಬೆಳ್ಳಂದೂರು	23, 25, 43, 47, 47, 51, 53, 54, 57, 58, 61, 67, 68
ಗೋಪಾಲನ್	ಹೂಡಿ	17, 166, 167, 168, 181, 182, 183
ದಿಯಾ ಸ್ಕೂಲ್ ಮತ್ತು ಇತರರು	ಹೂಡಿ	71, 72, 73
ಗೋಪಾಲನ್ ಮತ್ತು ಇತರರು	ಹೂಡಿ	180
	ಸೊಣ್ಣೆಹಳ್ಳಿ	44
ಆದರ್ಶ	ಆರ್. ನಾರಾಯಣಪುರ	1, 24, 25, 26, 29, 33, 34, 35, 36
ಕೊಲಂಬಿಯಾ ಏಷ್ಯಾ ಹಾಸ್ಪಿಟಲ್	ರಾಮಗೊಂಡನಹಳ್ಳಿ	17, 18, 28, 38
ನ್ಯೂ ಹೊರೈಜನ್ ಕಾಲೇಜು	ಕಾಡುಬಿಸಲಹಳ್ಳಿ	10, 13, 14, 16, 17, 18, 22, 23
ಆದರ್ಶ ರಿಟ್ರೀಟ್	ದೇವರಬಿಸಲಹಳ್ಳಿ	15, 16, 17, 19, 25, 30, 31, 36
ಎಪಿಸ್ಲಾನ್ ಮತ್ತು ದಿವ್ಯಶ್ರೀ	ಎಬಿಕೆ ಮತ್ತು ಯಮಲೂರು	ಗ್ರಾಮನಕ್ಷೆಯಲ್ಲಿರುವ ರಾಜಕಾಲುವೆ
ಪ್ರೆಸ್ಟೀಜ್, ಸಲಾಪುರಿಯಾ ಮತ್ತು ಆದರ್ಶ	ಮಾರತಹಳ್ಳಿ ಮತ್ತು ಕರಿಯಮ್ಮನ ಅಗ್ರಹಾರ	ಗ್ರಾಮನಕ್ಷೆಯಲ್ಲಿರುವ ರಾಜಕಾಲುವೆ
ನಲಪಾಡ್	ಚಲ್ಲಘಟ್ಟ	66, 67, 68, 69, 70

ಮಹದೇವಪುರದಲ್ಲಿ 5 ಕಡೆ ಒಟ್ಟು 15 ಒತ್ತುವರಿ ತೆರವು

ಒಂದು ಕಿ.ಮೀ. ರಾಜಕಾಲುವೆ ಒತ್ತುವರಿಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರದ ವಲಯದಲ್ಲಿ ಪ್ರೆಸ್ಟೀಜ್, ಗೋಪಾಲನ್ ಶಾಲೆ, ಮಹಾವೀರ್ ಅಪಾರ್ಟ್‌ಮೆಂಟ್, ಸಾಯಿ ಕಣ್ಣಿನ ಆಸ್ಪತ್ರೆ ಸೇರಿ ರಾಜಕಾಲುವೆ ಮೇಲಿನ 15 ಒತ್ತುವರಿಯನ್ನು ಸೋಮವಾರ ತೆರವು ಮಾಡಿರುವ ಬಿಬಿಎಂಪಿ ಸಿಬ್ಬಂದಿ, ಸುಮಾರು ಒಂದು ಕಿ.ಮೀ ರಾಜಕಾಲುವೆಯನ್ನು ಮುಕ್ತಗೊಳಿಸಿದೆ.

ಅತಿ ಹೆಚ್ಚು ಮಳೆಯಿಂದ ಈ ತಿಂಗಳ ಮೊದಲ ವಾರದಲ್ಲಿ ಈ ಪ್ರದೇಶ ಜಲಾವೃತವಾಗಿದ್ದು, ಜನಜೀವನ ಸಂಕಷ್ಟಕ್ಕೆ ಸಿಲುಕಿತ್ತು. ಅತಿ ಹೆಚ್ಚು ಅವ್ಯವಸ್ಥೆಗೆ ಒಳಗಾದ ಪ್ರದೇಶದಲ್ಲಿ ಆದ್ಯತೆ ಮೇರೆಗೆ ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯಾಚರಣೆಗೆ ಐದು ಪ್ರದೇಶಗಳಲ್ಲಿ ಚಾಲನೆ ನೀಡಲಾಗಿದೆ.

ಚಲ್ಲಘಟ್ಟ, ಚಿನ್ನಪ್ಪನ ಹಳ್ಳಿ, ಬಸವಣ್ಣನಗರ, ಸ್ಪೈಸಿ ಗಾರ್ಡನ್ ಹಾಗೂ ಬಸವನಪುರ ವಾರ್ಡ್‌ನ ಎಸ್. ಆರ್. ಲೇಔಟ್ ಕೇಂಬ್ರಿಡ್ಜ್ ಕಾಲೇಜು ಆವರಣದಲ್ಲಿ ಸರ್ವೇಯರ್‌ಗಳು ರಾಜಕಾಲುವೆ ಒತ್ತುವರಿಯನ್ನು ಗುರುತು ಮಾಡಿದರು. ಆ ಪ್ರದೇಶದಲ್ಲಿ ಪಾಲಿಕೆಯ ಅಧಿಕಾರಿಗಳು, ಮಾರ್ಷಲ್‌ಗಳ ತಂಡವು ಪೊಲೀಸ್ ಸಿಬ್ಬಂದಿ ಸಹಯೋಗದೊಂದಿಗೆ ಜೆಸಿಬಿ ಯಂತ್ರಗಳ ಮೂಲಕ ತೆರವು ಕಾರ್ಯಾಚರಣೆ ನಡೆಸಿತು.

ಚಿನ್ನಪ್ಪನಹಳ್ಳಿಯಿಂದ ಮುನ್ನೇಕೊಳಲು ಕೆರೆಯ ನಡುವೆ ಎಇಸಿಎಸ್ ಬಡಾವಣೆ ವ್ಯಾಪ್ತಿಯ ರಾಘಮ್ ಸೂಪರ್ ಮಾರ್ಕೆಟ್ ಮುಂಭಾಗದ ಗೋಡೆಯನ್ನು ಜೆಸಿಬಿಯಿಂದ ತೆರವುಗೊಳಿಸಲಾಯಿತು

ಚಿನ್ನಪ್ಪನಹಳ್ಳಿಯಿಂದ ಮುನ್ನೇಕೊಳಾಲು ಕೆರೆಯ ನಡುವ ಎಇಸಿಎಸ್ ಲೇಔಟ್ ವ್ಯಾಪ್ತಿಯಲ್ಲಿ ಸಾಯಿ ಕಣ್ಣಿನ ಆಸ್ಪತ್ರೆ ಕಾಂಪೌಂಡ್, ರಾಗಂ ಮೆಘಾ ಸ್ಟೋರ್ ಮುಂಭಾಗದ ಒಳಹರಿವಿನ ಕಾಲುವೆ ಸೇರಿಮೂರು ಕಟ್ಟಡಗಳು, ನಾಲ್ಕು ಗೋಡೆ ಹಾಗೂ ರಸ್ತೆಯನ್ನು ತೆರವುಗೊಳಿಸಲಾಗಿದೆ ಎಂದು ಮಹದೇವಪುರ ವಲಯದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಘವೇಂದ್ರ ತಿಳಿಸಿದರು.

ಚಲ್ಲಘಟ್ಟ ವ್ಯಾಪ್ತಿಯಲ್ಲಿ ಪ್ರೆಸ್ಟೀಜ್‌ನ ಖಾಲಿ ಜಾಗ, ಗೋಡೆ ಹಾಗೂ ಹೂಡಿ ಬಳಿ ಗೋಪಾಲನ್ ಶಾಲೆ ಹಾಗೂ ಮಹಾವೀರ್ ಅಪಾರ್ಟ್‌ಮೆಂಟ್ ಗೋಡೆ, ಮುನ್ನೇನಕೊಳಾಲುನಲ್ಲಿ ಸ್ಪೈಸಿ ಗಾರ್ಡನ್ ಬಳಿ 4 ಗೋಡೆ ಹಾಗೂ ರಸ್ತೆ ತೆರವುಗೊಳಿಸಲಾಗಿದೆ. ಕೆ.ಆರ್.ಪುರದ ಬಸವನಪುರ ವಾರ್ಡ್ ಎಸ್.ಆರ್. ಲೇಔಟ್ ವ್ಯಾಪ್ತಿಯ ಕೇಂಬ್ರಿಡ್ಜ್ ಕಾಲೇಜು ಆವರಣದಲ್ಲಿ 77 ಮೀಟರ್ ಉದ್ದ ಹಾಗೂ 2.6 ಮೀಟರ್ ಅಗಲದ ನೀರುಗಾಲುವೆಯ ಮೇಲೆ ಅಳವಡಿಸಲಾಗಿದ್ದ ಸ್ಲ್ಯಾಬ್‌ಗಳನ್ನು ತೆಗೆಯಲಾಗಿದೆ. ಒತ್ತುವರಿ ತೆರವು ಕಾರ್ಯಚರಣೆ ನಡೆಸಿರುವ ಎಲ್ಲಾ ಕಡೆಗಳಲ್ಲಿಯೂ ಮತ್ತೊಮ್ಮೆ ಒತ್ತುವರಿ ಮಾಡದಂತೆ ಎಚ್ಚರಿಕೆ ನೀಡಲಾಗಿದೆ ಎಂದು ರಾಘವೇಂದ್ರ ತಿಳಿಸಿದರು.

ತಾರತಮ್ಯ ಇಲ್ಲದೆ ಒತ್ತುವರಿ ತೆರವು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆಗಳನ್ನು ಒತ್ತುವರಿ ಮಾಡಿ ಮನೆ ಮತ್ತು ಇತರ ಕಟ್ಟಡಗಳನ್ನು ನಿರ್ಮಿಸಿದ್ದರೆ, ಅವುಗಳನ್ನು ತಾರತಮ್ಯವಿಲ್ಲದೆ ತೆರವುಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

ರಾಜಕಾಲುವೆಗಳ ಮೇಲೆ ಕಟ್ಟಡಗಳನ್ನು ಕಟ್ಟಿದ್ದರೆ, ಕಾಲುವೆಯಲ್ಲಿ ನೀರು ಹರಿಸಲು ತೊಂದರೆ ಉಂಟು ಮಾಡಿದ್ದರೆ, ಕಾಲುವೆ ಮುಚ್ಚಿದ್ದರೆ ಮತ್ತು ಮಳೆ ನೀರು ಚರಂಡಿಗೆ ಹರಿಯಲು ಅಡ್ಡಿ ಮಾಡಿದ್ದರೆ, ಅವುಗಳನ್ನು ತೆರವು ಮಾಡಲಾಗುವುದು. ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದರು.

ಪ್ರವಾಹ ಬಂದಾಗ ಐಟಿ- ಬಿಟಿ ಮಾತ್ರವಲ್ಲ, ಜನಸಾಮಾನ್ಯರು, ತಗ್ಗಿನ ಪ್ರದೇಶದಲ್ಲಿರುವ ಮನೆಗಳಿಗೂ ನೀರು ಹರಿದು ಸಮಸ್ಯೆ ಆಗಿದೆ. ಒತ್ತುವರಿ ವಿಚಾರವಾಗಿ ನ್ಯಾಯಾಲಯ ಹಲವು ನಿರ್ದೇಶನಗಳನ್ನು ನೀಡಿದೆ. ನ್ಯಾಯಾಲಯಕ್ಕೂ ಸರ್ಕಾರದ ಕ್ರಮಗಳ ಕುರಿತು ಮಾಹಿತಿಗಳನ್ನು ನೀಡಲಾ ಗುವುದು. ಈ ಬಾರಿ ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣ ತೆರವುಗೊಳಿಸಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದರು.

ಎಇಸಿಎಸ್ ಬಡಾವಣೆ ನಿವಾಸಿಗಳ ಮಧ್ಯೆ ಕೆಲಕಾಲ ವಾಗ್ವಾದ ನಡೆಯಿತು.

ಎಇಸಿಎಸ್ ಬಡಾವಣೆ: ನಿವಾಸಿಗಳ ಮಧ್ಯೆ ವಾಗ್ವಾದ

ಕೆ.ಆರ್.ಪುರ: ರಾಜಕಾಲುವೆ ಒತ್ತುವರಿ ಸಂಬಂಧ ಎಇಸಿಎಸ್ ಬಡಾವಣೆ ನಿವಾಸಿಗಳ ಮಧ್ಯೆ ಕೆಲಕಾಲ ವಾಗ್ವಾದ ನಡೆಯಿತು.

ಬಿಬಿಎಂಪಿ ಅಧಿಕಾರಿಗಳು ಮೂಲ ನಕ್ಷೆಯಂತೆ ರಾಜಕಾಲುವೆ ಒತ್ತುವರಿ ತೆರವು ಮಾಡಿದರೆ ತಮ್ಮ ಮನೆ ಮತ್ತು ವಾಣಿಜ್ಯ ಕಟ್ಟಡ ಕಳೆದುಕೊಳ್ಳುವ ಆತಂಕದಲ್ಲಿ ಈ ಮೊದಲು ಇರುವ ರಾಜಕಾಲುವೆಯನ್ನೆ ಎರಡು ಮೀಟರ್ ವಿಸ್ತರಣೆ ಮಾಡಿ ತಮ್ಮ ಕಟ್ಟಡಗಳನ್ನು ಉಳಿಸಿಕೊಡುವಂತೆ ಪಟ್ಟು ಹಿಡಿದರು.

ಇದನ್ನು ಪ್ರಶ್ನಿಸಿ ಇನ್ನೊಂದು ಗುಂಪು ಮೂಲ ನಕ್ಷೆಯಂತೆ ರಾಜಕಾಲುವೆ ಒತ್ತುವರಿ ತೆರವು ಮಾಡಿದರೆ ಮಾತ್ರ ಮಳೆಯಿಂದಾಗಿ ತಮ್ಮ ಮನೆಗಳಿಗೆ ಮಳೆ ನೀರು ನುಗ್ಗುವ ಸಮಸ್ಯೆ ತಪ್ಪುತ್ತದೆ. ಈ ಮೊದಲು ಇದ್ದ ರಾಜಕಾಲುವೆ ಚಿಕ್ಕದಾಗಿರುವುದರಿಂದ ಪ್ರತಿ ಸಲ ಮಳೆ ಬಂದಾಗೆಲ್ಲ ಮನೆಗಳಿಗೆ ಪ್ರವಾಹ ಉಂಟಾಗುತ್ತದೆ. ಮನೆಗೆ ನುಗ್ಗುವ ಮಳೆಯಿಂದಾಗಿ ಹಾವು ಇನ್ನಿತರ ಜಂತುಗಳು ಮನೆಯೊಳಗೆ ಹೋಗಿ ಜೀವ ಭಯದಿಂದ ಬದುಕುವಂತಾಗಿದೆ. ಬಿಬಿಎಂಪಿ ಅಧಿಕಾರಿಗಳು ಮಾಡುತ್ತಿರುವ ಕೆಲಸ ಸರಿ ಇದೆ ಎಂದು ವಾದ ಮಾಡಿದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

NAYANA KUMAR'S MULTI SPECIALITY HOSPITAL
"Passion for Caring"
HIRING
• Below Medical Specialist (Full Time)
with 2+ Year of hospital experience
General Medicine (Physician)
Anesthesiologist, Intensivist
• Below Hospital Staff (Urgently Looking)
with 2+ years of hospital experience
Staff Nurses - 8 Nos,
Front Office - 2 Nos
Good looking / Communication skill
Contact:
Nayana Kumar's Multispeciality Hospital, Mysuru
Contact at Phone 97408 40798
Email: hr@nkhospitals.com / web: www.nkhospitals.com

ನಿಲ್ದಾಣದಲ್ಲಿ ಪ್ರಯಾಣಿಕರಸ್ನೇಹಿ ವ್ಯವಸ್ಥೆ ಜಾರಿಗೆ ತರಲಾಗಿದೆ. ದಾಖಲಾತಿ ಪರಿಶೀಲನೆ ಸರಳೀಕರಣ ಮಾಡುವ ಉದ್ದೇಶ ಮೊದಲಿನಿಂದಲೂ ಇತ್ತು. ಈಗ ಅದು ಈಡೇರಿದೆ.

ಹರಿಮರಾರ್, ಸಿಇಒ, ಬಿಐಎಎಲ್

ಬಿಐಎಎಲ್‌ನಲ್ಲಿ ಪುಟ್ಟ ಪುಟ್ಟ ಯಂತ್ರಗಳ ಓಡಾಟ, ದಾಖಲಾತಿ ಪರಿಶೀಲನೆಗೆ ಡಿಜಿಟಲ್ ವ್ಯವಸ್ಥೆ

ವಿಮಾನ ನಿಲ್ದಾಣ ಮತ್ತಷ್ಟು ಸ್ಮಾರ್ಟ್

• ಆದಿತ್ಯ ಕೆ.ಎ.

ಬೆಂಗಳೂರು: ಅತ್ಯಂತ ವೇಗವಾಗಿ ಬೆಂಗಳೂರು ನಗರ ಬೆಳೆಯುತ್ತಿದ್ದು, ಅಂತರರಾಷ್ಟ್ರೀಯ ಪ್ರಯಾಣಿಕರ ಮನ್ನಣೆಗೂ ಪಾತ್ರವಾಗಿದೆ. ವಿದೇಶದಿಂದ ಬಂದು ಹೋಗುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅದಕ್ಕೆ ತಕ್ಕಂತೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಮಾರ್ಟ್ ಆಗುತ್ತಿದೆ. ಪ್ರಯಾಣಿಕರ ಸುಖಕರ ಪ್ರಯಾಣಕ್ಕೆ ತಂತ್ರಜ್ಞಾನ ಒದಗಿಬಂದಿದೆ.

ಪ್ರಯಾಣಿಕರ ಮಾರ್ಗದರ್ಶನಕ್ಕೆ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತಂದಿದ್ದ 'ರೋಬೊ' ಹಾಗೂ ಡಿಜಿ ಯಾತ್ರಾ (ಮುಖಚಹರೆ ಗುರುತಿಸುವಿಕೆ) ಯೋಜನೆ ಯಶಸ್ವಿಯಾಗಿದ್ದು, ಈ ಯೋಜನೆ ವಿಸ್ತರಿಸಲು ಬಿಐಎಎಲ್ ಮುಂದಾಗಿದೆ.

ಎರಡು ಸಂಸ್ಥೆಗಳಲ್ಲಿ ಅಳವಡಿಕೆ

ಡಿಜಿ ಯಾತ್ರಾ ಆ್ಯಪ್ ಅನ್ನು ವಿಸ್ತಾರ ಏರ್‌ಲೈನ್ಸ್ ಹಾಗೂ ಏರ್‌ಏಷ್ಯಾ ಸಂಸ್ಥೆಗಳು ಮಾತ್ರ ಅಳವಡಿಸಿಕೊಂಡಿವೆ. ಈ ವಿಮಾನಗಳ ಪ್ರಯಾಣಿಕರಿಂದ ಉತ್ತಮ ಸ್ಪಂದನ ಸಿಕ್ಕಿದೆ.

ಅತ್ಯುತ್ತಮ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿರುವ ಬಿಐಎಎಲ್‌ನಲ್ಲಿ 2ನೇ ಟರ್ಮಿನಲ್ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಅಕ್ಟೋಬರ್ ವೇಳೆಗೆ ಉದ್ಘಾಟನೆಗೊಳ್ಳುವ ಸಾಧ್ಯತೆಯಿದೆ. ಅದರ ಉದ್ಘಾಟನೆಗೂ ಮೊದಲು ವಿಮಾನ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಮತ್ತಷ್ಟು ರೋಬೊಗಳು ಓಡಾಟ ನಡೆಸುವುದಕ್ಕೆ ಯೋಜನೆ ರೂಪಿಸಲಾಗಿದೆ. ಸದ್ಯಕ್ಕೆ 10 ರೋಬೊಗಳು ಮಾತ್ರ ನಿಲ್ದಾಣದಲ್ಲಿವೆ. ಹೊಸದಾಗಿ ವಿಮಾನಯಾನ ಮಾಡುವವರಿಗೆ ರೋಬೊಗಳು ಮಾಹಿತಿ ಒದಗಿಸುತ್ತಿವೆ.

'ಪ್ರವೇಶದ್ವಾರದಲ್ಲಿ ಪುಟ್ಟ ಯಂತ್ರಗಳು ಓಡಾಟ ನಡೆಸುತ್ತಿದ್ದು, ಸಂವಹನ ವ್ಯವಸ್ಥೆಯೂ ಇದೆ. ಉಳಿದಂತೆ ವಿಮಾನಗಳ ಮಾಹಿತಿ, ಪ್ರಯಾಣದ ಅವಧಿ, ಹವಾಮಾನದ ವಿವರ ಪಡೆದುಕೊಳ್ಳಬಹುದು' ಎಂದು ಬಿಐಎಎಲ್‌ನ ಅಧಿಕಾರಿ ಮಾಹಿತಿ ನೀಡಿದರು. 'ಆರ್ಟಿಲಿಜೆಂಟ್' ಸಂಸ್ಥೆಯು ಈ ರೋಬೊ ಅಭಿವೃದ್ಧಿಪಡಿಸಿ ನಿಲ್ದಾಣಕ್ಕೆ ನೀಡಿದೆ.

ತಪ್ಪಿದ ಕಿರಿಕಿರಿ: ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಮಹತ್ವದ ಯೋಜನೆಯಾದ 'ಡಿಜಿ ಯಾತ್ರಾ'ಯನ್ನೂ ಜಾರಿಗೆ ತರಲಾಗಿದೆ. ಮೊದಲ ಬಾರಿಗೆ ಬೆಂಗಳೂರು, ವಾರಾಣಸಿ ಹಾಗೂ ದೆಹಲಿ ವಿಮಾನ ನಿಲ್ದಾಣದಲ್ಲೂ ಪ್ರಾಯೋಗಿಕವಾಗಿ ಈ ವ್ಯವಸ್ಥೆ ಅನುಷ್ಠಾನಕ್ಕೆ ತರಲಾಗಿದೆ. ಇದರಿಂದ ದಾಖಲೆಗಳ ಅನಗತ್ಯ ತಪಾಸಣೆಯ ಕಿರಿಕಿರಿ ತಪ್ಪಿದೆ.

ನಿಲ್ದಾಣದ ಇ-ಗೇಟ್‌ನಲ್ಲಿ ಡಿಜಿ ಯಾತ್ರಾ ಬಯೋಮೆಟ್ರಿಕ್ ಬೋರ್ಡಿಂಗ್ ಸಿಸ್ಟಮ್ ಅಳವಡಿಸಲಾಗಿದೆ. ಇದು ಸಂಪರ್ಕರಹಿತ ಸೌಕರ್ಯ. ಪ್ರಯಾಣಿಕರು ತಮ್ಮ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಿಕೊಂಡು ನಿಲ್ದಾಣದ ಮುಖಚಹರೆ ಗುರುತಿಸಿಕೊಂಡು ವಿಮಾನದಲ್ಲಿ ಪ್ರಯಾಣ ಮಾಡಬಹುದಾಗಿದೆ. ಆ್ಯಂಡ್ರಾಯ್ಡ್ ಮೊಬೈಲ್‌ನಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಆಧಾರ್ ಕಾರ್ಡ್ ಸಹಿತ ಮಾಹಿತಿ ದಾಖಲು ಮಾಡಬೇಕು. ಪ್ರಯಾಣಿಕರಿಗೆ ನೋಂದಣಿ ಸಂಖ್ಯೆ ಬರಲಿದ್ದು, ವಿಮಾನವನ್ನೇರುವ ಮೊದಲು ಬೋರ್ಡ್‌ನ ಮುಂದೆ ಸ್ಕ್ಯಾನ್‌ಗೆ ಒಳಗಾಗುವ ಮೂಲಕ ನಿಲ್ದಾಣ ಪ್ರವೇಶಿಸಬಹುದು. ಪ್ರತ್ಯೇಕ ಪಾಸ್ ಪಡೆಯುವ ಅಗತ್ಯವಿಲ್ಲ. ಡಿಜಿಟಲ್ ವ್ಯವಸ್ಥೆಯ ಮೂಲಕವೇ ದಾಖಲೆಗಳ ಪರಿಶೀಲಿಸಿ ಬೋರ್ಡಿಂಗ್ ಪಾಸ್ ದೃಢೀಕರಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಈ ವ್ಯವಸ್ಥೆ ಅಳವಡಿಕೆಗೂ ಮೊದಲು ಸಿಬ್ಬಂದಿಯೇ ಹಲವು ರೀತಿಯಲ್ಲಿ ತಪಾಸಣೆ ನಡೆಸುತ್ತಿದ್ದರು. ಈಗ ಪ್ರಯಾಣಿಕರಿಗೆ ಸಮಯ ಉಳಿತಾಯವಾಗುತ್ತಿದೆ. ಯಾರ ಸಂಪರ್ಕವನ್ನೂ ಪಡೆಯದೆ ಪ್ರಯಾಣಿಸಬಹುದಾಗಿದೆ. ಪ್ರಯಾಣಿಕರ ಮಾಹಿತಿ ಸಹ ಸುರಕ್ಷಿತವಾಗಿ ಇರಲಿದೆ. ದತ್ತಾಂಶ ನೀಡುವುದಕ್ಕೆ ಆತಂಕ ಪಡಬೇಕಿಲ್ಲ. 24 ಗಂಟೆಯ ನಂತರ ಪ್ರಯಾಣಿಕರ ಮಾಹಿತಿ ಅಳಿಸಿಹೋಗಲಿದೆ' ಎಂದು ಬಿಐಎಎಲ್‌ನ ಸಿಇಒ ಹರಿಮರಾರ್ ತಿಳಿಸಿದ್ದಾರೆ.

ಪ್ರಯಾಣಿಕರೊಬ್ಬರು ತಮ್ಮ ಮುಖಚಹರೆ ಗುರುತಿಸುವಿಕೆಗೆ ಒಳಗಾದ ಕ್ಷಣ

ಮುಖ್ಯಾಂಶಗಳು

- ಪ್ರಾಯೋಗಿಕ ಯೋಜನೆ ಯಶಸ್ವಿ
- ಸಂಪರ್ಕರಹಿತ ಪ್ರಯಾಣಕ್ಕೆ ಅನುಕೂಲ
- ದತ್ತಾಂಶ ನೀಡುವುದಕ್ಕೆ ಆತಂಕ –ಆ್ಯಪ್ ಸುರಕ್ಷಿತ: ಬಿಐಎಎಲ್ ಭರವಸೆ

ಎತ್ತರ ಹೆಚ್ಚಿಸಲು ಸಲಹೆ

ರೋಬೊ ಯಂತ್ರಗಳು ಚಿಕ್ಕದಾಗಿವೆ. ಇದರಿಂದ ವಯಸ್ಕರರಿಗೆ ತೊಂದರೆ ಆಗುತ್ತಿದೆ. ಅವುಗಳ ಎತ್ತರ ಹೆಚ್ಚಿಸಬೇಕು. ಸೀಮಿತವಾದ ಮಾಹಿತಿ ಮಾತ್ರ ಸಿಗುತ್ತಿದ್ದು ಮತ್ತಷ್ಟು ಮಾಹಿತಿ ದೊರೆಯುವಂತೆ ಮಾಡಬೇಕು.

ಸುನಿಲ್, ಉದ್ಯಮಿ, ಕೆ.ಆರ್. ಪುರದ ಬೈರತಿ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಆರ್‌ವಿ ಕಾಲೇಜು ಅಂಚೆ, ಬೆಂಗಳೂರು–560059. ದೂರವಾಣಿ: 080–28484515/40/43/44/49

ಸಂಖ್ಯೆ: ಡಿಪಿಎಸ್/16/ಸಿಎಸ್‌ಟಿ(ಜಿ)/2022–23(ಕರೆ–3) ದಿನಾಂಕ: 08.09.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿವಿಧ ಬಗೆಯ ಲಕೋಟೆಗಳನ್ನು ಮುದ್ರಿಸಿ ಸರಬರಾಜು ಮಾಡಲು ವಾರ್ಷಿಕ ದರಗುತ್ತಿಗೆ ಆಧಾರದ ಮೇಲೆ ಬೆಂಗಳೂರಿನಲ್ಲಿನ (ಬಿ.ಬಿ.ಎಂ.ಪಿ ವಲಯ) ಅರ್ಹ ಮುದ್ರಣ/ಬೈಂಡಿಂಗ್/ಲಕೋಟೆ ತಯಾರಿಕಾ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 9.87 ಲಕ್ಷಗಳಾಗಿದ್ದು** ಇದರ ಒಟ್ಟು ಇ.ಎಂ.ಡಿ. ಮೊತ್ತ **ರೂ.50,000/–** ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 27.09.2022.** ವಿವರವಾದ ಟೆಂಡರ್ ದಸ್ತಾವೇಜನ್ನು ವೆಬ್‌ಸೈಟ್ https://eproc.karnataka.gov.inರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು

ವಾಸಾಸಂಇ/ವಾ.ಪ್ರ/2174/ಎಂಎಎ/2022–23

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ-563 101.
ದೂರವಾಣಿ ಸಂಖ್ಯೆ: 08152–222022, ಫ್ಯಾಕ್ಸ್ ಸಂಖ್ಯೆ: 08152–227443
e-mail: eeklr@kpwd.gov.in. website: www.kpwd.gov.in
e-Portal:http://eproc.karnataka.gov.in

ಇ–ಟೆಂಡರ್ ಪ್ರಕಟಣೆ–ಕೆಡಬ್ಲ್ಯೂ–4
ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: 11–1/2022–23
ದಿನಾಂಕ: 02.09.2022
ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ:11/2022–23
ದಿನಾಂಕ: 27.07.2022

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೋಲಾರ ಮತ್ತು ಶ್ರೀನಿವಾಸಪುರ ಉಪವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4059–80–051–0–32–386 ನ್ಯಾಯಾಲಯ ಕಟ್ಟಡಗಳು ಅಡಿಯಲ್ಲಿ 2 ಕಾಮಗಾರಿಗಳಿಗೆ ಲೋ.ಇ.1ನೇ ದರ್ಜೆ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಅನ್ವಯ ತಿದ್ದುಪಡಿ ಟೆಂಡರ್ ಹೊರಡಿಸಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಟ: ರೂ.1500.00 ಲಕ್ಷಗಳು. ಗರಿಷ್ಟ: ರೂ.2500.00 ಲಕ್ಷಗಳು** ಇ.ಎಂ.ಡಿ. ಮೊತ್ತ **ಕನಿಷ್ಟ: ರೂ.15.00 ಲಕ್ಷಗಳು ಗರಿಷ್ಟ: ರೂ.25.00 ಲಕ್ಷಗಳು.** ಕಾಲಾವಧಿ: **20 ತಿಂಗಳು** ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ–4ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 23.09.2022 ರಂದು ಸಂಜೆ 16.00 ಗಂಟೆ ಒಳಗೆ** ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 26.09.2022 ರಂದು ಸಂಜೆ 16.30 ಗಂಟೆಯ ನಂತರ.** ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:279/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಅರೆ ವೈದ್ಯಕೀಯ ಮಂಡಳಿ
ಲಕ್ಷ್ಮಿ ಕಾಂಪ್ಲೆಕ್ಸ್, ಮೊದಲನೇ ಮಹಡಿ, #5, ವಾಣಿವಿಲಾಸ ಆಸ್ಪತ್ರೆ ಎದುರು, ಬೆಂಗಳೂರು-02.
ಸಂಖ್ಯೆ : ಪಿಎಂಬಿ/08/2022–23 ದಿನಾಂಕ: 12.09.2022

ಪ್ರವೇಶಾತಿ ಪ್ರಕಟಣೆ

2022–23 ನೇ ಶೈಕ್ಷಣಿಕ ವರ್ಷಕ್ಕೆ ಅರೆ ವೈದ್ಯಕೀಯ ಡಿಪ್ಲೊಮ ಕೋರ್ಸ್‌ಗಳಿಗೆ ಸರ್ಕಾರಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳು ಹಾಗೂ ಖಾಸಗಿ ಪ್ಯಾರಾ ಮೆಡಿಕಲ್ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ದಿನಾಂಕ **23.06.2022 ರಿಂದ 22.07.2022 ರವರೆಗೆ** ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿತ್ತು. ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿರುವುದರಿಂದ ಅರ್ಜಿ ಸಲ್ಲಿಸಲು ಇಚ್ಛಿಸುವ ಎಲ್ಲಾ ಅಭ್ಯರ್ಥಿಗಳಿಗೆ **ದಿನಾಂಕ: 13.09.2022 ರಿಂದ 14.09.2022 ರವರೆಗೆ** ಕಾಲಾವಕಾಶ ನೀಡಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿಗಳನ್ನು ಜಾಲತಾಣ **http://www.pmbkarnataka.org ರಲ್ಲಿ ದಿನಾಂಕ 13.09.2022 ರಿಂದ** ಸಲ್ಲಿಸಬಹುದು. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 14.09.2022.** ಹೆಚ್ಚಿನ ಮಾಹಿತಿಗಾಗಿ ಅರೆವೈದ್ಯಕೀಯ ಮಂಡಳಿಯ ಜಾಲತಾಣ **http://www.pmbkarnataka.org** ಸಂಪರ್ಕಿಸಿ.

ಸಹಿ/– ಸದಸ್ಯ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354–235042 | ಇ–ಮೇಲ್: bgkeezpe@yahoo.com
ಫ್ಯಾಕ್ಸ್: 08354–235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–1/ಟೆಂಡರ್/2022–23/2088
ದಿನಾಂಕ:07.09.2022

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ– 4 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2022–23ನೇ ಸಾಲಿನ ಲೆಕ್ಕಶಿರ್ಷಿಕೆ:–5054 ರಡಿ ಬಾಗಲಕೋಟೆ ಜಿಲ್ಲೆ ಮುಧೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳು ರೂ.25.00 ಕೋಟಿ ಅನುದಾನದಡಿ (ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/293(16)–1 ಆರ್‌ಆರ್‌ಸಿ 2022 (ಇ–770392), ಬೆಂಗಳೂರು, ದಿನಾಂಕ:15.06.2022) ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಪ್ಯಾಕೇಜ್ ಕಾಮಗಾರಿಗೆ Standard Tender Document KW- 4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಟೆಂಡರ ಕಾಮಗಾರಿಗಳ ಇಂಡೆಂಟ್ ನಂ:: 93358, 93359, 93360, 93361, 93362, 93363, 93364 ಕಾಮಗಾರಿಗಳ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ.160.00 ರಿಂದ 265.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು **ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:23.09.2022 ರ ಸಾಯಂಕಾಲ 17.30 ಗಂಟೆವರೆಗೆ.**

ಪ್ರೀ–ಬಿಡ್ ಮೀಟಿಂಗ್ **ದಿನಾಂಕ ಮತ್ತು ಸಮಯ:20.09.2022 ರಂದು ಮುಂಜಾನೆ 11.00 ಗಂಟೆಯ ನಂತರ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು **ತೆರೆಯುವ ದಿನಾಂಕ ಮತ್ತು ಸಮಯ:27.09.2022 ರಂದು ಮುಂಜಾನೆ 11.00 ಗಂಟೆಯ ನಂತರ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತ ರಾಜ್ (ಇಂ)ವಿಭಾಗ, ಬಾಗಲಕೋಟೆ.

DIPR/BGK/RO-NO-420/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ರಸ್ತೆ ಮೂಲ ಸೌಕರ್ಯ – ಪಶ್ಚಿಮ ವಿಭಾಗ, ನಂ.101, ಅನೆಕ್ಸ್–3, 1ನೇ ಮಹಡಿ, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ರಮೂಸೌ–ಪಶ್ಚಿಮ/ಪಿಆರ್/332/2022–23 ದಿನಾಂಕ: 12–09–2022

ತಿದ್ದುಪಡಿ–1

ವಿಷಯ: ರಾಜಾಜಿನಗರ ಮತಕ್ಷೇತ್ರ ರಮೂಸೌ–ಪಶ್ಚಿಮ ವಲಯ–ಡಬ್ಲ್ಯೂಜಡ್ 2022–23 ಪ್ಯಾಕೇಜ್ ಸಂಖ್ಯೆ.05 ರಲ್ಲಿನ ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಮತ್ತು ಸಂಪರ್ಕವಾಗುವ ಪ್ರಮುಖ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ರದ್ದುಪಡಿಸಿರುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ: **ಕಾಅ/ರಮೂಸೌ–ಪಶ್ಚಿಮ/ಟೆಂಡರ್/08/2022–23 ದಿನಾಂಕ: 29–08–2022.**

ಮೇಲೆ ತಿಳಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮೇಲೆ ಉಲ್ಲೇಖಿಸಿರುವ **ರಾಜಾಜಿನಗರ ಮತಕ್ಷೇತ್ರ ರಮೂಸೌ–ಪಶ್ಚಿಮ ವಲಯ–ಡಬ್ಲ್ಯೂಜಡ್ 2022–23 ಪ್ಯಾಕೇಜ್ ಸಂಖ್ಯೆ. 05 ರಲ್ಲಿನ ಕ್ರಮ ಸಂಖ್ಯೆ.1 ರಲ್ಲಿ ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಮತ್ತು ಸಂಪರ್ಕವಾಗುವ ಪ್ರಮುಖ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗೆ** ಕರೆಯಲಾಗಿದ್ದ ಟೆಂಡರ್‌ನ್ನು ತಾಂತ್ರಿಕ ಕಾರಣಗಳಿಂದಾಗಿ ರದ್ದು ಮಾಡಲಾಗಿದೆ. ಉಳಿದ ಪ್ಯಾಕೇಜ್‌ಗಳ ಟೆಂಡರ್‌ನಲ್ಲಿ ಬದಲಾವಣೆ ಇರುವುದಿಲ್ಲ, ಹಾಗೆಯೇ ಇತರೆಲ್ಲಾ ನಿಯಮ ಮತ್ತು ಷರತ್ತುಗಳಲ್ಲಿ ಬದಲಾವಣೆಯಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ–ಪಶ್ಚಿಮ ವಿಭಾಗ, ಬಿಬಿಎಂಪಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

EDUCATION CORNER

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಅಪರಾಧ ಸುದ್ದಿಗಳು

'ಮಗಾ' ಎಂದಿದ್ದಕ್ಕೆ ಚಾಲಕನ ಕೊಲೆ: ಆರೋಪಿ ಬಂಧನ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ಸಿದ್ದಿಕ್ (25) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಅಜಯ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಸಿದ್ದಿಕ್, ಆಟೊ ಚಾಲಕ. ಭಾನುವಾರ ರಾತ್ರಿ ಇವರನ್ನು ಕೊಲೆ ಮಾಡಲಾಗಿದೆ. ಸ್ನೇಹಿತನೇ ಆಗಿದ್ದ ಆಟೊ ಚಾಲಕ ಅಜಯ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿದ್ದಿಕ್ ಹಾಗೂ ಅಜಯ್ ಪರಿಚಿತರು. ಸಣ್ಣ–ಪುಟ್ಟ ಕಾರಣಕ್ಕೂ ಆಗಾಗ ಜಗಳ ಮಾಡುತ್ತಿದ್ದರು. ಭಾನುವಾರ ರಾತ್ರಿ ಇಬ್ಬರೂ ಭೇಟಿಯಾಗಿದ್ದರು. ಇದೇ ವೇಳೆಯೇ ಸಿದ್ದಿಕ್, 'ಮಗಾ ಸ್ವಲ್ಪ ಕುಡಿಯಲು ನೀರು ಕೊಡು' ಎಂದಿದ್ದರು. ಅಷ್ಟಕ್ಕೆ ಕೋಪಗೊಂಡ ಅಜಯ್, 'ನನಗೆ ಮಗಾ ಎನ್ನುತ್ತಿಯಾ' ಎಂದು ಜಗಳ ತೆಗೆದಿದ್ದ. ನಂತರ, ಚಾಕುವಿನಿಂದ ಹಲವು ಬಾರಿ ಇರಿದಿದ್ದ.'

'ತೀವ್ರ ಗಾಯಗೊಂಡು ಕುಸಿದು ಬಿದ್ದಿದ್ದ ಸಿದ್ದಿಕ್ ಅವರನ್ನು ಸ್ಥಳಿಯರೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು' ಎಂದು ತಿಳಿಸಿವೆ.

ರೇನ್‌ಬೋ ಡ್ರೈವ್ ಬಡಾವಣೆ ಮನೆಗಳಲ್ಲಿ ಕಳ್ಳತನ

ಬೆಂಗಳೂರು: ಮಳೆಯಿಂದಾಗಿ ಇತ್ತೀಚೆಗೆ ನೀರು ನುಗ್ಗಿದ್ದ ರೇನ್‌ಬೋ ಡ್ರೈವ್ ಬಡಾವಣೆಯ ಮೂರು ಮನೆಗಳಲ್ಲಿ ಕಳ್ಳತನ ನಡೆದಿದ್ದು, ಈ ಸಂಬಂಧ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

'ಬಡಾವಣೆಯಲ್ಲಿ ಮಳೆ ನೀರು ನುಗ್ಗಿದ್ದರಿಂದ ನಿವಾಸಿಗಳು ಕಷ್ಟಕ್ಕೆ ಸಿಲುಕಿದ್ದರು. ಅಗತ್ಯ ವಸ್ತುಗಳ ಸಮೇತವಾಗಿ ಅವರನ್ನು ಮನೆಗಳಿಂದ ಹೊರಗೆ ಕರೆತಂದು ರಕ್ಷಿಸಲಾಗಿತ್ತು. ಬಡಾವಣೆಯ ಬಹುತೇಕ ಮನೆಗಳಲ್ಲಿ ಯಾರೂ ಇರಲಿಲ್ಲ. ಇದೇ ಸಂದರ್ಭದಲ್ಲೇ ಕಳ್ಳರು ಮನೆಯೊಳಗೆ ನುಗ್ಗಿ ಕಳ್ಳತನ ಮಾಡಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀರು ಕಡಿಮೆಯಾದ ನಂತರ ಮಾಲೀಕರು ಮನೆಗೆ ಹೋಗಿದ್ದರು. ಈ ವೇಳೆ ಪರಿಶೀಲಿಸಿದಾಗ ಕಳ್ಳತನ ಗಮನಕ್ಕೆ ಬಂದಿದೆ. ಮನೆಗಳ ಬಾಗಿಲು ಮೀಟಿ ಹಾಗೂ ಕಿಟಕಿ ಮೂಲಕ ಒಳಗೆ ನುಗ್ಗಿರುವ ಕಳ್ಳರು ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ಕದ್ದೊಯ್ದಿರುವುದಾಗಿ ಗೊತ್ತಾಗಿದೆ. ಕಳವಾದ ವಸ್ತುಗಳ ಮೌಲ್ಯ ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ತಿಳಿಸಿದರು.

'ಬಡಾವಣೆಯಲ್ಲೆಲ್ಲ ನೀರು ನಿಂತಿದ್ದರಿಂದ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು. ಇದರಿಂದಾಗಿ ಸಿ.ಸಿ.ಟಿ.ವಿ ಕ್ಯಾಮೆರಾಗಳೂ ನಿಷ್ಕ್ರಿಯಗೊಂಡಿದ್ದವು. ಹೀಗಾಗಿ, ಸದ್ಯಕ್ಕೆ ಆರೋಪಿಗಳ ಸುಳಿವು ಸಿಕ್ಕಿಲ್ಲ' ಎಂದೂ ಹೇಳಿದರು.

ಸಶಸ್ತ್ರ ಕಾನ್‌ಸ್ಟೆಬಲ್ ನೇಮಕಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯದ ಸಶಸ್ತ್ರ ಮೀಸಲು ಪಡೆಗಳಲ್ಲಿ (ಸಿಎಆರ್/ಡಿಎಆರ್) ಖಾಲಿ ಇರುವ 3,484 ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ 3,064 ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ 420 ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 30 ಕೊನೆ ದಿನ.

ಲಿಖಿತ ಪರೀಕ್ಷೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ಅನ್ವಯ ಅರ್ಹರನ್ನು ಹುದ್ದೆಗೆ ಆಯ್ಕೆ ಮಾಡಲಾಗುತ್ತದೆ. ವಯೋಮಿತಿ, ವಿದ್ಯಾರ್ಹತೆ, ಅರ್ಜಿ ಸಲ್ಲಿಕೆ ವಿಧಾನ ಹಾಗೂ ಇತರೆ ಮಾಹಿತಿಗಾಗಿ https://ksp.karnataka.gov.in/ ಅಥವಾ https://ksp--recruitment.in/ ನೋಡಿ.

'ಆರೋಪಿಯಲ್ಲದವರಿಗೆ ಆದೇಶ ಪತ್ರ ಕೊಡಿ'

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣ ರಾಜಕೀಯ ತಿರುವು ಪಡೆಯುತ್ತಿದ್ದು, ನ್ಯಾಯಯುತವಾಗಿ ಪರೀಕ್ಷೆ ಬರೆದು ಆಯ್ಕೆಯಾದ ತಮಗೆ ಅನ್ಯಾಯವಾಗಿದೆ ಎಂದು ಹಲವು ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

545 ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣದ ಪರ–ವಿರುದ್ಧ ರಾಜಕೀಯ ಪಕ್ಷಗಳು ಆರೋಪ, ಪ್ರತ್ಯಾರೋಪಗಳಲ್ಲಿ ತೊಡಗಿವೆ. ಕಷ್ಟಪಟ್ಟು ಓದಿ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾಗಿದ್ದ ನಮ್ಮ ಗೋಳು ಯಾರೂ ಕೇಳುತ್ತಿಲ್ಲ. ಕೆಲವು ಅಭ್ಯರ್ಥಿಗಳು ಮಾಡಿದ ತಪ್ಪಿಗೆ ಎಲ್ಲರಿಗೂ ಶಿಕ್ಷೆ ನೀಡುತ್ತಿದ್ದಾರೆ. ಇಂತಹ ಸಂದಿಗ್ಧದಲ್ಲಿ ಪ್ರಾಮಾಣಿಕ ಅಭ್ಯರ್ಥಿಗಳ ಹಿತ ಕಾಯಬೇಕಾದ ಸರ್ಕಾರ, ವಿರೋಧ ಪಕ್ಷಗಳು ಮೌನವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಕ್ರಮದಲ್ಲಿ ಭಾಗಿಯಾದ ಅಭ್ಯರ್ಥಿಗಳನ್ನು ಹೊರಗಿಟ್ಟು, ಪ್ರಾಮಾಣಿಕವಾಗಿ ಆಯ್ಕೆಯಾದ ಅಭ್ಯರ್ಥಿಗಳತ್ತ ಗಮನ ಹರಿಸುತ್ತಿಲ್ಲ. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳೂ ಸೇರಿದಂತೆ ಹಲವು ಪರೀಕ್ಷೆಗಳಲ್ಲಿ ಹಗರಣಗಳು ಕೇಳಿಬಂದಿವೆ. ಅಲ್ಲಿ ಅಕ್ರಮದಲ್ಲಿ ಭಾಗಿಯಾದವರನ್ನು ಹೊರಗಿಟ್ಟು, ಉಳಿದವರಿಗೆ ನೇಮಕಾತಿ ಆದೇಶ ನೀಡಲಾಗುತ್ತಿದೆ. ಪಿಎಸ್‌ಐ ಹುದ್ದೆಗಳಿಗೆ ಮಾತ್ರ ಮರು ಪರೀಕ್ಷೆಯ ಘೋಷಣೆ ಮಾಡಿರುವುದು ಸರ್ಕಾರದ ಇಬ್ಬಗೆಯ ನೀತಿಗೆ ಸಾಕ್ಷಿ ಎಂದು ದೂರಿದ್ದಾರೆ.

ಸುಧೀಂದ್ರಕುಮಾರ್ ಬ್ರಾಹ್ಮಣ ಸಭಾ ಅಧ್ಯಕ್ಷ



ಸುಧೀಂದ್ರ ಕುಮಾರ್

ಬೆಂಗಳೂರು: ಕೆಂಗೇರಿ ಉಪನಗರದ ಬ್ರಾಹ್ಮಣ ಸಭಾದ ಅಧ್ಯಕ್ಷರಾಗಿ ಎಚ್.ಎಸ್. ಸುಧೀಂದ್ರಕುಮಾರ್ ಪುನಾರಾಯ್ಕೆ ಆಗಿದ್ದಾರೆ.

ಕೆಂಗೇರಿ ಉಪನಗರದ ಗಾಯತ್ರಿ ಮಂದಿರದಲ್ಲಿ ನಡೆದ 40ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು.

ಶೇಷ ಪ್ರಸಾದ್ (ಉಪಾಧ್ಯಕ್ಷ), ಎ.ಎನ್. ಶಿವಸ್ವಾಮಿ (ಕಾರ್ಯದರ್ಶಿ), ಎಚ್.ಬಿ. ಗುರುಮೂರ್ತಿ (ಜಂಟಿ ಕಾರ್ಯದರ್ಶಿ), ಶ್ರೀಕಂಠ ಮೂರ್ತಿ (ಖಜಾಂಚಿ), ಉಷಾ ಗುರುದತ್, ರಮೇಶ್, ವಿಶ್ವನಾಥ್, ನರಸಿಂಹರಾಜು, ಎಚ್.ಎಸ್. ಗೋಪಾಲ್, ವಿವೇಕ್, ಅರುಣಾಚಲಂ, ಲಕ್ಷ್ಮೀಶ್, ಆರ್. ಎಸ್. ನಾಗರಾಜ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹಿಂದಿ ದಿವಸ: ಎಚ್‌ಡಿಕೆ ವಿರೋಧ

ಬೆಂಗಳೂರು: ಇದೇ 14ರಂದು ರಾಜ್ಯ ಸರ್ಕಾರದ ವತಿಯಿಂದ 'ಹಿಂದಿ ದಿವಸ' ಆಚರಣೆ ಮಾಡದಂತೆ ಆಗ್ರಹಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

'ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ಭಾಷೆಯನ್ನು ಮಾತ್ರವೇ ಮೆರೆಸುವುದು ಜನತೆಗೆ ಮಾಡುವ ಪರಮ ಅನ್ಯಾಯ. 'ಹಿಂದಿ ದಿವಸ'ವನ್ನು ಕರ್ನಾಟಕ ಸರ್ಕಾರವು ಒತ್ತಾಯಪೂರ್ವಕವಾಗಿ ಆಚರಿಸುವುದು ಕನ್ನಡಿಗರಿಗೆ ಮಾಡುವ ಅವಮಾನ' ಎಂದಿದ್ದಾರೆ.

10 ಪಾಲಿಕೆಗಳ ನೌಕರರ ಮುಷ್ಕರ

ಬೆಂಗಳೂರು: ರಾಜ್ಯ ನೌಕರರಿಗಿರುವ 'ಆರೋಗ್ಯ ಸಂಜೀವಿನಿ ಯೋಜನೆ'ಯನ್ನು 10 ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಜಾರಿಗೊಳಿಸದ ಹಿನ್ನೆಲೆಯಲ್ಲಿ ಸೆ.14 ರಿಂದ ಪಾಲಿಕೆ ಸಿಬ್ಬಂದಿ ಮುಷ್ಕರ ನಡೆಸಲಿದ್ದಾರೆ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ಪತ್ರ ಬರೆದು 'ಆರೋಗ್ಯ ಹದಗೆಟ್ಟಾಗ ಚಿಕಿತ್ಸೆಗಾಗಿ ಹಣ ಭರಿಸಲಾಗದೆ ಸಂಕಷ್ಟ ಅನುಭವಿಸುವ ಪರಿಸ್ಥಿತಿ ಇದೆ. ಆದ್ದರಿಂದ, ಈ ಯೋಜನೆಯನ್ನು ಪಾಲಿಕೆ ಸಿಬ್ಬಂದಿಗೂ ಅನುಷ್ಠಾನಗೊಳಿಸಬೇಕು ಎನ್ನುವ ಆಗ್ರಹ ಈವರೆಗೂ ಕೈಗೂಡಿಲ್ಲ' ಎಂದು ಸಂಘದ ಅಧ್ಯಕ್ಷ ಎ. ಅಮೃತ ರಾಜ್ ತಿಳಿಸಿದರು.

ನಿಧನ ವಾರ್ತೆ

ಪ್ರೊ. ಎಚ್.ಆರ್. ರಾಮಕೃಷ್ಣರಾವ್



ಬೆಂಗಳೂರು: ಕ್ರೈಸ್ಟ್ ಕಾಲೇಜಿನ ಭೌತವಿಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ವಿಭಾಗಗಳ ಮುಖ್ಯಸ್ಥರಾಗಿ ನಿವೃತ್ತರಾಗಿದ್ದ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶಕ್ಕೆ ಮಹತ್ವದ ಲೇಖನಗಳನ್ನು ಬರೆದಿದ್ದ ಪ್ರೊ.ಎಚ್.ಆರ್. ರಾಮಕೃಷ್ಣರಾವ್ (87) ಸೋಮವಾರ ಸಂಜೆ ನಿಧನರಾದರು.

ಜಯನಗರದ 7ನೇ ಹಂತದಲ್ಲಿ ವಾಸವಿದ್ದ ಇವರಿಗೆ ಮೂವರು ಪುತ್ರಿಯರು ಇದ್ದಾರೆ.

ಚಿತ್ರದುರ್ಗದ ಹೊಳಲ್ಕೆರೆಯಲ್ಲಿ ರಾಮಕೃಷ್ಣರಾವ್ ಜನಿಸಿದ್ದರು. ತಂದೆ ಎಚ್.ವಿ. ರಂಗರಾವ್, ತಾಯಿ ರಾಧಮ್ಮ. ಹುಟ್ಟೂರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮುಗಿಸಿದ್ದ ರಾಮಕೃಷ್ಣರಾವ್, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ, ಎಂ.ಎಸ್ಸಿ ಪದವಿ ಪಡೆದಿದ್ದರು. ಕ್ರೈಸ್ಟ್ ಕಾಲೇಜಿನ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದ್ದರು. ಕ್ರೈಸ್ಟ್ ಕಾಲೇಜು ಕನ್ನಡ ಸಂಘ ಸ್ಥಾಪನೆಯಾಗುವಲ್ಲಿಯೂ ಅವರ ಪಾತ್ರವಿತ್ತು.

ದೂರದರ್ಶನ ಹಾಗೂ ಆಕಾಶವಾಣಿ ಬಾನುಲಿ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದ ರಾಮಕೃಷ್ಣರಾವ್, ವಿಜ್ಞಾನ ವಿಷಯಗಳ 150ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದರು. ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಫೆಲೋಶಿಪ್ ಗೌರವಕ್ಕೂ ಪಾತ್ರರಾಗಿದ್ದರು. 2012ರಲ್ಲಿ 'ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ'ಯ ಅಧ್ಯಕ್ಷರಾಗಿ ಆಯ್ಕೆಯಾಗಿ ಕೆಲಸ ಮಾಡಿದ್ದರು.

'ನಿಶ್ಶಬ್ದದೊಳಗಿನ ಶಬ್ದ', 'ಶಕ್ತಿಗಾಥೆ', 'ಪರಮಾಣು ಪ್ರಪಂಚ' ಹಾಗೂ 'ಅದೃಶ್ಯ ಬೆಳಕು–ಎಕ್ಸ್‌ರೇ' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದರು.

ರಾಮಕೃಷ್ಣರಾವ್ ಅವರ ಅಂತಿಮ ಸಂಸ್ಕಾರವನ್ನು ಚಾಮರಾಜಪೇಟೆಯಲ್ಲಿ ಮಂಗಳವಾರ ನಡೆಸಲಾಗುವುದು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

JOB OPPORTUNITIES

Multiple Vacancy

A REPUTED developer company in Mysore is looking for Marketing Manager, Marketing Executive and Telecallers and Office Boy (Class-7). Attractive salary, any degree. 7483442527, 8088546307

PERSONAL

Lost

LOST OF DOCUMENT
I, NARASIMHAN T.J. R/o. #100, 1st Cross, Robertson Block, Gandhinagar, Bangalore - 21 have misplaced my Original GPA Document 3 Nos. / Identification: Survey No. 101, Site No. 18. Located at: 4th Cross, Adarshnagara, Moodalapalya, Bangalore - 560 072. While in transit. If anyone finds it kindly contact me at: 99452 68043 / 90084 61891.

Change of Name

14827215A NK/MT VINAY KUMAR SINGH 2ATC Mother name Records BHUTAYA DEVI instead of KESH KALI DEVI Notary KV Mani

I, NAGAPRASAD KATAPADI SHENOY R/o, #3, Navarathna Garden, Gubbalala, Doddkallasandra, Bengaluru-62 have changed my name as NAGAPRASAD SHENOY vide affidavit dated 18/08/2022 before Notary Jayappa. A, Bangalore

WE, N. James and Malarani, R/a No. 7 Dasanapura Hobli Ashraya Badavane, Mahadeshwara Nagara, Chikkagolarahatti, Lakshmipura, Bangalore-562123, have changed our minor son's name from J. MANOJ to J. MANOJ KUMAR, vide affidavit dated 10.09.2022 before Notary L. Gopalakrishna, Bangalore.

I, SAVITA KUMARI, Spouse of JC670747N SUB/SKT Sunil Kumar R/a Vill-Rupauli, Post- Rupauli, P.S.-Musrigharari, Dist-Samastipur, Bihar 848132, have changed my name from SAVITA to SAVITA KUMARI vide affidavit dated 12.09.2022 before Notary Bhagya Kumari N., Bangalore.

Book Your Classifieds Ads Online
Log in to dhclassifieds.com
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಸಮತೋಲನ ಸಾಮರಸ್ಯ

ರಘು ವಿ.

ಸಮತೋಲನ ಎಂಬುದು ಕೇವಲ ಭೌತಿಕ ನಿಯಮವಲ್ಲ; ಅದು ಮಾನಸಿಕ ಮತ್ತು ಆಂತರಿಕ ಮೌಲ್ಯವೂ ಹೌದು. ಜೈವಿಕ ಯಂತ್ರಶಾಸ್ತ್ರದಲ್ಲಿ (ಬಯೋಮೆಕಾನಿಕ್ಸ್) 'ಸಮತೋಲನ' ಎಂದರೆ ಆಧಾರದ ತಳದೊಳಗೆ ದೇಹದ ಗುರುತ್ವ ರೇಖೆಯನ್ನು (ದ್ರವ್ಯರಾಶಿಯ ಕೇಂದ್ರದಿಂದ ಲಂಬರೇಖೆ) ಭಂಗಿಯಲ್ಲಿ ಕನಿಷ್ಠತಮ ತೂಗಾಟದೊಂದಿಗೆ ಕಾಪಾಡಿಕೊಳ್ಳುವ ಸಾಮರ್ಥ್ಯ. ಅಂದರೆ ವಸ್ತುವೊಂದು ಉರುಳದಂತೆ ತನ್ನ ತೂಕವನ್ನು ಆಧರಿಸಿ ನಿಲ್ಲುವುದು. ಇಲ್ಲಿ ಎರಡು ಬಹು ಮುಖ್ಯವಾದ ಅಂಶಗಳಿವೆ. ಮೊದಲನೆಯದು ವಸ್ತುವಿನ ಆಕಾರ. ಎರಡನೆಯದು ಗುರುತ್ವಾಕರ್ಷಣ ಶಕ್ತಿ.

ವಸ್ತು ನಿಲ್ಲಬೇಕು ಉರುಳಬಾರದು ಎಂದಾದರೆ ಅದನ್ನು ಹಿಡಿದಿಡುವ ಗುರುತ್ವಾಕರ್ಷಣ ಶಕ್ತಿ ಬಲವಾಗಿರಬೇಕು. ಇದು ಗ್ರಹದಿಂದ ಗ್ರಹಕ್ಕೆ ಬದಲಾಗುತ್ತದೆ. ಮತ್ತು ಅದು ಗ್ರಹದ ತೂಕ ಮತ್ತು ಅದರ ತಿರುಗುವಿಕೆಯ ವೇಗವನ್ನು ಆಧರಿಸಿರುತ್ತದೆ ಎಂಬುದನ್ನು ಮರೆಯಬಾರದು. ಇವೆಲ್ಲ ಹೇಗೆ ಒಂದಕ್ಕೊಂದು ಜೋಡಣೆಯಾಗಿ ನಮ್ಮ ಆಂತರಿಕ ಬದುಕಿಗೂ ಅನ್ವಯವಾಗುತ್ತದೆ ಎಂದು ಆಲೋಚಿಸಿದಾಗ ಮಾತು ಮೂಕವಾಗುತ್ತದೆ. ಎರಡನೆಯ ಗಮನಿಕೆಯ ಅಂಶ ವಸ್ತುವಿನ ಆಕಾರ. ಒಂದೊಂದು ವಸ್ತುವಿನ ಆಕಾರವೂ ಬೇರೆ. ಎಷ್ಟೇ ನಿಖರವಾದದ್ದು ಎನಿಸಿಕೊಂಡರೂ, ಅದು ಅದ್ಭುತ ಯಂತ್ರದಲ್ಲೇ ಸೃಷ್ಟಿಯಾದರೂ ಒಂದು ವಸ್ತುವಿದ್ದಂತೆ ಇನ್ನೊಂದು ಇರಲಾರದು. ಇದು ಆರಂಭದ ಹಂತದ ಸೂಕ್ಷ್ಮ ವ್ಯತ್ಯಾಸ. ಆದರೆ ವಸ್ತು ಸವಕಳಿಯಾದಂತೆ ಮತ್ತೆ ಅದರ ಆಕಾರ ಬದಲಾಗುತ್ತದೆ, ಅದರ ಗುರುತ್ವರೇಖೆ ಕೂಡ ಬದಲಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ನಾವು ಬಳಸುವ ನಾಲ್ಕು ಚಕ್ರ ವಾಹನಗಳ 'ವ್ಹೀಲ್ ಅಲೈನ್‌ಮೆಂಟ್'. ಕಾರು ಕೊಳ್ಳುವಾಗ ಅದರ ವ್ಹೀಲ್ ಅನ್ನು ಅಲೈನ್ ಮಾಡಿರುತ್ತಾರೆ. ಆದರೆ ಮುಂದೆಯೂ ನಾವು ಆಗಾಗ ಅಲೈನ್ ಮಾಡಿಸುತ್ತಲೇ ಇರುತ್ತೇವೆ.

ಸಮತೋಲನಕ್ಕೂ ಸಾಮರಸ್ಯಕ್ಕೂ ಹತ್ತಿರದ ನಂಟು, ಗಂಟು. ವಸ್ತುಗಳ ಸಮತೋಲನ ಸರಿಯಿದ್ದಾಗ ಮಾತ್ರ ಅಲ್ಲಿ ಸಾಮರಸ್ಯ ಸಾಧ್ಯ. ವಸ್ತುಗಳನ್ನು ಒಂದರ ಪಕ್ಕ ಒಂದು ಒಪ್ಪವಾಗಿ ಜೋಡಿಸಿಬಿಟ್ಟರೆ ಅದು ಯಂತ್ರವಾಗದು. ಅವು ರೂಪಿತವಾದ ನಿರ್ದಿಷ್ಟ ಕಾರ್ಯವನ್ನು ಸಮರ್ಪಕವಾಗಿ ನೆರವೇರಿಸಲು ಸಾಧ್ಯವಾಗುವಂತೆ ಅವು ಪರಸ್ಪರ ಹೊಂದಿಕೊಂಡು ಮಿಳಿತವಾಗಿ ಒಟ್ಟೂ ಯಂತ್ರದ ನಿರೀಕ್ಷಿತ ಕಾರ್ಯವನ್ನು ಮಾಡುವಂತೆ ಇರಬೇಕು. ವಸ್ತುಗಳ ಸಂಯೋಜನೆಯಿಂದ ಉಪಕರಣಗಳು. ಹೀಗಾಗಿ ಅವುಗಳ ಜೋಡಣೆ ಸರಿಯಾಗಿ ಆಗಬೇಕಾದರೆ, ಸಾಮರಸ್ಯದ ಪೂರ್ಣಫಲ ಪಡೆಯಬೇಕಾದರೆ ಅಲ್ಲಿ ಎಲ್ಲವೂ ಸಮತೋಲನದಲ್ಲಿರಬೇಕು. ಅರ್ಥಾತ್, ಬಿಡಿಭಾಗಗಳ ಸಮತೋಲನದ ಸಮನ್ವಯತೆಯೇ ಸಾಮರಸ್ಯ.

> ಸಮತೋಲನಕ್ಕೂ ಸಾಮರಸ್ಯಕ್ಕೂ ಹತ್ತಿರದ ನಂಟು, ಗಂಟು. ವಸ್ತುಗಳ ಸಮತೋಲನ ಸರಿಯಿದ್ದಾಗ ಮಾತ್ರ ಅಲ್ಲಿ ಸಾಮರಸ್ಯ ಸಾಧ್ಯ.

ಇದನ್ನು ಬಹಳ ಆಳವಾಗಿ ಭಾವಿಸಿದಾಗ ಕಣಗಳ ಸಂಯೋಜನೆಯಿಂದ ಅಣುವು, ಅಣುಗಳ ಸಂಯೋಜನೆಯಿಂದ ವಸ್ತುವೂ, ವಸ್ತುಗಳ ಸಂಯೋಜನೆಯಿಂದ ಯಂತ್ರವೂ ರೂಪುಗೊಳ್ಳುತ್ತದೆ ಎಂದು ತಿಳಿಯುತ್ತೇವೆ. 'ಅಣೋರಣೀಯಾನ್ ಮಹತೋಮಹಿಯಾನ್' – ಎಂಬ ತತ್ತ್ವವೇ ಇಲ್ಲಿದೆ.

ಭೌತಜಗತ್ತಿನ ಈ ಸೂತ್ರಗಳನ್ನು ಜೈವಿಕ ಜಗತ್ತಿಗೂ ಮನುಷ್ಯ ಮತ್ತು ಸಮಾಜಕ್ಕೂ ಅನ್ವಯಿಸಿದಾಗ ಇದು ಮತ್ತಷ್ಟು ಸುಂದರವಾಗಿ ಗೋಚರಿಸುತ್ತದೆ. ಜೀವ-ನಿರ್ಜೀವ ಎಂಬ ವರ್ಗೀಕರಣವೂ ಒಂದರ್ಥದಲ್ಲಿ ಅಪಸವ್ಯವೇ. ಏಕೆಂದರೆ ಇರುವುದೆಲ್ಲವೂ ಒಂದೇ ಶಕ್ತಿಯ ಆವಿರ್ಭಾವ. ಕೆಲವದರಲ್ಲಿ ಅದರ ಸ್ಪಂದನ ಕನಿಷ್ಠವಾಗಿದ್ದು ಅವು ನಿರ್ಜೀವ ಎನಿಸಿಕೊಳ್ಳುತ್ತವೆ. ಕೆಲವದರಲ್ಲಿ ಅದು ಗರಿಷ್ಠ ಮಟ್ಟದಲ್ಲಿದ್ದು ಜೀವ ಎನಿಸಿಕೊಳ್ಳುತ್ತದೆ. ಅಲ್ಲಿಂದ ಮತ್ತೂ ಮುಂದುವರೆಯುತ್ತದೆ. ಆ ವಿಚಾರ 'ಅಧ್ಯಾತ್ಮ' ಎಂದು ಎಸಿಕೊಳ್ಳುತ್ತದೆ. ಅದು ಅಂತರಂಗದ ಪಯಣ. ಅದು ಪ್ರತ್ಯೇಕ ವಿಚಾರ. ಪ್ರಸ್ತುತ ಸಮತೋಲನದ ಸೂತ್ರವನ್ನು ಜೀವಜಗತ್ತಿಗೆ ಅನ್ವಯಿಸಿದಾಗ ವ್ಯಷ್ಟಿಮಟ್ಟದಲ್ಲಿ ಅದು ದೇಹದ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಂಶಗಳ ಸಮತೋಲನ. ಅಂದರೆ ಇವು ಮೂರೂ ಸಾಧ್ಯವಾದಷ್ಟರ ಮಟ್ಟಿಗೆ ಅತಿ ಉನ್ನತ ಶ್ರೇಣಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಮತ್ತು ಅವುಗಳ ನಡುವೆ ಸಾಮರಸ್ಯವೂ ಇರಬೇಕು. ಅಂತಹ ವ್ಯಕ್ತಿತ್ವದಿಂದ ಅಪರಿಮಿತ ಸಾಧನೆ ಸಾಧ್ಯ. ಇಂತಹ ಸಮರ್ಥ ವ್ಯಕ್ತಿಗಳ ನಡುವಣ ಸಾಮರಸ್ಯವೇ ಸಂಸ್ಥೆ, ಸಂಘಟನೆ, ಸಮಾಜ. ಎಲ್ಲಿ ಸಾಮರಸ್ಯ ಕೆಡುತ್ತದೋ ಅಲ್ಲಿ ಸಮತೋಲನ ತಪ್ಪುತ್ತದೆ. ಸಮತೋಲನ ತಪ್ಪಿದೆಡೆಯಲ್ಲಿ ಪ್ರಗತಿ ಕುಂಠಿತವಾಗುತ್ತದೆ. ಇದು ಸಹಜ, ನಿಯಮ.

ಇಷ್ಟಾಗಿಯೂ ವ್ಯಕ್ತಿಯಲ್ಲಿ ಸಮಾಜದಲ್ಲಿ ಅದೇಕೆ ಅಸಮತೋಲನಗಳಿವೆ? ಇದು ಹೀಗೇಯೇ? ಹೀಗಾದರೆ ಈ ಜಗತ್ತಿನಲ್ಲಿ ನಮ್ಮ ಬದುಕು ಹೇಗೆ ಎಂಬೆಲ್ಲ ಆಲೋಚನೆ ಬರುತ್ತದೆ. ಜಗತ್ತಿನಲ್ಲಿ ತಾವೊಬ್ಬರೇ ಸರಿ, ಉಳಿದವರೆಲ್ಲ ತಪ್ಪು ಎಂದು ಎಲ್ಲರೂ ಭಾವಿಸುತ್ತೇವೆ. ಆದರೆ ಬಾಯಿಬಿಟ್ಟು ಹೇಳುವುದಿಲ್ಲ ಅಷ್ಟೆ! ಗೊಂದಲದ ಗೂಡೊಳಗೆ ನಿಂದನೆಯ ಮಾಡೊಳಗೆ ನೆಟ್ಟಗೆ ನಿಲ್ಲುವವನೇ ಯೋಗಿ. ಜಗತ್ತಿನ ನಡೆಯೇ ಹಾಗೇ; 'ವಿಕಟ ಪರಿಹಾಸ, ಆಸ್ಯ ಗಂಭೀರ... ವಿಶ್ವಾಸದುಪಚಾರ; ಹುಣಿಸೆಮಣಸಾಹಾರ.' ಆದ್ದರಿಂದಲೇ ಜಗತ್ತಿನಲ್ಲಿ ಸಮತೋಲನಕ್ಕಾಗಿ ಬಹುಬೇಡಿಕೆಯಿದೆ. ಸಮತೋಲನದ ಸಾಮರಸ್ಯವೇ ಯೋಗ ಮತ್ತು ಪ್ರಾಣಾಯಾಮ. ಎಲ್ಲ ಅಸಮತೆಗಳ ನಡುವೆ ಧೃತಿಗೆಡದೆ ನಿಲುವವನೆ ಯೋಗಿ. ಆದರೆ ಇದರ ಸಾಧನೆಗೆ ಬೇಕಾಗುವ ಪ್ರಯತ್ನ ಮಾತ್ರ ಅಪಾರ. ಇದನ್ನು ಕಗ್ಗ ಸೊಗಸಾಗಿ ಹೇಳುತ್ತದೆ: 'ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು, ಅಸಮಂಜಸದಿ ಸಮನ್ವಯ ಸೂತ್ರ ನಯವ, ವೆಸನಮಯ ಸಂಸಾರದಲಿ ವಿನೋದವ ಕಾಣ್ಬ ರಸಿಕತೆಯೆ ಯೋಗವೆಲೊ – ಮಂಕುತಿಮ್ಮ.'

ಜಗತ್ತೆಂಬ ಸಂಸಾರದ ಅಸಮತೆಯ ಕೃತ್ರಿಮತೆಯಲ್ಲಿ ವಿನೋದವನ್ನು ಕಾಣುವ ಯೋಗರಸಿಕತೆ ನಮಗೆಲ್ಲ ದೊರೆಯಲಿ ಎಂದು ಆಶಿಸೋಣ. ❖

- ಜಗತ್ತಿನಲ್ಲಿ ತಾವೊಬ್ಬರೇ ಸರಿ, ಉಳಿದವರೆಲ್ಲ ತಪ್ಪು ಎಂದು ಎಲ್ಲರೂ ಭಾವಿಸುತ್ತೇವೆ. ಆದರೆ ಬಾಯಿಬಿಟ್ಟು ಹೇಳುವುದಿಲ್ಲ ಅಷ್ಟೆ!
- ವಸ್ತು ನಿಲ್ಲಬೇಕು ಉರುಳಬಾರದು ಎಂದಾದರೆ ಅದನ್ನು ಹಿಡಿದಿಡುವ ಗುರುತ್ವಾಕರ್ಷಣ ಶಕ್ತಿ ಬಲವಾಗಿರಬೇಕು.
- ಸಮತೋಲನದ ಸಾಮರಸ್ಯವೇ ಯೋಗ ಮತ್ತು ಪ್ರಾಣಾಯಾಮ. ಎಲ್ಲ ಅಸಮತೆಗಳ ನಡುವೆ ಧೃತಿಗೆಡದೆ ನಿಲುವವನೆ ಯೋಗಿ.

ಮನಸ್ಸನ್ನೇ 'ಮಗು'ವಾಗಿಸಿಕೊಳ್ಳಿ

ಡಾ. ಕೆ. ಎಸ್. ಪವಿತ್ರ

ವಾಲ್ಟ್ ಡಿಸ್ನಿ ತನ್ನ ಸಿನಿಮಾಗಳನ್ನು ಪ್ರಶ್ನಿಸಿದ ಹಿರಿಯನೊಬ್ಬನಿಗೆ ಹೇಳಿದನಂತೆ: 'ಬೆಳೆಯುವುದು ಎರಡು ರೀತಿಯಲ್ಲಿ ಆಗುತ್ತದೆ. ವಯಸ್ಸಾಗಿ ಬೆಳೆಯುವುದು ಅನಿವಾರ್ಯ. ಆದರೆ ಮನಸ್ಸನ್ನು ಆನಂದದಿಂದ ಬೆಳೆಸಿಕೊಳ್ಳುವುದು ಆಯ್ಕೆ!'

ಹೌದಲ್ಲ! ದೇಹ ಬೆಳೆಯುವುದನ್ನು, ತಲೆಗೆ ಚಿಂತೆಗಳು ಮುತ್ತಿಕೊಂಡು ಕಾಡುವುದನ್ನು ನಾವು ತಡೆಯಲು ಸಾಧ್ಯವಿಲ್ಲ. ಆದರೆ 'ಮನಸ್ಸು' ಮಗುವಿನಂತೆ ಯೋಚಿಸುವುದನ್ನು ನಾವು ಕೆಲಮಟ್ಟಿಗಾದರೂ ಕಾಪಾಡಿಕೊಂಡರೆ?

ಮಕ್ಕಳಿಗೆ ಸಂಬಂಧಿಸಿದ ಶಿಕ್ಷಣ, ಸಾಹಿತ್ಯ, ಸಿನಿಮಾ, ಉಡುಗೆ, ಅವರನ್ನು ಹೇಗೆ ಬೆಳೆಸಬೇಕು ಎಲ್ಲವನ್ನೂ ನಾವು ಚರ್ಚೆ ಮಾಡುತ್ತೇವೆ; ಹೆಚ್ಚಿನವನ್ನು ಅನುಷ್ಠಾನಕ್ಕೆ ತರಲು ಸೋಲುತ್ತೇವೆ. ಇವುಗಳ ಬದಲು ನಮ್ಮ ಮನಸ್ಸನ್ನೇ 'ಮಗು'ವಾಗಿ ನೋಡುವ ಕೌಶಲದ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ?

ಮನೋಲೋಕದಲ್ಲಿ ತುಂಬಾ ಹಿಂದೆ ಪ್ರಯಾಣಿಸಿದರೆ ಮನಸ್ಸಿಗೆ ಮೂರು ಭಾಗಗಳಿವೆ ಎಂದು ಫ್ರಾಯ್ಡ್ ಹೇಳಿದ್ದಾನಷ್ಟೆ. ಅದರಲ್ಲಿ ಒಂದು ಮಗುವಿನಂತೆ ವರ್ತಿಸುತ್ತದೆ, ಮತ್ತೊಂದು ಹಿರಿಯನಂತೆ, ಇನ್ನೊಂದು ಇವೆರಡರ ನಡುವೆ ಸೇತುವೆಯಾಗಿ ಸ್ವಲ್ಪ ಸಮಾಧಾನದಿಂದ ವರ್ತಿಸುತ್ತದೆ ಎಂಬುದು ಫ್ರಾಯ್ಡ್ ಸಿದ್ಧಾಂತ. ಈ ಸಿದ್ಧಾಂತವೇ ಹಂತ ಹಂತವಾಗಿ ಬೆಳೆಯುತ್ತಾ, ಬದಲಾಗುತ್ತಾ, ಮನಸ್ಸು ಇಂದು ಮಿದುಳಿನದೇ ಭಾಗ ಎಂದು ನಿರೂಪಿತವಾಗಿದೆ. ಆದರೂ 'ಮನಸ್ಸು ಮಗುವಿನಂತೆ ವರ್ತಿಸುತ್ತದೆ' ಎಂಬ ಅಂಶವನ್ನೇ ಗಮನದಲ್ಲಿಟ್ಟುಕೊಳ್ಳೋಣ.

ಮನಸ್ಸಿನಲ್ಲಿಯೇ ಮಾತನಾಡಿಕೊಳ್ಳುವ ಅಭ್ಯಾಸ ನಿಮಗಿದೆಯಷ್ಟೆ. ಬೆಳಗಿನ ಜಾವ 'ವಾಕಿಂಗ್' ಹೋಗಲು ಏಳಬೇಕು. ಮನಸ್ಸು ಒಪ್ಪುತ್ತಿಲ್ಲ, ನಿದ್ರೆ ಮಾಡಲೇಬೇಕು ಎಂದು ಅನಿಸುತ್ತಿದೆ, ಅಂದರೆ ಮನಸ್ಸು ಹಠ ಮಾಡುತ್ತಿದೆ. ನಿಮ್ಮ ಮಗ/ಮಗಳು ನಿದ್ರೆಯಿಂದ ನೀವು ಬೆಳಿಗ್ಗೆ ಟ್ಯೂಷನ್‌ಗೆ/ಓದಿಗೆ ಏಳೆಂದು ಎಬ್ಬಿಸಿದಾಗ ಏಳುವುದಿಲ್ಲ. ಆಗ ನೀವು ಏನು ಮಾಡುತ್ತೀರಿ? ಹಿರಿಯರಾಗಿ, ಮುಂದಿನ ಭವಿಷ್ಯವನ್ನೆಲ್ಲಾ ಆ ಕ್ಷಣದಲ್ಲಿ ನೆನೆದು, ನಿಮ್ಮ ಮಗುವಿಗೆ ಗದರಿಸುತ್ತೀರಿ, ಅನುನಯಿಸುತ್ತೀರಿ, ತಣ್ಣೀರು ಹಾಕಿಯಾದರೂ ಎಬ್ಬಿಸುತ್ತೀರಿ ಅಲ್ಲವೆ? ಈಗ ನಿಮ್ಮ ಮಗುವಿನ ಜಾಗದಲ್ಲಿ ಮಲಗಿರುವುದು, ಏಳಲು ಹಠ ಮಾಡುತ್ತಿರುವುದು ನಿಮ್ಮದೇ ಮನಸ್ಸು. ಏನು ಮಾಡಬೇಕು? ನಿಮ್ಮ ಮುಂದಿನ ಆರೋಗ್ಯವನ್ನು ನೆನೆದು, ವೈದ್ಯರ ಸಲಹೆ ನೆನಪಿಸಿಕೊಂಡು, ಆಗಬಹುದಾದ ಪರಿಣಾಮಗಳನ್ನೂ ಊಹಿಸಿ ಮನಸ್ಸೆಂಬ ಮಗುವನ್ನು ಗದರಿಸಿ, ಅನುನಯಿಸಿ ಎಚ್ಚರಿಸಬೇಕು. ವಾಕಿಂಗ್ ಹೋಗಲು ಒಡಂಬಡಿಸಬೇಕು. ಓದಿಗೆಂದು / ಟ್ಯೂಷನ್‌ಗೆಂದು ಎಬ್ಬಿಸಿದ ನಿಮ್ಮ ಮಗ/ಮಗಳು ಒಮ್ಮೆ ಎದ್ದಾಕ್ಷಣ ಆರಾಮವಾಗಿ ಶಾಲೆ/ ಓದು/ ಟ್ಯೂಷನ್ ಎಂದು ಸ್ನೇಹಿತರೊಂದಿಗೆ ಕಾಲ ಕಳೆಯುವುದು ಸಾಧ್ಯವಾದಂತೆ ನಿಮ್ಮದೇ ಮನಸ್ಸಿಗೂ ಸಾಧ್ಯವಾಗುತ್ತದೆ.

ಯಾರೋ ಬೈದಿದ್ದಾರೆ, ಮನಸ್ಸಿಗೆ ತುಂಬಾ ಬೇಸರವಾಗಿದೆ. ಯಾವುದೋ ಕೆಲಸವಾಗಿಲ್ಲ, ಮನಸ್ಸು ಪ್ರಕ್ಷುಬ್ಧವಾಗಿದೆ. ಹೊರಬರುವುದು ಹೇಗೆ? ಹಿಂದಿನ ದಿನ ನಿಮ್ಮ ಮಗ/ಮಗಳು ಸ್ನೇಹಿತರೊಡನೆ ಜಗಳವಾಡಿ ಬಂದು ಕುಳಿತಿದ್ದಾಗ ನೀವೇನು ಮಾಡಿದ್ದಿರೀ? ಸ್ವಲ್ಪ ನೆನಪಿಸಿಕೊಳ್ಳಿ ಅಳುತ್ತಿದ್ದ ಹುಡುಗ/ ಹುಡುಗಿಗೆ ಸಮಾಧಾನ ಮಾಡಿದ್ದಿರಿ, 'ಇವೆಲ್ಲವೂ ಸಹಜ, ಆಟದಲ್ಲಿ ಇದ್ದದ್ದೆ' ಎಂದು ಸಂತೈಸಿದ್ದಿರಿ. ಇನ್ನೂ ಹೊರಬರದಾಗ, 'ಈಗ ಹೋಗು ಆಟಕ್ಕೆ, ಇಲ್ಲವೇ ಬಾ ಗಣಿತ ಹೇಳಿಕೊಡ್ತೀನಿ, ಓದೋಣ' ಎಂದು ಗದರಿಸಿದ್ದಿರಿ. ಮನಸ್ಸಿಲ್ಲದ ಮನಸ್ಸಿನಿಂದಲೇ ಆಟಕ್ಕೆ ಓಡಿದ ಮಗ/ಮಗಳು ಆರಾಮವಾಗಿ ಹಿಂತಿರುಗಿ ಮತ್ತೆ ಎಂದಿನಂತಾಗಲು ನೀವು ಕಾರಣವಾಗಿದ್ದಿರಿ. ಈಗ ಇದೇ ತಂತ್ರವನ್ನು ನಿಮ್ಮ ಮನಸ್ಸೆಂಬ ಮಗುವಿಗೆ ಸ್ವಲ್ಪ ಪ್ರಯೋಗಿಸಲು ಪ್ರಯತ್ನಿಸಿ ಸಂತೈಸಿ, ಸಾಂತ್ವನ ಹೇಳಿಕೊಳ್ಳಿ, ಮನಸ್ಸು ಕೇಳುತ್ತಿಲ್ಲವೇ? ಗದರಿಸಿ, ಎಳೆದುಕೊಂಡು ಹೋಗಿ ಬೇರೆ ಕೆಲಸ ಮಾಡಲು ಬಿಡಿ; ಮನಸ್ಸು ಆಟವಾಡಿ ಆರಾಮವಾಗಿ ಮರಳಿದ ಮಗುವಿನಂತೆ ತಾನೂ ಆರಾಮಕ್ಕೆ ಮರಳುತ್ತದೆ ಗಾಯ-ನೋವಿನಿಂದ ಸುಲಭವಾಗಿ ಚೇತರಿಸಿಕೊಳ್ಳುತ್ತದೆ.

ಮನಸ್ಸನ್ನು ಮಗುವಿನಂತೆ ಸಂತೈಸಿ-ಹೆದರಿಸಿ ಬೇಕಾದ ಹಾಗೆ ದುಡಿಸಿಕೊಳ್ಳುವುದು ಮಾತ್ರವಲ್ಲ, ಆಗಾಗ್ಗೆ ಮನಸ್ಸೆಂಬ ಮಗುವಿನ ಮೇಲೆ ದಬ್ಬಾಳಿಕೆ ನಡೆಸದಿರುವುದನ್ನೂ ನಾವು ಕಲಿಯಲೇಬೇಕು. ಏಕೆಂದರೆ ಹಿರಿಯರಾಗಿ ಮಕ್ಕಳ ಮೇಲೆ ಹಾಗೂ ಮಾಡುವುದು ಅಭ್ಯಾಸವಾಗಿಬಿಟ್ಟಿರುತ್ತದಲ್ಲ! ಪ್ರತಿದಿನ ವಾಕಿಂಗ್ ಹೋಗುತ್ತಲೇ ಇದ್ದೀರಿ ಒಂದು ದಿನ ಜೋರಾಗಿ ಮಳೆ ಬರುತ್ತಿದೆ, ಆದರೂ ಛತ್ರಿ ಹಿಡಿದಾದರೂ ಹೋಗಲೇಬೇಕು ಎಂದು ಮನಸ್ಸು ಹಠ ಮಾಡುತ್ತಿದೆ ಆಗ? ಮಕ್ಕಳೊಡನೆ ಇಂಥ ಸಂದರ್ಭದಲ್ಲಿ ಹೇಗೆ ವರ್ತಿಸುತ್ತೇವೆ? 'ಇದೊಂದು ದಿನ ಬೇಡ ನಾನು ಹೇಳಿದ ಹಾಗೆ ಕೇಳು' ಎಂದು ಮಗು ಸಿಟ್ಟು ಮಾಡಿದರೂ ತಡೆಯುತ್ತೇವಷ್ಟೆ ಅದೇ ಉಪಾಯವನ್ನೇ ಇಲ್ಲಿಯೂ ಅನುಸರಿಸುವುದು ಅಗತ್ಯ.

ನಮ್ಮದೇ ಮನಸ್ಸನ್ನು 'ಮಗು'ವಾಗಿ ಭಾವಿಸುವುದರಲ್ಲಿ ಮತ್ತೊಂದು ಪ್ರಯೋಜನವೂ ಇದೆ. ನಮ್ಮ 'ಮನಸ್ಸ'ನ್ನು ನಾವು ಬಹು ನಿರ್ದಯೆಯಿಂದ ನೋಡಲಾರೆವಷ್ಟೆ. ಕ್ರಮೇಣ ನಾವು ನಮ್ಮದೇ 'ಮನಸ್ಸ'ನ್ನು ಮಗುವಾಗಿ ಪಾಲಿಸುವುದಕ್ಕೂ, ನಮ್ಮ ಮಕ್ಕಳನ್ನು ಹಿರಿಯರಾಗಿ ಪಾಲಿಸುವುದಕ್ಕೂ ಅಂತರಗಳು ಸ್ಪಷ್ಟವಾಗಿಬಿಡುತ್ತೇವೆ. ಆಗ ನಮ್ಮ ಕೈಯ್ಯಲ್ಲಿ 'ಸಿಕ್ಕಿ'ಹಾಕಿಕೊಂಡಿರುವ ಮಕ್ಕಳ ಬಗ್ಗೆ ಕಿಂಚಿತ್ ಸಹಾನುಭೂತಿ ಸಾಧ್ಯವಾಗುತ್ತದೆ. ಮನೋವೈದ್ಯಕೀಯ ಮತ್ತೆ ಮತ್ತೆ ಹೇಳುವ ಇನ್ನೊಬ್ಬರ ಸ್ಥಾನದಲ್ಲಿ ನಿಂತು ನೋಡುವ ಕೌಶಲ - 'ಅನುಭವದ ಆತ್ಮಾನುಭೂತಿ' 'ಎಂಪಥಿ' ನಮ್ಮ ಸಾಮರ್ಥ್ಯವಾಗುತ್ತದೆ. ಇದರಿಂದ ನಮ್ಮ ಮನಸ್ಸಿನ ಪಾಲನೆಯಷ್ಟೇ ಅಲ್ಲ; ನಮ್ಮ ಮಕ್ಕಳ ಪಾಲನೆಯಲ್ಲಿಯೂ ನಾವು ಯಶಸ್ವಿಗಳಾಗುತ್ತೇವೆ. ಮಕ್ಕಳ ಶಿಕ್ಷಣದ 'ಮಾಂಟೆಸರಿ' ಪದ್ಧತಿಯನ್ನು ಸ್ಥಾಪಿಸಿದ ಮಾರಿಯಾ ಮಾಂಟೆಸರಿ ಹೇಳಿದ ಮಾತು: 'ಮಕ್ಕಳಿಗೆ ಜ್ಞಾನವನ್ನು ಹೀರಿಕೊಳ್ಳುವ ಮನಸ್ಸುಗಳಿವೆ. ಆ ಮನಸ್ಸುಗಳಿಗೆ ತನ್ನಿಂತಾನೇ ಕಲಿಸಿಕೊಳ್ಳಬಲ್ಲ ಶಕ್ತಿಯಿದೆ'. ಈ ಮಾತು ಮನಸ್ಸೆಂಬ ಮಗುವಿಗೂ ಅನ್ವಯಿಸುತ್ತದೆ ಎಂದು ಮರೆಯದಿರೋಣ! ❖

VIBRANT, MOODBIDRI
VAIL
VIBRANT ACADEMY for Innovative Learning
Our Team

Mr. Subhash Jha
Director & CEO
PHYSICS Faculty
Alumini of IIT BOMBAY
Ex-faculty-RESONANCE Kota, Rajasthan.
Teaching experience of 9 years

Mr. Chandrashekhara Raje Urs
Director (MEDICAL EXCEL)
Chemistry Faculty
Teaching experience of 25 years

Dr. S.N. Venkatesh Nayak
Director (VISTARA)
Botany Faculty
Renowned author of BIOLOGY Tutor book for various competitive exam (NEET/CET)
Teaching experience of 25 years

Mr. Sharath Gore
Director (Operations)
PHYSICS Faculty
Ex-faculty of BASE Educational Services, Bangalore
Teaching experience of 10 years

Mr. S. M. Basha
Director (AKANKSHA)
Chemistry Faculty
Ex-faculty of AAKASH Institute (Delhi, Mumbai)
Teaching experience of 25 years.

Mr. Yogesh Bedekar
Director (ACADEMICS)
ZOOLOGY faculty
Teaching experience of 25 years (India & Abroad)

NEET LONG TERM COACHING or REPEATER COURSE
For NEET 2023
6 EXPERT TEACHERS for every subject for Assured Results

- Special focus will be given to improve the fundamentals of students
- DPP (Daily Practice Papers) will be given
- Cumulative testing, weekly test and mock tests.
- Daily study hours in presence of teachers.
- Special study hour, problem solving and discussion sessions will be there for average and below average students
- Focus on improving problem solving skills (Difficulty in problem solving in physics and in some chemistry topics is very common problem with repeaters)
- Separate hostels for boys and girls within the campus
- Exclusive Girls campus of capacity 120. (Seats will be given on first come first serve basis)
- Doubt solving sessions
- Fully air conditioned classrooms

CONTACT: 74114 17028 90356 72269
e-mail: info@vibrantpucollege.com

ಮುಂದುವರಿದ ಭೀಮಾ ನದಿ ಅಬ್ಬರ • ಅಪಾರ ಪ್ರಮಾಣದ ಬೆಳೆ ನಾಶ • ಗೋಡೆ ಕುಸಿದು ಯುವಕ ಸಾವು

ರಸ್ತೆ– ಸೇತುವೆ ಜಲಾವೃತ: ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಘಟಪ್ರಭೆಯ ಪ್ರವಾಹದಿಂದ ಗೋಕಾಕ ನಗರದ ಹಳೆಯ ದನಗಳ ಪೇಟೆ ಸಂಪೂರ್ಣವಾಗಿ ಜಲಾವೃತವಾಗಿರುವುದು

ಬೆಂಗಳೂರು: ರಾಜ್ಯದ ಬೆಳಗಾವಿ, ಬಾಗಲಕೋಟೆ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು ಜಿಲ್ಲೆಯಲ್ಲಿ ಸೋಮವಾರವೂ ಭಾರಿ ಮಳೆಯಾಗಿದೆ. ಹಲವೆಡೆ ರಸ್ತೆ, ಸೇತುವೆಗಳು ಮುಳುಗಡೆಯಾಗಿ, ಸಂಪರ್ಕ ಕಡಿತಗೊಂಡಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕ್ಯಾದಗಿಯಲ್ಲಿ ತಡರಾತ್ರಿ ಮನೆಯ ಗೋಡೆ ಕುಸಿದು ಚಂದ್ರಶೇಖರ ಹರಿಜನ (24) ಮೃತಪಟ್ಟಿದ್ದಾರೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳಿಯ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯ ಎರಡು ಕೊಠಡಿಗಳ ಚಾವಣಿ ಭಾನುವಾರ ರಾತ್ರಿ ಕುಸಿದು ಬಿದ್ದಿದೆ.

ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ ಉಜನಿ ಜಲಾಶಯದಿಂದ ನೀರನ್ನು ಭೀಮಾ ನದಿಗೆ ಬಿಡಲಾಗುತ್ತಿದೆ. ಅಫಜಲಪುರ ತಾಲ್ಲೂಕಿನ ಹಲವೆಡೆ ಭೀಮಾ ನದಿ, ಇತರೆ ಹಳ್ಳಗಳು ಉಕ್ಕಿ ಹರಿದವು.

ಅಮರ್ಜಾ ನದಿಯ ಉಪನದಿಯಾದ ಬೋರಿಹಳ್ಳ ಸೇರಿ ಸಣ್ಣಪುಟ್ಟ ಹಳ್ಳಗಳು ಭರ್ತಿಯಾಗಿ ಹರಿಯುತ್ತಿರುವುದರಿಂದ ಅಫಜಲಪುರ ತಾಲ್ಲೂಕಿನ ಗೌರ್ (ಬಿ), ದಿಕ್ಸಂಗಿ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆ ಸಂಪೂರ್ಣ ಜಲಾವೃತವಾಗಿತ್ತು. ತೆಲ್ಲೂರು ಗ್ರಾಮದಿಂದ ಕೆರಕನಹಳ್ಳಿ ಮೂಲಕ ಘತ್ತರಗಾ ಗ್ರಾಮಕ್ಕೆ ತೆರಳುವ ರಸ್ತೆ ಸಂಪರ್ಕ ಪ್ರವಾಹದಿಂದಾಗಿ ಸ್ಥಗಿತಗೊಂಡಿದೆ. ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ಸೋಮವಾರವೂ ಸೊನ್ನ ಭೀಮಾ ಬ್ಯಾರೇಜಿನ 11 ಗೇಟ್‌ಗಳ ಮೂಲಕ 1 ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಬೆಳಗಾವಿ ಹಾಗೂ ಮಹಾರಾಷ್ಟ್ರದ ಗಡಿಯಲ್ಲಿ ವಿಪರೀತ ಮಳೆಯಾಗಿದೆ. ಘಟಪ್ರಭಾ, ಮಾರ್ಕಂಡೇಯ ಹಾಗೂ ಹಿರಣ್ಯಕೇಶಿ ನದಿಗಳ ನೀರು ಉಕ್ಕೇರಿದ ಪರಿಣಾಮ, ಬೆಳಗಾವಿ ಜಿಲ್ಲೆಯ ಗೋಕಾಕ ನಗರದ ಕೆಲವು ರಸ್ತೆಗಳಿಗೆ ನೀರು ನುಗ್ಗಿದೆ. 200ಕ್ಕೂ ಹೆಚ್ಚು ಮನೆಗಳ ಮುಂದೆ 2 ಅಡಿಯಷ್ಟು ನೀರು ಸಂಗ್ರಹಗೊಂಡಿದ್ದು, ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಘಟಪ್ರಭಾ ನದಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ರಾಜಾ ಲಖಮಗೌಡ ಜಲಾಶಯದಿಂದ (ಹಿಡಕಲ್) ಘಟಪ್ರಭಾ ನದಿಗೆ 28 ಸಾವಿರ ಕ್ಯುಸೆಕ್ ನೀರು ಬಿಡಲಾಗುತ್ತಿದೆ. ಈ ನೀರು ಹರಿದು ಬಂದು ಹಳೆಯ ಗೋಕಾಕ ನಗರ ಸೇರಿಕೊಂಡಿದೆ. ಹೊರ ಹರಿವು ಹೆಚ್ಚಿಸಿದರೆ ಜತ್ತ– ಜಾಂಬೋಟಿ ಅಂತರರಾಜ್ಯ ಹೆದ್ದಾರಿಯ ಲೋಳಸೂರ ಸೇತುವೆ ಯಾವುದೇ ಕ್ಷಣದಲ್ಲಿ ಮುಳುಗುವ ಭೀತಿ ಎದುರಾಗಿದೆ.

ಚಿಕ್ಕೋಡಿ, ರಾಮದುರ್ಗ, ನಿಪ್ಪಾಣಿ ಹಾಗೂ ಖಾನಾಪುರ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿರುವ 20ಕ್ಕೂ ಹೆಚ್ಚು ಸೇತುವೆಗಳ ಮೇಲೆ ನದಿ ನೀರು ಹರಿಯುತ್ತಿದ್ದು, ಸಂಚಾರ ಬಂದ್ ಆಗಿದೆ. ಮುನವಳ್ಳಿ ಪಟ್ಟಣದೊಳಗಿನ ಹಳೆ ಸೇತುವೆ ಮುಳುಗಡೆಯಾಗಿದೆ.

ಘಟಪ್ರಭಾ ನದಿ ನೀರಿನ ಹರಿವು ಹೆಚ್ಚಿದ್ದು, ಬಾಗಲಕೋಟೆ ಜಿಲ್ಲೆಯ ಎರಡು ಸೇತುವೆ ಮುಳುಗಡೆಯಾಗಿವೆ. ಮುಧೋಳ ತಾಲ್ಲೂಕಿನ ಢವಳೇಶ್ವರ ಸೇತುವೆ, ರಬಕವಿ–ಜಾಂಬೋಟಿ ಸಂಪರ್ಕಿಸುವ ಮಿರ್ಜಿ ಸೇತುವೆಗಳು ಮುಳುಗಡೆಯಾಗಿವೆ.

ಗದಗ ಜಿಲ್ಲೆಯ ನರೇಗಲ್ ಸಮೀಪದ ಜಕ್ಕಲಿ ಗ್ರಾಮದಲ್ಲಿ ವಾರದಿಂದ ಸತತವಾಗಿ ಸುರಿಯುತ್ತಿರುವ ಮಳೆಗೆ 20ಕ್ಕೂ ಹೆಚ್ಚು ಮನೆಗಳು ಕುಸಿತಗೊಂಡಿವೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಭಾನುವಾರ ತಡರಾತ್ರಿ ಶುರುವಾದ ಮಳೆ ಸೋಮವಾರ ಮಧ್ಯಾಹ್ನದ ತನಕವೂ ಮುಂದುವರಿಯಿತು. ಹೊನ್ನಾವರ ತಾಲ್ಲೂಕಿನ ಮಾವಿನಕುರ್ವದ ಹೊಸಾಡದಲ್ಲಿ ಗುಡ್ಡದ ಮಣ್ಣು ರಸ್ತೆ ಮೇಲೆ ಕುಸಿದಿತ್ತು.

ಹೊಸಪೇಟೆ, ಹಾವೇರಿ, ಧಾರವಾಡ– ಹುಬ್ಬಳ್ಳಿಯಲ್ಲೂ ಮಳೆಯಾಗಿದೆ. ಕೊಡಗು ಜಿಲ್ಲೆಯ ವಿರಾಜಪೇಟೆಯ ಕದನೂರು ಕೆರೆ ಮತ್ತೊಮ್ಮೆ ತುಂಬಿ ಹರಿಯುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಚಾರ್ಮಾಡಿ ಘಾಟ್‌ನಲ್ಲಿ ಬಿದಿರುತಳ ಸಮೀಪ ಹೆದ್ದಾರಿಯ ಬದಿ ಭೂಮಿ ಕುಸಿದಿದೆ. ಕೊಟ್ಟಿಗೆಹಾರದಿಂದ ಮಂಗಳೂರಿಗೆ ಹೋಗುವ ಮಾರ್ಗ ಮಧ್ಯೆ ಚಾರ್ಮಾಡಿ ಘಾಟ್‌ನಲ್ಲಿ ವಿಪರೀತ ಮಳೆಯಾಗುತ್ತಿದೆ. ಸಂಚಾರಕ್ಕೆ ಯಾವುದೇ ಅಡಚಣೆಯಾಗಿಲ್ಲ.

8 ಬಾಂದಾರ ಮುಳುಗಡೆ

ಮಹಾರಾಷ್ಟ್ರದ ಉಜನಿ ಜಲಾಶಯದಿಂದ 50 ಸಾವಿರ ಕ್ಯುಸೆಕ್ ಮತ್ತು ವೀರ ಭಟಕರ ಜಲಾಶಯದಿಂದ 5 ಸಾವಿರ ಕ್ಯುಸೆಕ್ ನೀರನ್ನು ಭೀಮಾ ನದಿಗೆ ಬಿಡಲಾಗಿದ್ದು, ವಿಜಯಪುರ ಜಿಲ್ಲೆಯ ಇಂಡಿ ಮತ್ತು ಚಡಚಣ ತಾಲ್ಲೂಕು ವ್ಯಾಪ್ತಿಯಲ್ಲಿರುವ ಎಂಟು ಬಾಂದಾರ ಕಂ ಬ್ರಿಡ್ಜ್‌ಗಳು ಮುಳುಗಿದ್ದು, ಸಂಚಾರ ಸ್ಥಗಿತವಾಗಿದೆ.

ಭೀಮಾ ನದಿಯಲ್ಲಿ ನೀರಿನ ಮಟ್ಟ ಕ್ಷಣಕ್ಷಣಕ್ಕೆ ಏರಿಕೆ ಆಗುತ್ತಿರುವುದರಿಂದ ನದಿ ತೀರದಲ್ಲಿ ಪ್ರವಾಹ ಭೀತಿ ಎದುರಾಗಿದೆ. ರೈತರು ಮತ್ತು ತೀರದಲ್ಲಿರುವ ಗ್ರಾಮಗಳ ನಾಗರಿಕರು ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತ ಸೂಚಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.66	27,459	29,950
ಹಾರಂಗಿ	2,859	2,857.75	3,031	1,700
ಕಬಿನಿ	2,284	2,283.91	17,184	23,000
ಹೇಮಾವತಿ	2,922	2,921.90	14,858	14,800
ಲಿಂಗನಮಕ್ಕಿ	1,819	1,815	20,068	3,858
ಸೂಪಾ (ಮೀ)	564	551.65	13,268	-
ಮಾಣಿ	595	589	3,756	-
ತುಂಗಭದ್ರಾ	1,633	1,632.72	48,539	33,203
ಮಲಪ್ರಭಾ	2079.50	2,079.50	4,794	4,794
ಘಟಪ್ರಭಾ	2,175	2,175	23,056	23,056
ಭದ್ರಾ	186	185	14,630	7,685
ಆಲಮಟ್ಟಿ (ಮೀ)	519.60	519.58	52,491	1,25,000
ನಾರಾಯಣಪುರ (ಮೀ)	492.25	491.55	70,000	68,480

* ನೆಲಮಟ್ಟದಿಂದ

ಮಳೆ– ಪ್ರವಾಹ ಹಾನಿ: ವಿಧಾನಸಭೆಯಲ್ಲಿ ಚರ್ಚೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜುಲೈನಿಂದ ಸುರಿದ ಭಾರಿ ಮಳೆ, ಪ್ರವಾಹ, ಭೂಕುಸಿತ ಮತ್ತು ಬೆಂಗಳೂರು ನಗರದಲ್ಲಿ ಉಂಟಾದ ಪ್ರವಾಹದ ಬಗ್ಗೆ ಮಂಗಳವಾರದಿಂದ ಮೂರು ದಿನಗಳ ಕಾಲ ವಿಧಾನಸಭೆಯಲ್ಲಿ ಚರ್ಚೆ ನಡೆಸಲು ಕಲಾಪ ಸಲಹಾ ಸಮಿತಿ ಸಭೆ ತೀರ್ಮಾನಿಸಿದೆ.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ನಾಯಕ ವೆಂಕಟರಾವ್ ನಾಡಗೌಡ, ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಭಾಗವಹಿಸಿದ್ದರು.

ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಮಂಗಳವಾರ ನಿಯಮ 69 ಅಡಿ ವಿಷಯವನ್ನು ಪ್ರಸ್ತಾಪಿಸಲಿದೆ. ಆದರೆ, ಬೇರೆ ನಿಯಮದಡಿ ಚರ್ಚೆ ನಡೆಸಲು ಸರ್ಕಾರ ಒಪ್ಪಿಗೆ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

‘ಮಳೆ ಮತ್ತು ಪ್ರವಾಹದಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನೂರಾರು ಜನ ಮೃತಪಟ್ಟಿದ್ದಾರೆ. ಆದ್ಯತೆಯ ಮೇರೆಗೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು’ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಇತ್ತೀಚೆಗೆ ನಿಧನರಾದ ಸಚಿವ ಉಮೇಶ ಕತ್ತಿ, ಬ್ರಿಟನ್ ರಾಣಿ ಎಲಿಜಬೆತ್, ಮಾಜಿ ಸಚಿವರಾದ ಎಂ.ರಘುಪತಿ, ಪ್ರಭಾಕರ ರಾಣೆ, ಸಿ.ಯಾದವರಾವ್, ಮಾಜಿ ಶಾಸಕರಾದ ಕೆ. ಕೆಂಪೇಗೌಡ, ಜಿ.ವಿ.ಶ್ರೀರಾಮರೆಡ್ಡಿ, ಸಿ.ಎಂ.ದೇಸಾಯಿ, ಎ.ಜಿ.ಕೊಡ್ಗಿ, ಈಶಣ್ಣ ಗುಳಗಣ್ಣನವರ, ಸುಗಮ ಸಂಗೀತ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರಿಗೆ ಉಭಯ ಸದನಗಳಲ್ಲಿ ಶ್ರದ್ಧಾಂಜಲಿ ಸಲ್ಲಿಸಿ, ಕಲಾಪವನ್ನು ಮುಂದೂಡಲಾಯಿತು.

‘ಭೂಹಗರಣ ಬಯಲಿಗೆಳೆವೆ’

ಬೆಂಗಳೂರು: ‘ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಸರ್ಕಾರಿ ಜಮೀನು ಕಬಳಿಸಲು ನಡೆಯುತ್ತಿರುವ ಸಂಚನ್ನು ವಿಧಾನಸಭೆಯಲ್ಲಿ ದಾಖಲೆ ಸಹಿತ ಬಹಿರಂಗಪಡಿಸುತ್ತೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸೋಮವಾರ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಜೆಪಿಯವರು ಭ್ರಷ್ಟಾಚಾರದ ಆರೋಪಕ್ಕೆ ದಾಖಲೆ ಕೊಡಿ ಎಂದು ಪದೇ ಪದೇ ಸವಾಲು ಹಾಕಿ ನನ್ನನ್ನು ಕೆಣಕಿದ್ದಾರೆ. ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಲು ಹೊರಟ ಅತಿದೊಡ್ಡ ಅಕ್ರಮದ ದಾಖಲೆಗಳನ್ನು ಸದನದಲ್ಲೇ ಬಿಡುಗಡೆ ಮಾಡುತ್ತೇನೆ’ ಎಂದರು.

‘ಈ ಸರ್ಕಾರದ ಭ್ರಷ್ಟಾಚಾರದ ಕುರಿತು ಜನರಿಗೆ ತಿಳಿಯಬೇಕು. ನಾನು ಬಿಡುಗಡೆ ಮಾಡಲಿರುವ ದಾಖಲೆಗಳು ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ‘ಸ್ಯಾಂಪಲ್’ ಮಾತ್ರ. ಇದನ್ನು ಅರಗಿಸಿಕೊಳ್ಳಲಿ ಸಾಕು’ ಎಂದು ಹೇಳಿದರು.

ಹತ್ತೇ ದಿನದಲ್ಲೇ ಕಿತ್ತು ಹೋದ ಡಾಂಬರು

ಪ್ರಧಾನಿ ಮೋದಿ ಸ್ವಾಗತಕ್ಕೆ ಮಂಗಳೂರಿನಲ್ಲಿ ತರಾತುರಿಯಲ್ಲಿ ಆಗಿದ್ದ ಕಾಮಗಾರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ನಗರ ಭೇಟಿ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕೂಳೂರು ಸೇತುವೆ ಮೇಲಿನ ಗುಂಡಿಗಳ ಮುಚ್ಚಲು ಹಾಕಿದ್ದ ಡಾಂಬರು ಹತ್ತೇ ದಿನಗಳಲ್ಲಿ ಕಿತ್ತುಹೋಗಿದೆ.

ಪ್ರಧಾನಿ ಸೆ.2ರಂದು ನಗರಕ್ಕೆ ಭೇಟಿ ನೀಡಿದ್ದು, ಬಂಗ್ರಕೂಳೂರಿನಲ್ಲಿ ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಲು ನವಮಂಗಳೂರು ಬಂದರಿನಿಂದ ರಸ್ತೆ ಮಾರ್ಗವಾಗಿ ಸಂಚರಿಸಿದ್ದರು. ಕಾರ್ಯಕ್ರಮಕ್ಕೆ ಎರಡು ದಿನ ಮೊದಲು ಸಾಗಬೇಕಿದ್ದ ರಸ್ತೆಯಲ್ಲಿದ್ದ ಗುಂಡಿಗಳನ್ನು ಮುಚ್ಚಿ, ತರಾತುರಿಯಲ್ಲಿ ಡಾಂಬರೀಕರಣ ಮಾಡಲಾಗಿತ್ತು.

ಕೂಳೂರು ಹಾಗೂ ಪಣಂಬೂರು ಪ್ರದೇಶ ಭಾಗದದಲ್ಲಿನ ಗುಂಡಿಗಳನ್ನು ಮುಚ್ಚಲು ನಾಲ್ಕು ತಿಂಗಳಿನಿಂದ ಜನರು ಒತ್ತಾಯಿಸಿದ್ದರು. ಪ್ರಧಾನಿ ಕಾರ್ಯಕ್ರಮ ನಿಗದಿಯಾದ ನಾಲ್ಕೇ ದಿನಗಳಲ್ಲಿ ರಸ್ತೆಗಳ ಚಿತ್ರಣವೇ ಬದಲಾಗಿತ್ತು.

‘ಡಾಂಬರೀಕರಣ ನಡೆಸಿದ ಹತ್ತೇ ದಿನಗಳಲ್ಲೇ ಹೆದ್ದಾರಿಯಲ್ಲಿ ಮತ್ತೆ ಗುಂಡಿ ನಿರ್ಮಾಣವಾಗುವ ಮೂಲಕ ಈ ಕಾಮಗಾರಿಯ ಅಸಲಿಯತ್ತು ಕೂಡ ಬಟಾಬಯಲಾಗಿದೆ’ ಎಂದು ಹೋರಾಟಗಾರ ಎಂ.ಜಿ. ಹೆಗಡೆ ಹೇಳಿದರು.

‘ಕುಡಿಯುವ ನೀರಿನ ಕೊಳವೆ ಕಾಮಗಾರಿಯಿಂದಾಗಿ ರಸ್ತೆ ಹದಗೆಟ್ಟಿತ್ತು. ಪ್ರಧಾನಿ ಭೇಟಿ ಕಾರಣ ತಾತ್ಕಾಲಿಕವಾಗಿ ದುರಸ್ತಿ ಕೈಗೊಂಡಿದ್ದೆವು. ಅಲ್ಲೀಗ ಮತ್ತೆ ಗುಂಡಿ ಕಾಣಿಸಿಕೊಂಡಿದ್ದರೆ ಪರಿಶೀಲಿಸಿ ಕ್ರಮಕೈಗೊಳ್ಳುತ್ತೇವೆ’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು ವಲಯದ ಯೋಜನಾ ನಿರ್ದೇಶಕ ಲಿಂಗೇಗೌಡ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

10 ದಿನದ ಹಿಂದೆ ಡಾಂಬರೀಕರಣಗೊಂಡಿದ್ದ ಕೂಳೂರು ಸೇತುವೆ ರಸ್ತೆಯಲ್ಲಿ ಮತ್ತೆ ಗುಂಡಿ ಕಾಣಿಸಿರುವುದು –ಪ್ರಜಾವಾಣಿ ಚಿತ್ರ

ನಟ ರಮೇಶ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್’

ರಮೇಶ ಅರವಿಂದ್

ಅಕ್ಕ ಅನ್ನಪೂರ್ಣ



ವಿ.ರವಿಚಂದರ್

ಬೆಳಗಾವಿ: ಇದೇ 14ರಂದು ಇಲ್ಲಿ ನಡೆಯುವ ರಾಣಿ ಚನ್ನಮ್ಮ ವಿವಿಯ 10ನೇ ಘಟಿಕೋತ್ಸವದಲ್ಲಿ ನಟ ರಮೇಶ ಅರವಿಂದ್, ಬೀದರ್‌ನ ಅಕ್ಕ ಅನ್ನಪೂರ್ಣ ಮತ್ತು ಸಮಾಜಸೇವಕ ವಿ.ರವಿಚಂದರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಪ್ರೊ.ಎಂ. ರಾಮಚಂದ್ರಗೌಡ ತಿಳಿಸಿದರು.

‘ಗೌರವ ಡಾಕ್ಟರೇಟ್‌ಗಾಗಿ ಜನಪ್ರತಿನಿಧಿಗಳೂ ಸೇರಿ ಹಲವು ಗಣ್ಯರು ಶಿಫಾರಸು ಮಾಡಿದ್ದರು. ವಿವಿಯು ಅರ್ಜಿ ಕರೆದು ಅರ್ಹರನ್ನು ಗುರುತಿಸುವ ಕೆಲಸ ಮಾಡಿದೆ. ಅರ್ಜಿಗಳನ್ನು ಸಂಗ್ರಹಿಸಿ, ಶಿಫಾರಸು ಪರಿಶೀಲಿಸಿ ಸಮಿತಿ ಮುಂದೆ ಇಡಲಾಗಿದೆ. ರಾಜ್ಯಪಾಲರ ಕಚೇರಿ ಅಂತಿಮಗೊಳಿಸಿದವರಿಗೆ ಪದವಿ ನೀಡಲಾಗುತ್ತಿದೆ’ ಎಂದೂ ಪ್ರತಿಕ್ರಿಯಿಸಿದರು.

‘ಖುದ್ದಾಗಿ ಅರ್ಜಿ ಹಾಕಿಲ್ಲ. ನನ್ನ ಬಗ್ಗೆ ತಿಳಿದವರು ಕಳುಹಿಸಿರಬಹುದು’ ಎಂದು ಅಕ್ಕ ಅನ್ನಪೂರ್ಣ ಹೇಳಿದರು.

ನಿಧನವಾರ್ತೆ

ವೆಂಕಟಸುಬ್ಬಯ್ಯ

ಬೆಂಗಳೂರು: ಕನ್ನಡದ ರಂಗ ಭೂಮಿ ನಿರ್ದೇಶಕ ಹಾಗೂ ಶ್ರೀರಂಗರ ಒಡನಾಡಿಯೂ ಆಗಿದ್ದ ಎಚ್.ವಿ. ವೆಂಕಟಸುಬ್ಬಯ್ಯ (85) ಅವರು ಸೋಮ ವಾರ ಬೆಳಿಗ್ಗೆ ನಿಧನರಾದರು.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಶೇಷಾದ್ರಿಪುರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ವೃತ್ತಿಯಲ್ಲಿ ಎಲೆಕ್ಟ್ರಾನಿಕ್ ಎಂಜಿನಿಯರ್ ಆಗಿದ್ದ ವೆಂಕಟಸುಬ್ಬಯ್ಯ ರಂಗಭೂಮಿಯಲ್ಲಿ ಆಸಕ್ತಿ ಹೊಂದಿದ್ದರು. ಇವರು ನಿರ್ದೇಶಿಸಿದ್ದ ಶ್ರೀರಂಗರ ‘ಸಮಗ್ರ ಮಂಥನ’ ಸೇರಿ ಹಲವು ನಾಟಕಗಳು ಪ್ರಸಿದ್ಧಿ ಪಡೆದಿದ್ದವು. ರಂಗಭೂಮಿ ಸಾಧನೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಬಿ.ವಿ. ಕಾರಂತ್ ಪ್ರಶಸ್ತಿಗಳು ಲಭಿಸಿದ್ದವು.‘ಅಮೆರಿಕದಲ್ಲಿರುವ ಪುತ್ರಿಯರಿಬ್ಬರು ನಗರಕ್ಕೆ ಬಂದ ನಂತರ ಅಂತಿಮ ಸಂಸ್ಕಾರ ನಡೆಸಲಾಗುವುದು’ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೋಸ್ಟ್‌ಗಾರ್ಡ್ ಕಮಾಂಡರ್ ಆಗಿ ಮನೋಜ ಬಾಡ್ಕರ್



ಕಾರವಾರ: ಭಾರತೀಯ ಕೋಸ್ಟ್‌ಗಾರ್ಡ್‌ನ ಪಶ್ಚಿಮ ವಲಯದ ಕಮಾಂಡರ್ ಆಗಿ ಕಾರವಾರದ ಮನೋಜ ವಸಂತ ಬಾಡ್ಕರ್ ಅವರು ಮುಂಬೈನಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಅವರು ಅಧಿಕಾರ ಸ್ವೀಕರಿಸಿದರು.

ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳ ಮತ್ತು ಲಕ್ಷದ್ವೀಪ ಪ್ರದೇಶಗಳು ಪಶ್ಚಿಮ ವಲಯದಲ್ಲಿವೆ. ಮನೋಜ ಅವರು ಇನ್ನುಮುಂದೆ ಕೋಸ್ಟ್ ಗಾರ್ಡ್‌ನ ಈ ವಲಯದ ಎಲ್ಲ ಚಟುವಟಿಕೆಗಳ ಮುಖ್ಯಸ್ಥರಾಗಿರುತ್ತಾರೆ.

ಮುರುಘಾಶ್ರೀ ಜಾಮೀನು ಅರ್ಜಿ ವಿಚಾರಣೆ ಇಂದು

ಚಿತ್ರದುರ್ಗ: ಲೈಂಗಿಕ ಕಿರುಕುಳ ಪ್ರಕರಣದ ಆರೋಪಿ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಜಾಮೀನು ಅರ್ಜಿಗೆ ತಕರಾರು ಸಲ್ಲಿಸಲು ಸಂತ್ರಸ್ತ ವಿದ್ಯಾರ್ಥಿನಿಯರ ಪರ ವಕೀಲರಿಗೆ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಕಾಲಾವಕಾಶ ನೀಡಿದ್ದು, ವಿಚಾರಣೆಯನ್ನು ಸೆ.13ಕ್ಕೆ ಮುಂದೂಡಿದೆ. ಪ್ರಕರಣದ 2ನೇ ಆರೋಪಿ ಹಾಸ್ಟೆಲ್‌ನ ವಾರ್ಡನ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಯನ್ನು ಸೆ.14ಕ್ಕೆ ಮುಂದೂಡಲಾಗಿದೆ.

ಲೂಟಿ ರವಿ ಎಂಬ ಹೇಳಿಕೆಗೆ ತಿರುಗೇಟು

ಸಿದ್ದರಾಮಯ್ಯ ಕಚ್ಚೆಹರುಕ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿ.ಟಿ.ರವಿ– ಲೂಟಿ ರವಿ ಎಂದು ಸಿದ್ದರಾಮಯ್ಯ ಹೇಳುವುದಾದರೆ, ಸಿದ್ದ– ಪೆದ್ದ, ಕಚ್ಚೆಹರುಕ ಎನ್ನಬಹುದಲ್ಲ, ಅದರಲ್ಲಿ ತಪ್ಪೇನಿದೆ’ ಎಂದು ಶಾಸಕರೂ ಆಗಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಆರಂಭವಾದ ಇಬ್ಬರ ವಾಕ್ಸಮರ ಇದೀಗ ರಾಜಧಾನಿಗೂ ಕಾಲಿಟ್ಟಿದೆ.

ಚಿಕ್ಕಮಗಳೂರಿನಲ್ಲಿ ಭಾನುವಾರ ಬೆಳಿಗ್ಗೆ ಮಾತನಾಡಿದ್ದ ಸಿದ್ದರಾಮಯ್ಯ, ‘ಸಿ.ಟಿ.ರವಿಯನ್ನು ಲೂಟಿ ರವಿ ಎನ್ನುತ್ತಾರೆ. ಇದು ನಾನು ಹೇಳುವ ಮಾತಲ್ಲ, ಚಿಕ್ಕಮಗಳೂರಿನ ಜನರ ಮಾತು’ ಎಂದಿದ್ದರು. ಈ ಹೇಳಿಕೆಗೆ ಸಿ.ಟಿ.ರವಿ ತಿರುಗೇಟು ನೀಡಿ, ‘ಸಿದ್ದರಾಮಯ್ಯ ಕಚ್ಚೆಹರುಕ ಎಂದು ಮೈಸೂರಿನಲ್ಲಿ ಹೇಳುತ್ತಾರೆ. ಇದು ನನ್ನ ಮಾತಲ್ಲ, ಮೈಸೂರಿನ ಜನರ ಮಾತು’ ಎಂದು ಹೇಳಿದ್ದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಿ.ಟಿ.ರವಿ, ‘ಕಚ್ಚೆ ಹರುಕ ಪದ ನಾನು ಬಳಸಿಯೇ ಇಲ್ಲ ಎಂಬ ಹೇಳಿಕೆಯಿಂದ ನುಣುಚಿಕೊಳ್ಳುವುದಿಲ್ಲ. ನಾನು ಈಗಾಗಲೇ ಸಾರ್ವಜನಿಕ ಚರ್ಚೆಗೂ ಬಿಟ್ಟಿದ್ದೇನೆ’ ಎಂದರು. ‘ಕಚ್ಚೆ ಹರುಕ ಅನ್ನುವ ವಿಚಾರ ಮೂಲತಃ ನನ್ನ ಮಾತಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕು ಎಂದರೆ, ಅವರ ಒಂದು ಕಾಲದ ಒಡನಾಡಿ ಎಚ್.ವಿಶ್ವನಾಥ್ ಅವರನ್ನೇ ಕೇಳಬಹುದು. ಇವರಿಬ್ಬರದೂ ಒಂದೇ ರಕ್ತ. ಹೀಗಾಗಿ ಅವರಲ್ಲಿ ಹೆಚ್ಚಿನ ಮಾಹಿತಿ ಇರುತ್ತದೆ. ಸೂಕ್ತ ಕಾಲ ಬಂದಾಗ ಅವರೇ ಹೇಳಲೂಬಹುದು’ ಎಂದು ಲೇವಡಿ ಮಾಡಿದರು.

‘ಆರೋಪ ಮಾಡುವಾಗ ದಾಖಲೆ ಸಹಿತ ಮಾತನಾಡಬೇಕು. ನನ್ನ ಬಗ್ಗೆ ಲೂಟಿ ಪದ ಬಳಕೆ ಮಾಡುವ ಇವರೇನು ಸತ್ಯಹರಿಶ್ಚಂದ್ರನ ಮಕ್ಕಳಾ’? ‘ಅರ್ಕಾವತಿ ರೀ–ಡೂ ಹಗರಣದ ವಿಚಾರಣೆಗೆ ಸಿದ್ದರಾಮಯ್ಯ ಕೆಂಪಣ್ಣ ಆಯೋಗ ವನ್ನು ರಚನೆ ಮಾಡಿದರು. ವರದಿ ಯನ್ನು ವಿಧಾನಸಭೆಯಲ್ಲಿ ಏಕೆ ಮಂಡಿಸಲಿಲ್ಲ. ಸಮಾಜವಾದಿಗಳ ಮಜವಾದಿತನ ನೋಡಿದ್ದೇನೆ. ಸೆಂಟ್ ಹೊಡೆದುಕೊಂಡು ವಾಸನೆ ಮುಚ್ಚಲು ಆಗುವುದಿಲ್ಲ’ ಎಂದರು.

ಸಿದ್ದರಾಮಯ್ಯ ಹಿರಿಯರು. ಅವರ ಬಗ್ಗೆ ಸಿ.ಟಿ.ರವಿ ಹಾಗೆ ಮಾತನಾಡಬಾರದಿತ್ತು. ವೈಯಕ್ತಿಕವಾಗಿ ಮಾತನಾಡುವ ಮಟ್ಟಕ್ಕೆ ಯಾರೂ ಹೋಗಬಾರದು

ಕೆ.ಎಂ.ಶಿವಲಿಂಗೇಗೌಡ
ಜೆಡಿಎಸ್ ಶಾಸಕ

‘ನಿಮ್ಮವರ ಕಚ್ಚೆ ಬಿಗಿಯಾಗಿ ಕಟ್ಟಿ’

ಬೆಂಗಳೂರು: ‘ಕಚ್ಚೆ ಹರುಕರು ಯಾರು ಎನ್ನುವುದು ಇಡೀ ದೇಶಕ್ಕೆ ತಿಳಿದಿದೆ. ಹರಿದಿರುವ ನಿಮ್ಮವರ ಕಚ್ಚೆಗಳನ್ನು ಬಿಗಿಯಾಗಿ ಕಟ್ಟಿ, ನಂತರ ಮಾತಾಡಲು ಬನ್ನಿ’ ಎಂದು ಸಿ.ಟಿ. ರವಿ ಅವರಿಗೆ ರಾಜ್ಯ ಕಾಂಗ್ರೆಸ್ ಘಟಕ ಚುಚ್ಚಿದೆ.

ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಸಿ.ಡಿಗೆ ತಡೆಯಾಜ್ಞೆ ತಂದವರು, ಅತ್ಯಾಚಾರ ಆರೋಪದಲ್ಲಿ ರಾಜೀನಾಮೆ ಕೊಟ್ಟವರು, ಸಾಮಾಜಿಕ ಜಾಲತಾಣದಲ್ಲಿ ಸಾಲು ಸಾಲು ವಿಡಿಯೊಗಳು ಹೊರಬಂದಿದ್ದು ಯಾವ ಪಕ್ಷದವರದ್ದು?’ ಎಂದೂ ಕೆಣಕಿದೆ. ‘ಕಂಡ ಕಂಡಲ್ಲಿ ಕಚ್ಚೆ ಹರಿದುಕೊಂಡವರು ಬಿಜೆಪಿಗರೇ ಅಲ್ಲವೇ ಲೂಟಿ ರವಿಯವರೇ? ಬಿಜೆಪಿಯ ಕಚ್ಚೆ ಪುರಾಣಗಳು, ರಾಜ್ಯದ ಹಳ್ಳಿಹಳ್ಳಿಗಳ ಕಟ್ಟೆ ಪುರಾಣಗಳಿಗೆ ಆಹಾರವಾಗಿವೆ. ಅತಿವೃಷ್ಟಿ ಸಂಕಷ್ಟದಲ್ಲಿರುವ ಜನತೆಗೆ ನೆರವಾಗುವ ಬಗ್ಗೆ ಒಂದಾದರೂ ಮಾತು ನಿಮ್ಮ ಬಾಯಲ್ಲಿ ಬರುವುದೇ? ನೀವೆಷ್ಟೇ ಬಾಯಿ ಹರಿದುಕೊಂಡರೂ ಮತ್ತೆ ಸಂಪುಟದಲ್ಲಿ ನಿಮಗೆ ಸ್ಥಾನ ಸಿಗದು’ ಎಂದೂ ಹೇಳಿದೆ.

ಪದ ಬಳಕೆ ಸರಿಯಲ್ಲ: ಎಚ್. ವಿಶ್ವನಾಥ್

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಕಚ್ಚೆಹರುಕ ಎಂಬ ಪದ ಬಳಕೆ ಮಾಡಿದ್ದು ಸರಿಯಲ್ಲ. ಸಿ.ಟಿ.ರವಿ ಅವರ ಮಾತನ್ನು ಯಾರೂ ಒಪ್ಪಲು ಸಾಧ್ಯವಿಲ್ಲ ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಹೇಳಿದ್ದಾರೆ.

‘ರಾಜಕಾರಣಿಗಳು ಮಾತನಾಡುವ ಸಂದರ್ಭದಲ್ಲಿ ತಾವು ಬಳಸುವ ಪದಗಳ ಬಗ್ಗೆ ಎಚ್ಚರಿಕೆ ಹೊಂದಿರಬೇಕು. ಬೇರೆಯವರನ್ನು ಸಂಸ್ಕೃತಿ ಹೀನ ಎಂದು ಹೇಳುತ್ತಾ ಇದ್ದ ಹಾಗೆ ನಮ್ಮ ಮಾತುಗಳೂ ಸಂಸ್ಕೃತಿ ಹೀನವಾಗುವುದನ್ನು ನಾಡಿನ ಜನರು ನೋಡುತ್ತಿದ್ದಾರೆ. ದಮ್ಮಿದೆಯಾ, ತಾಕತ್ತಿದೆಯಾ ಎಂದು ಎರಡೂ ರಾಷ್ಟ್ರೀಯ ಪಕ್ಷಗಳು ಹೇಳುತ್ತಲೇ ಕನ್ನಡ ಭಾಷೆಯನ್ನು ಕುಲಗೆಡಿಸುತ್ತಿವೆ’ ಎಂದು ಕಿಡಿಕಾರಿದರು.

ಕರ್ನಾಟಕ ಸರಕಾರ
ಕಾರ್ಯಕಾರಿ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
E-mail: eepwdudp02@gmail.com Website: www.kpwd.gov.in
ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–25/2022–23/ಎಇ2 ದಿನಾಂಕ: 09.09.2022

ಅಲ್ಪಾವಧಿ ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 30.09.2022 ರ ಸಂಜೆ–5.30 ಘಂಟೆವರೆಗೆ, ಅರ್ಹ ಗುತ್ತಿಗೆದಾರರು: 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ.ಲಕ್ಷಗಳಲ್ಲಿ)
1	ಮಣಿಪಾಲ ಸಿಂಡಿಕೇಟ್ ಸರ್ಕಲ್‌ನಿಂದ ಎಸ್.ಐ.ಬಿ.ಎಮ್. ಮುಖಾಂತರ ಮಣಿಪಾಲ ಅಲೆವೂರು ರಸ್ತೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ, ಉಡುಪಿಯ ಅಂಬಾಗಿಲು ಉದ್ಯಾವರ ರಸ್ತೆಯಿಂದ ರಾಜಾಚಾರ್ಯ ಮಾರ್ಗ ಮುಖಾಂತರ ದೊಡ್ಡಣಗುಡ್ಡೆ ಸೇರುವ ರಸ್ತೆ ಅಭಿವೃದ್ಧಿ. (155560)	ರೂ. 3,18,16,267.00
2	ಸೋಮೇಶ್ವರ–ಕೋಟೇಶ್ವರ ಜಿಲ್ಲಾ ಮುಖ್ಯ ರಸ್ತೆ ಕಿ.ಮೀ. 40.75 ರಿಂದ 43.73 ರವರೆಗೆ ಆಯ್ದ ಭಾಗದಲ್ಲಿ ಅಭಿವೃದ್ಧಿ ಹಾಗೂ ಕಿ.ಮೀ. 31.10 ರಲ್ಲಿ ತಿರುವು ಅಭಿವೃದ್ಧಿ ಮತ್ತು 31.60 ರಲ್ಲಿ ಜಂಕ್ಷನ್ ಅಭಿವೃದ್ಧಿ (154762)	ರೂ. 2,81,35,739.00
3	ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪೇತ್ರಿ – ಹಿರಿಯಡ್ಕ – ಕಾರ್ಕಳ ಸಂಪರ್ಕ ರಸ್ತೆ ಕಿ.ಮೀ.11.00 ರಿಂದ ಕಿ.ಮೀ.13.00ರ ವರೆಗೆ ಅಭಿವೃದ್ಧಿ. (155247)	ರೂ. 2,51,96,897.00

ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇಂ/ಸನಿಉ/ಎಂಸಿಎ/406/22–23 ದಿ: 12.09.2022

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇಃಪಿಬಿ– : ವಿವಿಧ/2022–23/2835 ದಿನಾಂಕ : 12–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 648.51 ಲಕ್ಷ ಮೊತ್ತದಲ್ಲಿ ಒಟ್ಟು 8 ಕಾಮಗಾರಿಗೆ (ಕನಿಷ್ಠ ಮೊತ್ತ ರೂ: 2.49 ಲಕ್ಷ ಗರಿಷ್ಠ ಮೊತ್ತ ರೂ: 500.00 ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ (E-Procurement) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1 2 3 ಮತ್ತು 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www. eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
Work Indent No:- 155005, 155006, 156339, 156542, 156330, 156757, 153423 &155613

ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕ: 20–09–2022, ಟೆಂಡರ್ ಸಲ್ಲಿಸುವ ದಿನಾಂಕ : 26–09–2022 ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : 27–09–2022 ಆರ್ಥಿಕ ಬಿಡ್ ತೆರೆಯುವ ದಿನಾಂಕ : 28–09–2022

ಜಿ.ಎಸ್.ಟಿ ವೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಅದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/295/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
ಫೋನ್ ನಂ: 08338–275101 ಇ–ಮೇಲ್ : ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು 1&2/ಟೆಂಡರ್/2022–23/48/1653 ದಿನಾಂಕ: 08–09–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3&4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗಳೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.
Work Indent No: 44972, 44974, 44942, 45157, 44941.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.http://eproc.karnataka.gov,in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಚೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01) ಟೆಂಡರ್ ಪೂರ್ವಬಾವಿ ಸಭೆ: 09–09–2022 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಚಕ್ಕೋಡಿ ಕಚೇರಿಯಲ್ಲಿ 02) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 15–09–2022 ಸಾಯಂಕಾಲ 17:00 ಗಂಟೆವರೆಗೆ. 03) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 16–09–2022 ಸಂಜೆ 17:30 ಗಂಟೆ ನಂತರ ತೆರೆಯಲಾಗುವುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ.
DIPO/RO No. 827/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಮೈಸೂರು ಅರಮನೆ ಮಂಡಳಿ, ಮೈಸೂರು
Ph: 0821-2421051, Fax: 2434425, GST:29AAAGM0484M1ZX
e-mail: ddmysorepalace@gmail.com
ಟೆಂ.ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–05/2022–23, ದಿನಾಂಕ: 09.09.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ 01 ದಸರಾ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ.171.00 ಲಕ್ಷಗಳ ಕೆಲಸಕ್ಕೆ ದಸರಾ ಕೆಲಸ ನಿರ್ವಹಿಸಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು 1) ವಿದ್ಯುನ್ಮಾನ (ಇ–ಪ್ರಕ್ಯೂರ್‌ಮೆಂಟ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 17.09.2022 ಸಂಜೆ 4.00 ಗಂಟೆಯವರೆಗೆ. 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 18.09.2022 ಸಂಜೆ 4.30 ಗಂಟೆಗೆ. ಈ ಹಿಂದಿನ ಐದು ವರ್ಷಗಳಲ್ಲಿ ಕನಿಷ್ಟ ಒಂದು ವರ್ಷವಾದರೂ ದಸರಾ ಕಾರ್ಯಕ್ರಮದ ಕೆಲಸಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://www. eproc.karnataka.gov.in ಅಂತರ್‌ಜಾಲದಲ್ಲಿ ಅಥವಾ ಉಪ ನಿರ್ದೇಶಕರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು ರಲ್ಲಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.
ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
DIPR/DDMYS/MCA/469/2022-23

ಕರ್ನಾಟಕ ಸರ್ಕಾರ
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ: 080–23349434 ಫ್ಯಾಕ್ಸ್: 080–23347670
ಸಂ: KSEEB/DPIE/B3(PSAB)/1/2022-BSEC ದಿ: 12.09.2022

ಇ–ಟೆಂಡರ್ ಪ್ರಕಟಣೆ

ನಿರ್ದೇಶಕರು, ಪರೀಕ್ಷೆಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು **“2023ರ ಎಸ್.ಎಸ್.ಎಲ್.ಸಿ. ಮುಖ್ಯ ಮತ್ತು ಪೂರಕ ಪರೀಕ್ಷೆಗಳ ಪೂರ್ವ ಮುದ್ರಿತ ಉತ್ತರಪತ್ರಿಕೆಗಳ ಮುದ್ರಣ ಮತ್ತು ಪರಿವರ್ತನೀಯ ಕ್ರಮ ಸಂಖ್ಯೆ ಮೇಲುಮುದ್ರಣ ಕಾರ್ಯ ಸಹಿತ ಸರಬರಾಜು ಕಾರ್ಯ (Delivery of answer booklets under ‘dedicated milk run route system’)ಕ್ಕೆ”** ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು–2000, ರಂತೆ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಳಿಯ ಅಂತರ್ಜಾಲತಾಣ www.sslc.karnataka.gov.in ಮತ್ತು www.eproc.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ, ಟೆಂಡರ್ ವೇಳಾಪಟ್ಟಿ ಮತ್ತು ಸಂಕ್ಷಿಪ್ತ ವಿವರ ಕೆಳಕಂಡಂತಿದೆ.

1	ಟೆಂಡರ್ ಪ್ರಾರಂಭ ದಿನಾಂಕ	12.09.2022
2	ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ ಮತ್ತು ಸಮಯ	22.09.2022 12.00 p.m.
3	ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ	12.10.2022 12.30 p.m.
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	14.10.2022 4.00 p.m.
5	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	21.10.2022 4.00 p.m.
6	ಟೆಂಡರ್ ಅಂದಾಜು ಮೌಲ್ಯ	ರೂ.6,98,10,000/– (Exclusive of GST)
7	ಮುಂಗಡ ಹಣ ಠೇವಣಿ	ರೂ.13,96,200/–

ಹೆಚ್ಚಿನ ವಿವರಗಳನ್ನು ಮಂಡಳಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ನಿರ್ದೇಶಕರು ಪರೀಕ್ಷೆಗಳು,

ಕರ್ನಾಟಕ ಸರ್ಕಾರ
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಅರೆ ವೈದ್ಯಕೀಯ ಮಂಡಳಿ
ನಂ. 40/20ಎ, ಲಕ್ಷ್ಮೀ ಕಾಂಪ್ಲೆಕ್ಸ್, 1ನೇ ಮಹಡಿ, ಕೆ.ಆರ್. ರಸ್ತೆ, ಕೋಟೆ, ಬೆಂಗಳೂರು-02.
ಸಂಖ್ಯೆ: ಪಿಎಂಬಿ/36/2022–23 ದಿನಾಂಕ : 12.09.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಈ ಸಂಸ್ಥೆಯಡಿಯಲ್ಲಿ ಅಕ್ಟೋಬರ್ 2022–23ರ ವಾರ್ಷಿಕ ಮತ್ತು 2023–24ನೇ ಸಾಲಿನ ಪೂರಕ ಪರೀಕ್ಷೆಗೆ ಬೇಕಾಗಿರುವ ಉತ್ತರ ಪತ್ರಿಕೆಗಳನ್ನು ಅಧಿಕೃತ ಮುದ್ರಕರಿಂದ/ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನ್ನು ಟೆಂಡರ್–1 ಮತ್ತು ಟೆಂಡರ್–2 ಎಂದು ಪ್ರತ್ಯೇಕವಾಗಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

Pre-printed Blank Answer Booklets
1) 36 pages with Bar Code (Green Colour)
2) 12 Pages with Bar Code (Light Brown Colour)

ಟೆಂಡರ್ ಪ್ರಕಟಿಸುವ ದಿನಾಂಕ	06.09.2022
ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	20.09.2022ರ ಸಂಜೆ 4.00 ಗಂಟೆವರೆಗೆ
ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ	22.09.2022ರ ಬೆಳಗ್ಗೆ 11.00 ಗಂಟೆಗೆ
ಹಣಕಾಸಿನ ಬಿಡ್ಡು ತೆರೆಯುವ ದಿನಾಂಕ	26.09.2022ರ ಬೆಳಗ್ಗೆ 11.00 ಗಂಟೆಗೆ

ಬೇಡಿಕೆ ಪ್ರಮಾಣ/ವಿನ್ಯಾಸ ಇತ್ಯಾದಿ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080–26702159 ಮತ್ತು +919110857818 ಮೂಲಕ ಸಂಪರ್ಕಿಸಬಹುದು. ಟೆಂಡರ್‌ನ್ನು ಅಂಗೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.
ಸಹಿ/–ಪೀಠಸ್ಥರು ಸಹಿ/– ಸದಸ್ಯ ಕಾರ್ಯದರ್ಶಿಗಳು

ಬಿಬಿಎಂಪಿ ಜಂಟಿ ಆಯುಕ್ತ, ಪಿಎ ಬಂಧನ

ಲಂಚ: ಲೋಕಾಯುಕ್ತ ಪೊಲೀಸರ ಮೊದಲ ಕಾರ್ಯಾಚರಣೆಯಲ್ಲೇ ಕೆಎಎಸ್ ಅಧಿಕಾರಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿಯ ಖಾತೆಗಳನ್ನು ವಿಲೀನಗೊಳಿಸಲು ₹ 4 ಲಕ್ಷ ಲಂಚ ಪಡೆಯುತ್ತಿದ್ದ ಬಿಬಿಎಂಪಿ ಪಶ್ಚಿಮ ವಿಭಾಗದ ಜಂಟಿ ಆಯುಕ್ತರಾಗಿರುವ ಕೆಎಎಸ್ ಅಧಿಕಾರಿ ಎಸ್.ಎಂ. ಶ್ರೀನಿವಾಸ್ ಮತ್ತು ಅವರ ಆಪ್ತ ಸಹಾಯಕ ಉಮೇಶ್ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ –1988ರ ಅಡಿಯಲ್ಲಿ ತನಿಖೆ ನಡೆಸುವ ಅಧಿಕಾರ ಮರಳಿದ ಬಳಿಕ ದಾಖಲಿಸಿದ ಮೊದಲ ಪ್ರಕರಣ ಇದಾಗಿದೆ. ಪ್ರಥಮ ಕಾರ್ಯಾಚರಣೆಯಲ್ಲೇ ಕೆಎಎಸ್ ಅಧಿಕಾರಿಯನ್ನು ಬಂಧಿಸಲಾಗಿದೆ.

ನಾಗರಬಾವಿಯ (ವಾರ್ಡ್ ನಂ–128) ಸರ್ವೆ ನಂಬರ್ 78ರಲ್ಲಿ ತಾವು ಹೊಂದಿರುವ ಎರಡು ಆಸ್ತಿಗಳನ್ನು ಬಳಸಿಕೊಂಡು ವಾಣಿಜ್ಯ ಸಂಕೀರ್ಣ ನಿರ್ಮಿಸಲು, ಆ ಆಸ್ತಿಗಳ ಖಾತೆಗಳನ್ನು ವಿಲೀನಗೊಳಿಸುವಂತೆ ಕೋರಿ ನಗರದ ನಿವಾಸಿ ಮಂಜುನಾಥ್ ಎಂಬುವವರು ಬಿಬಿಎಂಪಿಗೆ ಅರ್ಜಿ ಸಲ್ಲಿಸಿದ್ದರು. ಈ



ಎಸ್.ಎಂ. ಶ್ರೀನಿವಾಸ್

ಪ್ರಕ್ರಿಯೆ ಪೂರ್ಣಗೊಳಿಸಲು ₹12 ಲಕ್ಷ ಲಂಚಕ್ಕೆ ಶ್ರೀನಿವಾಸ್ ಮತ್ತು ಉಮೇಶ್ ಬೇಡಿಕೆ ಇಟ್ಟಿದ್ದರು. ಬಳಿಕ ಅರ್ಜಿದಾರರು ಚೌಕಾಸಿ ಮಾಡಿದಾಗ, ₹4 ಲಕ್ಷ ನೀಡಿದರೆ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ಒಪ್ಪಿಕೊಂಡಿದ್ದರು.

ಬಿಬಿಎಂಪಿ ಜಂಟಿ ಆಯುಕ್ತರು ಮತ್ತು ಅವರ ಆಪ್ತ ಸಹಾಯಕ ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಅರ್ಜಿದಾರರು, ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು. ದೂರುದಾರರಿಂದ ಪ್ರಾಥಮಿಕ ಮಾಹಿತಿ ಪಡೆದು ಎಫ್‌ಐಆರ್ ದಾಖಲಿಸಿದ್ದ ಲೋಕಾಯುಕ್ತ ಪೊಲೀಸರು, ಆರೋಪಿಗಳ ಬಂಧನಕ್ಕೆ ಕಾರ್ಯತಂತ್ರ ರೂಪಿಸಿದ್ದರು.

‘ಆರೋಪಿಗಳ ಸೂಚನೆಯಂತೆ ಸೋಮವಾರ ಸಂಜೆ ಮಲ್ಲೇಶ್ವರದಲ್ಲಿರುವ ಬಿಬಿಎಂಪಿ ಜಂಟಿ ಆಯುಕ್ತರ ಕಚೇರಿಗೆ ಹೋದ ಮಂಜುನಾಥ್, ₹ 4 ಲಕ್ಷ ನಗದು ನೀಡಿದರು. ಶ್ರೀನಿವಾಸ್ ಸೂಚನೆಯಂತೆ ಉಮೇಶ್ ಹಣ ಪಡೆದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಲಂಚದ ಹಣದ ಸಮೇತ ಇಬ್ಬರನ್ನೂ ಬಂಧಿಸಿ ದರು. ಆರೋಪಿಗಳನ್ನು ಬಂಧಿಸಿದ ಬಳಿಕ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಅಶೋಕ್ ಕೆ.ವಿ. ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಅಂತೋನಿ ರಾಜ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಕಡತಗಳ ಹಸ್ತಾಂತರ ಆರಂಭ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದಲ್ಲಿದ್ದ (ಎಸಿಬಿ) ಅಪರಾಧ ಪ್ರಕರಣಗಳ ಕಡತಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ.

ಎಸಿಬಿಯನ್ನು ರದ್ದುಗೊಳಿಸಿ ಇದೇ ಆಗಸ್ಟ್ 11ರಂದು ತೀರ್ಪು ನೀಡಿದ್ದ ಹೈಕೋರ್ಟ್ ದ್ವಿಸದಸ್ಯ ಪೀಠ, ತನಿಖಾ ಹಂತದಲ್ಲಿರುವ ಹಾಗೂ ವಿಚಾರಣಾ ಹಂತದ ಪ್ರಕರಣಗಳ ಕಡತಗಳು, ಬಾಕಿ ಇರುವ ದೂರುಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸುವಂತೆ ಆದೇಶಿಸಿತ್ತು. ಪ್ರಕರಣಗಳ ಹಸ್ತಾಂತರಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇದೇ 9ರಂದು ಆದೇಶ ಹೊರಡಿಸಿತ್ತು.

‘ಸೋಮವಾರ ಕೆಲವು ಪ್ರಕರಣಗಳ ಕಡತಗಳನ್ನು ಎಸಿಬಿ ಅಧಿಕಾರಿಗಳು ಹಸ್ತಾಂತರ ಮಾಡಿದ್ದಾರೆ. ಇನ್ನೂ ಸಾಕಷ್ಟು ಕಡತಗಳು ಬರಬೇಕಿದೆ. ಎಲ್ಲ ಕಡತಗಳ ಹಸ್ತಾಂತರ ಪೂರ್ಣಗೊಳ್ಳಲು ಕೆಲವು ದಿನಗಳು ಬೇಕಾಗಬಹುದು’ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

1998ರ ಬ್ಯಾಚ್‌ನ ಕೆಎಎಸ್ ಅಧಿಕಾರಿ

ಎಸ್.ಎಂ. ಶ್ರೀನಿವಾಸ್ 1998ರ ಬ್ಯಾಚ್‌ನ ಕೆಎಎಸ್ ಅಧಿಕಾರಿ. ಮೊದಲು ಅವರು ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಯಲ್ಲಿದ್ದರು. ಪಟ್ಟಿ ಪರಿಷ್ಕರಣೆ ಬಳಿಕ ಅವರಿಗೆ ತಹಶೀಲ್ದಾರ್ ಹುದ್ದೆ ದೊರಕಿದ್ದು, ಬಳಿಕ ಬಡ್ತಿ ನೀಡಲಾಗಿತ್ತು. ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿಯಾಗಿರುವ ಇವರು, ಇದೇ ಫೆಬ್ರುವರಿಯಿಂದ ಬಿಬಿಎಂಪಿ ಜಂಟಿ ಆಯುಕ್ತರ ಹುದ್ದೆಯಲ್ಲಿದ್ದಾರೆ.

1,155 ಟ್ರಾನ್ಸ್‌ಫಾರ್ಮರ್ ಅಳವಡಿಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪಾದಚಾರಿ ಮಾರ್ಗಗಳಲ್ಲಿನ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಈಗಾಗಲೇ 1,155 ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಸದಾಗಿ ನಿರ್ಮಿಸಲಾಗಿರುವ ಸ್ಪನ್ ಪೋಲ್‌ಗಳಿಗೆ (ನೆಲಮಟ್ಟದಿಂದ ಎತ್ತರಿಸಿದ ಕಂಬಗಳು) ಅಳವಡಿಸಲಾಗಿದೆ’ ಎಂದು ಬೆಸ್ಕಾಂ ಹೈಕೋರ್ಟ್‌ಗೆ ತಿಳಿಸಿದೆ.

‘ನಗರ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗ ಹಾಗೂ ರಾಜಕಾಲುವೆಗಳ ಮೇಲೆ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ತೆರವುಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ನಿವೃತ್ತ ವಿಂಗ್ ಕಮಾಂಡರ್ ಜಿ.ಬಿ.ಅತ್ರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಸ್ಕಾಂ ಪರ ವಕೀಲರು, ಬೆಸ್ಕಾಂನ ಮುಖ್ಯ ಪ್ರಧಾನ ವ್ಯವಸ್ಥಾಪಕರ (ಯೋಜನೆಗಳು) ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ‘1,433 ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸುವ ಕಾರ್ಯಪ್ರಗತಿಯಲ್ಲಿದೆ. 2ನೇ ಹಂತದ ಈ ಕಾರ್ಯ 2023ರ ಸೆಪ್ಟೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ’ ಎಂದು ವಿವರಿಸಿದರು. ಪ್ರಮಾಣಪತ್ರವನ್ನು ದಾಖಲಿಸಿಕೊಂಡ ಪೀಠ ಪ್ರಗತಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿ, ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿತು.

ಶಾಸಕರ ಭವನದಲ್ಲಿ ಡೀಲ್: ನಾಚಿಕೆ ಆಗುವುದಿಲ್ಲವೇ– ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಎಸ್‌ಐ ಹುದ್ದೆಗಾಗಿ ಕನಕಗಿರಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ದಢೇಸೂಗೂರು ಜೊತೆ ಒಪ್ಪಂದ ಮಾಡಿಕೊಂಡು ₹ 15 ಲಕ್ಷ ಮುಂಗಡವಾಗಿ ಶಾಸಕರ ಭವನದಲ್ಲಿ ಕೊಟ್ಟಿದ್ದೆ’ ಎಂದು ಪರಸಪ್ಪ ಮೇಗೂರು ಹೇಳಿದ ವಿಡಿಯೊ ತುಣುಕು ಬಿಡುಗಡೆ ಮಾಡಿದ ಕೆಪಿಸಿಸಿ ಸಂವಹನ ವಿಭಾಗ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ, ‘ಶಾಸಕರ ಭವನದಲ್ಲಿ ಡೀಲ್ ನಡೆದಿದೆಯೆಂದರೆ ನಾಚಿಕೆ ಆಗುವುದಿಲ್ಲವೇ?’ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಕೆಪಿಸಿಸಿ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನ್ನ ಮಗ ಪಿಎಸ್‌ಐ ಆಗಲು ಬಯಸಿದಾಗ ಶಾಸಕರ ಆಪ್ತರು ಬಂದು ನಿಮ್ಮ ಕೆಲಸ ಮಾಡುತ್ತೇವೆ ಎಂದು ಕಾರಟಗಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಡೀಲ್ ಮಾಡಿ, 2020 ಆಗಸ್ಟ್‌ನಲ್ಲಿ ಕನಕಗಿರಿ ಶಾಸಕರು ಶಾಸಕರ ಭವನಕ್ಕೆ ಕರೆಸಿಕೊಂಡರು. ಅಲ್ಲಿ ಸಿಬ್ಬಂದಿ ಹೆಚ್ಚಿದ್ದ ಕಾರಣ, ಶಾಸಕರ ಕಾರಿನಲ್ಲೇ ಕರೆದುಕೊಂಡು ಹೋಗುತ್ತಾರೆ. ವ್ಯವಹಾರ ಮಾಡಿ ₹ 30 ಲಕ್ಷಕ್ಕೆ ಡೀಲ್ ನಿರ್ಧರಿಸುತ್ತಾರೆ ಎಂದು ಪರಸಪ್ಪ ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ. ಈ ಡೀಲ್ ನಂತರ ಮುಂಗಡವಾಗಿ ₹ 15 ಲಕ್ಷ ನೀಡಿದ್ದಾರೆ. ಕೆಲಸ ಆಗದ ಕಾರಣ ಹಣ ಕೇಳಿದಾಗ ಸರ್ಕಾರಕ್ಕೆ ಕೊಟ್ಟಿರುವುದಾಗಿ ಹೇಳುತ್ತಾರೆ. ಸರ್ಕಾರವೆಂದರೆ ವಿಧಾನಸೌಧ ಅಲ್ಲವೇ’ ಎಂದೂ ಪ್ರಶ್ನಿಸಿದರು.

‘ಶಾಸಕರು ಹಣ ವಾಪಸ್ ಮಾಡದ ಕಾರಣ ಈ ಪ್ರಕರಣ ಬಹಿರಂಗವಾಗಿದೆ. ಬಿಜೆಪಿ ಶಾಸಕರು, ಸಚಿವರಿಗೆ ಬ್ರೋಕರ್‌ಗಳಾಗಿದ್ದಾರೆ’ ಎಂದ ಅವರು, ‘ಇಷ್ಟೆಲ್ಲಾ ನಡೆದರೂ ಶಾಸಕರಿಗೆ ನೋಟಿಸ್ ನೀಡಿಲ್ಲ. ಪ್ರಕರಣ ದಾಖಲಾಗಿಲ್ಲ. ಈ ಬಗ್ಗೆ ಸರ್ಕಾರ ಉತ್ತರಿಸಬೇಕು’ ಎಂದು ಆಗ್ರಹಿಸಿದರು.

ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ತಂಗಡಗಿ ಮಾತನಾಡಿ, ‘ಶಾಸಕ ಬಸವರಾಜ ದಢೇಸೂರು ಮತ್ತು ಪರಸಪ್ಪ ನಡುವಿನ ಸಂಭಾಷಣೆ ಸೆ. 5ರಂದು ಜಾಲತಾಣಗಳಲ್ಲಿ ಹರಿದಾಡಿದೆ. 6ರಂದು ಬಿಡುಗಡೆಯಾದ ಮತ್ತೊಂದು ಆಡಿಯೊದಲ್ಲಿ ಪಿಎಸ್‌ಐ ನೇಮಕಾತಿಗೆ ₹ 15 ಲಕ್ಷ ನೀಡಿರುವುದಾಗಿ ಪರಸಪ್ಪ ಹೇಳಿದ್ದರು. ಆ ಆಡಿಯೊದಲ್ಲಿರುವ ಧ್ವನಿ ನನ್ನದೆ ಎಂದು ಶಾಸಕರು ಒಪ್ಪಿಕೊಂಡಿದ್ದಾರೆ. ಪಿಎಸ್‌ಐ ಹಗರಣದಲ್ಲಿ ಸರ್ಕಾರದ ಭಾಗಿಯಾಗಿರುವುದಕ್ಕೆ ಇದು ಸಾಕ್ಷಿ’ ಎಂದರು.

ಕೆಪಿಸಿಸಿ ಕಾನೂನು ವಿಭಾಗದ ಮುಖ್ಯಸ್ಥ ಎ.ಎಸ್. ಪೊನ್ನಣ್ಣ, ‘ಕೆಲಸ ಮಾಡಿಸಿಕೊಡುವುದಾಗಿ ಯಾವುದೇ ವ್ಯಕ್ತಿ ಹಣ ಪಡೆದರೂ ಅಪರಾಧ. ಹೀಗಾಗಿ, ಈ ಆಡಿಯೊ ವಿಚಾರವಾಗಿ ತಕ್ಷಣ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಬೇಕು’ ಎಂದು ಒತ್ತಾಯಿಸಿದರು.

ಶಾಸಕರ ಭವನದಲ್ಲೇ ನಾನು ₹15 ಲಕ್ಷ ಕೊಟ್ಟಿದ್ದೆ; ಪರಸಪ್ಪ

ಕೊಪ್ಪಳ: ‘ಪಿಎಸ್‌ಐ ಆಗಿ ನನ್ನ ಮಗನ ನೇಮಕಾತಿ ಕುರಿತಂತೆ ಕನಕಗಿರಿ ಕ್ಷೇತ್ರದ ಶಾಸಕ ಬಸವರಾಜ ದಢೇಸೂಗೂರು ಜೊತೆ ಮಾತನಾಡಿದ್ದಂತೆ ಒಟ್ಟು ₹30 ಲಕ್ಷದ ಪೈಕಿ ₹15 ಲಕ್ಷ ಅನ್ನು ಮುಂಗಡವಾಗಿ ಶಾಸಕರ ಭವನದಲ್ಲೇ ಕೊಟ್ಟಿದ್ದೆ’ ಎಂದು ಕುಷ್ಟಗಿ ತಾಲ್ಲೂಕಿನ ಪರಸಪ್ಪ ಹೇಳಿದ್ದಾರೆ.

ಅವರು ಹೀಗೆ ಹೇಳಿರುವ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಸೋಮವಾರ ಸಾಕಷ್ಟು ಹಂಚಿಕೆಯಾಗಿದೆ. ಕಳೆದ ವಾರ ಎರಡು ಆಡಿಯೊಗಳು ಹಂಚಿಕೆಯಾಗಿದ್ದಾಗ ‘ನಾನು ಅವನಲ್ಲ’ಎಂದು ಪರಸಪ್ಪ ಹೇಳಿದ್ದರು. ಪತ್ರಿಕಾಗೋಷ್ಠಿಯನ್ನು ನಡೆಸಿ ಸ್ಪಷ್ಟನೆ ನೀಡಿದ್ದರು. ಈಗ ಅದೇ ಪರಸಪ್ಪ ವಿಡಿಯೊದಲ್ಲಿ ಕಾಣಿಸಿಕೊಂಡಿದ್ದಾರೆ. ವ್ಯಕ್ತಿಯೊಬ್ಬರ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ.

ವಿಡಿಯೊ ಬಗ್ಗೆ ಪ್ರತಿಕ್ರಿಯೆ ಪಡೆಯಲು ‘ಪ್ರಜಾವಾಣಿ’ ಪ್ರತಿನಿಧಿ ಪರಸಪ್ಪ ಅವರಿಗೆ ಕರೆ ಮಾಡಿದರೆ ಮೊದಲು ಕರೆ ಸ್ವೀಕರಿಸಲಿಲ್ಲ.

ಪಿಎಸ್‌ಐ ನೇಮಕಾತಿ ಹಗರಣದ ತನಿಖೆಗೆ ಆಗ್ರಹಿಸಿ ಪಕ್ಷದ ಕಾನೂನು ಘಟಕ ಪಕ್ಷದ ವತಿಯಿಂದ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸುವ ಬಗ್ಗೆ ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳುತ್ತೇವೆ

ಪ್ರಿಯಾಂಕ್ ಖರ್ಗೆ
ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ

ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಬಿಜೆಪಿ ಶಾಸಕರು ಮಾತನಾಡಿರುವ ಆಡಿಯೊ, ವಿಡಿಯೊ ಬಗ್ಗೆ ನನಗೆ ಗೊತ್ತಿಲ್ಲ. ಪರಿಶೀಲಿಸಿ, ತಪ್ಪು ಕಂಡುಬಂದರೆ ತನಿಖೆಗೆ ಆದೇಶಿಸಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಂಚಾರ ದಟ್ಟಣೆಯಲ್ಲಿ ಸಿಲುಕಿದ್ದ ಡಾ. ಗೋವಿಂದ್

ರೋಗಿಯ ಜೀವ ಉಳಿಸಲು 3 ಕಿ.ಮೀ ಓಡಿದ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ–ಮಾರತ್‌ಹಳ್ಳಿ ರಸ್ತೆಯಲ್ಲಿ ಉಂಟಾಗಿದ್ದ ವಿಪರೀತ ದಟ್ಟಣೆಯಲ್ಲಿ ಸಿಲುಕಿದ್ದ ವೈದ್ಯ ಡಾ. ಗೋವಿಂದ್ ನಂದಕುಮಾರ್, ರೋಗಿಯ ಜೀವ ಉಳಿಸುವುದಕ್ಕಾಗಿ ತಮ್ಮ ಕಾರಿನಿಂದ ಇಳಿದು ಆಸ್ಪತ್ರೆಯ ವರೆಗೂ 3 ಕಿ.ಮೀ.ವರೆಗೆ ಓಡಿದ್ದಲ್ಲದೇ, ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ.

ಸರ್ಜಾಪುರದ ಮಣಿಪಾಲ್ ಆಸ್ಪತ್ರೆಯ ಕರಳು–ಜೀರ್ಣಾಂಗವ್ಯೂಹ (ಗ್ಯಾಸ್ಟ್ರೊಎಂಟರಾಲಜಿ) ತಜ್ಞ ಡಾ. ಗೋವಿಂದ್ ನಂದಕುಮಾರ್ ಅವರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ವೈದ್ಯ ಓಡುತ್ತಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಹಲವರು, ‘ರೋಗಿ ಜೀವ ಉಳಿಸಿ, ವೃತ್ತಿ ಗೌರವ ಹಾಗೂ ಇಷ್ಟದ ಕೆಲಸ ಮಾಡಿದ ವೈದ್ಯರಿಗೆ ನಮನಗಳು’ ಎಂದು ಶ್ಲಾಘಿಸಿದ್ದಾರೆ.

ಜೀರ್ಣಾಂಗ ಸಂಬಂಧಿ ಕಾಯಿಲೆಗೆ ಒಳಗಾಗಿದ್ದ ರೋಗಿಯೊಬ್ಬರಿಗೆ ಆಗಸ್ಟ್ 30ರಂದು ಶಸ್ತ್ರಚಿಕಿತ್ಸೆ ನಿಗದಿಪಡಿಸಲಾಗಿತ್ತು. ಗೋವಿಂದ್ ನಂದಕುಮಾರ್ ಅವರೇ ಪ್ರಮುಖ ಶಸ್ತ್ರಚಿಕಿತ್ಸೆ ತಜ್ಞರಾಗಿದ್ದರು. ಅಂದು ಬೆಳಿಗ್ಗೆ ಮನೆಯಿಂದ ಆಸ್ಪತ್ರೆಗೆ ಹೊರಟಿದ್ದಾಗ,



ಡಾ. ಗೋವಿಂದ್ ನಂದಕುಮಾರ್

ಸರ್ಜಾಪುರ–ಮಾರತ್‌ಹಳ್ಳಿ ರಸ್ತೆಯ ದಟ್ಟಣೆಯಲ್ಲಿ ಸಿಲುಕಿದ್ದರು. ಆಗ ಕಾರಿನಿಂದ ಇಳಿದು, 3 ಕಿ.ಮೀ. ದೂರದಲ್ಲಿದ್ದ ಆಸ್ಪತ್ರೆಯವರೆಗೂ ಓಡಿದ್ದರು. ನಂತರ, ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದರು. ರೋಗಿ ಚೇತರಿಸಿಕೊಂಡು, ಮನೆಗೆ ಹೋಗಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಡಾ. ಗೋವಿಂದ್ ನಂದಕುಮಾರ್, ‘ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ನನ್ನ ಮನೆ ಇದೆ. ನಿತ್ಯವೂ ಸರ್ಜಾಪುರದಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ಕಾರಿನಲ್ಲಿ ಹೋಗಿ ಬರುತ್ತೇನೆ. ಬೆಳಿಗ್ಗೆ ಮನೆ ಬಿಟ್ಟು ಆಸ್ಪತ್ರೆ ತಲುಪಲು ಕನಿಷ್ಠ ಅರ್ಧ ಗಂಟೆ, ಗರಿಷ್ಠ 45 ನಿಮಿಷ ಬೇಕಾಗುತ್ತದೆ’ ಎಂದರು.

‘ಆಗಸ್ಟ್ 30ರಂದು ರೋಗಿಯೊಬ್ಬರಿಗೆ ಶಸ್ತ್ರಚಿಕಿತ್ಸೆ ಮಾಡಲು ಸಮಯ ನಿಗದಿಪಡಿಸಲಾಗಿತ್ತು. ಹೀಗಾಗಿ, ಎಂದಿನಂತೆ ನಿಗದಿತ ಸಮಯಕ್ಕೆ ಮನೆ ಬಿಟ್ಟಿದ್ದೆ. ದಟ್ಟಣೆಯಲ್ಲಿ ಐದು ನಿಮಿಷ ಕಾದರೂ ವಾಹನಗಳು ಸ್ವಲ್ಪವೂ ಮುಂದಕ್ಕೆ ಹೋಗಲಿಲ್ಲ. ಶಸ್ತ್ರಚಿಕಿತ್ಸೆ ಇದ್ದಿದ್ದರಿಂದ ರೋಗಿ ಪರಿಸ್ಥಿತಿ ನೆನೆದು ಆತಂಕ ಶುರುವಾಯಿತು.’

‘ಗೂಗಲ್ ಮ್ಯಾಪ್ ನೋಡಿದಾಗ, 3 ಕಿ.ಮೀ. ದೂರದ ಆಸ್ಪತ್ರೆ ತಲುಪಲು 45 ನಿಮಿಷ ಬೇಕೆಂದು ತೋರಿಸುತ್ತಿತ್ತು. ಅವಾಗಲೇ ಕಾರಿನಿಂದ ಕೆಳಗೆ ಇಳಿದೆ. ಕಾರನ್ನು ಆಸ್ಪತ್ರೆಗೆ ತರುವಂತೆ ಚಾಲಕರಿಗೆ ಹೇಳಿ, ನಾನೊಬ್ಬನೇ ಅಲ್ಲಿಂದ ಓಡಲಾರಂಭಿಸಿದೆ. ನಿಗದಿತ ಸಮಯಕ್ಕೆ ಆಸ್ಪತ್ರೆ ತಲುಪಿ ಶಸ್ತ್ರಚಿಕಿತ್ಸೆ ಮಾಡಿದೆ. ಎರಡೂವರೆ ಗಂಟೆಗಳ ನಂತರ ಕಾರು ಆಸ್ಪತ್ರೆಗೆ ಬಂತು. ಆಕಸ್ಮಾತ್ ನಾನು ಓಡಿ ಬಾರದಿದ್ದರೆ ರೋಗಿಯ ಆರೋಗ್ಯ ಸ್ಥಿತಿ ಮತ್ತಷ್ಟು ಹದಗೆಡುತ್ತಿತ್ತು’ ಎಂದು ತಿಳಿಸಿದರು.

‘ನಿತ್ಯವೂ ವ್ಯಾಯಾಮದ ಹವ್ಯಾಸ ಬೆಳೆಸಿಕೊಂಡಿದ್ದೇನೆ. ಇದರಿಂದಾಗಿಯೇ 3 ಕಿ.ಮೀ.ವರೆಗೆ ಓಡಲು ಸಾಧ್ಯವಾಯಿತು’ ಎಂದು ಹೇಳಿದರು.

ಕಾಮೆಡ್–ಕೆ ನೀತಿ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮೆಡ್–ಕೆ ಪ್ರವೇಶ ಪ್ರಕ್ರಿಯೆ ಮತ್ತು ಶುಲ್ಕ ಮರುಪಾವತಿ ನೀತಿಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎನ್.ಪಿ ಅಮೃತೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಸದಸ್ಯ ಕಾರ್ಯದರ್ಶಿ, ಕಾಮೆಡ್–ಕೆ (ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ) ಅಧ್ಯಕ್ಷರೂ ಸೇರಿದಂತೆ ಒಟ್ಟು ಎಂಟು ಜನ ಪ್ರತಿವಾದಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

ದ್ವಿತೀಯ ಪಿಯು ಪೂರಕ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, 65,233 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

1,85,270 ವಿದ್ಯಾರ್ಥಿಗಳು ಪೂರಕ ಪರೀಕ್ಷೆ ತೆಗೆದುಕೊಂಡಿದ್ದರು. ಆ.12ರಿಂದ 25ರವರೆಗೆ ಪರೀಕ್ಷೆ ನಡೆದಿತ್ತು. 1,75,905 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ 37.08 ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಹಂತಕ್ಕೆ ಅರ್ಹರಾಗಿದ್ದಾರೆ. 1,10,672 ವಿದ್ಯಾರ್ಥಿಗಳು ವಿಫಲರಾಗಿದ್ದಾರೆ. ವಿದ್ಯಾರ್ಥಿಗಳು ವೈಯಕ್ತಿಕವಾಗಿ ಫಲಿತಾಂಶ ವೀಕ್ಷಿಸಲು karresults.nic.in ಸಂಪರ್ಕಿಸಬಹುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಮಾಹಿತಿ ನೀಡಿದ್ದಾರೆ.

ಪದವಿ ಪ್ರವೇಶ ಪಡೆಯಲು ಸೆ.15ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

‘ವಿದ್ವತ್ ಶಿರೋಮಣಿ’ ಹಿಂದಿರುಗಿಸಿದ ಸಿಪಿಕೆ

ಬೆಂಗಳೂರು: ಚಿತ್ರದುರ್ಗದ ಮುರುಘಾ ಶರಣರು ಹಿಂದೆ ಕೊಟ್ಟಿದ್ದ ‘ವಿದ್ವತ್ ಶಿರೋಮಣಿ’ ಪ್ರಶಸ್ತಿಯನ್ನು ಹಿಂದಿರುಗಿಸುತ್ತಿರುವುದಾಗಿ ಸಾಹಿತಿ ಮೈಸೂರಿನ ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ಅವರು ‘ಪ್ರಜಾವಾಣಿ’ಗೆ ಪತ್ರ ಬರೆದು ತಿಳಿಸಿದ್ದಾರೆ.

ಪ್ರಶಸ್ತಿಯು ಯಾವುದೇ ನಗದನ್ನು ಒಳಗೊಂಡಿರಲಿಲ್ಲ ಎಂದೂ ಅವರು ಉಲ್ಲೇಖಿಸಿದ್ದಾರೆ.

ಕಡಜ ಕಚ್ಚಿ ಇಬ್ಬರ ಸಾವು

ಸಂತೇಬಾಚಹಳ್ಳಿ (ಮಂಡ್ಯ ಜಿಲ್ಲೆ): ಜಮೀನಿನಲ್ಲಿ ಕೆಲಸ ಮಾಡುತಿದ್ದ ರೈತರ ಮೇಲೆ ಭಾನುವಾರ ವಿಷಪೂರಿತ ಕಡಜಗಳು ದಾಳಿ ನಡೆಸಿದ್ದು, ಇಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ತೀವ್ರವಾಗಿ ಅಸ್ವಸ್ಥಗೊಂಡಿದ್ದಾರೆ.

ಅಘಲಯ ಗ್ರಾಮ ಪಂಚಾಯಿತಿಯ ನಾಗರಘಟ್ಟ ಗ್ರಾಮದಲ್ಲಿ ಘಟನೆ ನಡೆದಿದೆ. ಕೃಷಿಕರಾದ ನಾಗರಾಜೇಗೌಡ (58), ನಂಜೇಗೌಡ (60) ಮೃತರು. ಎಂ.ಬಿ.ಕುಮಾರಸ್ವಾಮಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮರು ಪರಿಶೀಲನೆಗೆ ಆದೇಶ: ಹೈಕೋರ್ಟ್ ಎಚ್ಚರಿಕೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 243 ವಾರ್ಡ್‌ಗಳಿಗೆ ನಿಗದಿಪಡಿಸಲಾಗಿರುವ ಮೀಸಲು ನಿಗದಿಯಲ್ಲಿ ಏನಾದರೂ ಲೋಪ ಕಂಡರೆ ಹೊಸದಾಗಿ ಮೀಸಲು ನಿಗದಿಪಡಿಸುವಂತೆ ಆದೇಶಿಸಬೇಕಾಗುತ್ತದೆ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದೆ.

ಈ ಕುರಿತಂತೆ ಈಜಿಪುರದ ಕೆ.ಮಹದೇವ, ವಿ.ಶ್ರೀನಿವಾಸನ್ ಮತ್ತು ಕೆ.ಚಂದ್ರಶೇಖರ್ ಹಾಗೂ ಇತರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಕೆಲವು ವಿಧಾನಸಭಾ ಕ್ಷೇತ್ರಗಳ ಎಲ್ಲಾ ವಾರ್ಡ್‌ಗಳನ್ನೂ ಮಹಿಳೆಯರಿಗೆ ಮೀಸಲಿರಿಸುವ ಮೂಲಕ ನಿಯಮಗಳನ್ನು ಗಾಳಿಗೆ ತೂರಲಾಗಿದೆ’ ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಮೀಸಲಾತಿ ಪಟ್ಟಿಯನ್ನು ಮರುರೂಪಿಸುವ ಸಾಧ್ಯತೆಗಳ ಕುರಿತಂತೆ ಸರ್ಕಾರದ ನಿಲುವು ಏನಿದೆ ಎಂಬುದನ್ನು ತಿಳಿಸಿ’ ಎಂದು ಅಡ್ವೊಕೇಟ್ ಜನರಲ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ಇದೇ ವೇಳೆ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, ‘ಇದೇ 22ಕ್ಕೆ ಮತದಾರರ ಪಟ್ಟಿ ಅಂತಿಮಗೊಳಿಸಲಾಗುವುದು. ನಂತರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗುವುದು’ ಎಂದು ತಿಳಿಸಿದರು.

ವಾದವೇನು?: ‘ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಭಕ್ತವತ್ಸಲ ಸಮಿತಿ ವರದಿ ಆಧರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ಭಕ್ತವತ್ಸಲ ಸಮಿತಿ ಮೂರು ಹಂತದ ಪರಿಶೀಲನೆಯನ್ನು (ಟ್ರಿಪಲ್ ಟೆಸ್ಟ್) ಅನ್ವಯಿಸಿಕೊಂಡಿಲ್ಲ. ಯಾವ ಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಲಾಗಿದೆ ಎಂಬ ಪಟ್ಟಿಯನ್ನೂ ಒದಗಿಸಿಲ್ಲ. ಆದ್ದರಿಂದ, ಅಧಿಸೂಚನೆ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಹೊಸದಾಗಿ ರಚನೆಯಾಗಿರುವ 243 ವಾರ್ಡ್‌ಗಳಿಗೆ ಮೀಸಲು ಪಟ್ಟಿಯನ್ನು 2022ರ ಆಗಸ್ಟ್ 3ರಂದು ಪ್ರಕಟಿಸಲಾಗಿದೆ.

‘ಕಾಂಗ್ರೆಸ್ ಪಕ್ಷದಿಂದ ಅಲ್ಪಸಂಖ್ಯಾತರು ಹೊರಕ್ಕೆ’

ಮೈಸೂರು: ‘ಕಾಂಗ್ರೆಸ್ ತಮ್ಮನ್ನು ಕೇವಲ ಮತ ಬ್ಯಾಂಕ್ ಆಗಿ ಮಾಡಿಕೊಂಡಿತ್ತು ಎಂದು ಅಲ್ಪಸಂಖ್ಯಾತರಿಗೆ ಅರ್ಥವಾಗುತ್ತಿದೆ. ಅವರೆಲ್ಲ ಆ ಪಕ್ಷದಿಂದ ಹೊರಬರುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸೋಮವಾರ ಪ್ರತಿಪಾದಿಸಿದರು.

ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಆಯೋಜಿಸಿರುವ ಎರಡು ದಿನಗಳ ಪ್ರಶಿಕ್ಷಣ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು.

‘ಲೋಕಸಭೆಯಲ್ಲಿ ವಿರೋಧ ಪಕ್ಷವಾಗಲೂ ಕಾಂಗ್ರೆಸ್ ನಾಲಾಯಕ್ ಆಗಿದೆ. ಲೈಟ್ ಕಂಬ ನಿಲ್ಲಿಸಿದ್ದರೂ ಗೆಲ್ಲುತ್ತೇವೆಂಬ ವಿಶ್ವಾಸವಿದ್ದ ಪಕ್ಷದಲ್ಲಿ, ರಾಹುಲ್ ಗಾಂಧಿ ಕೇರಳಕ್ಕೆ, ಸಿದ್ದರಾಮಯ್ಯ ಬಾದಾಮಿಗೆ ಹೋಗಬೇಕಾಯಿತು’ ಎಂದರು.

ಅಲ್ಪಸಂಖ್ಯಾತರಿಗೆ ಯೋಜನೆ: ‘ಅಲ್ಪಸಂಖ್ಯಾತರ ಭೂತ ಬಿಜೆಪಿ ಎಂದು ಕಾಂಗ್ರೆಸ್‌ನವರು ಬಿಂಬಿಸಿದ್ದರು. ಅದರಿಂದ, ಗಾಂಧಿ ಕುಟುಂಬ ಹಾಗೂ ನಾಯಕರ ಉದ್ಧಾರವಾಯಿತೇ ಹೊರತು ಅಲ್ಪಸಂಖ್ಯಾತರ ಅಭಿವೃದ್ಧಿಯಾಗಲಿಲ್ಲ’ ಎಂದು ಹೇಳಿದರು.

‘ರಾಷ್ಟ್ರೀಯ ವಿಚಾರಧಾರೆಯುಳ್ಳ ಎಲ್ಲರನ್ನೂ ಗೌರವಿಸುತ್ತೇವೆ. ದೇಶ ವಿರೋಧಿಸುವವರು, ದುಷ್ಕೃತ್ಯ ಎಸಗುವವರು ಹಾಗೂ ಪಾಕಿಸ್ತಾನಕ್ಕೆ ಜೈ ಎನ್ನುವವರನ್ನು ವಿರೋಧಿಸಿಯೇ ತೀರುತ್ತೇವೆ’ ಎಂದರು.

‘ಸ್ವಾತಂತ್ರ್ಯ ನಂತರ ಭಾರತ ಹೇಗಿರಬೇಕು ಎಂಬ ಪರಿಕಲ್ಪನೆಯನ್ನು ಗಾಂಧೀಜಿ ಕೊಟ್ಟಿದ್ದರು. ಸುದೀರ್ಘ ಅವಧಿಗೆ ಕಾಂಗ್ರೆಸ್ ಆಳಿದರೆ ರಾವಣರು ನಿರ್ಮಾಣ ವಾಗುತ್ತಾರೆ ಎನ್ನುವುದು ಗಾಂಧೀಜಿಗೆ ಗೊತ್ತಿತ್ತು. ಆದ್ದರಿಂದ ರಾಜ್ಯದ ಪರಿಕಲ್ಪನೆ ಕೊಟ್ಟರು. ರಾಮ ರಾಜ್ಯವಾಗಲು ಮನೆ ಮನೆಗಳಲ್ಲಿ ರಾಮ ಇರಬೇಕು, ಆಗ ಕಾಂಗ್ರೆಸ್ ನಿರ್ಮಾಣ ಮಾಡುವ ರಾವಣರನ್ನು ಸೋಲಿಸಲು ಸಾಧ್ಯ ಎಂದಿದ್ದರು. ಹೀಗಾಗಿ, ಪಕ್ಷ ರಾಮನಂಥವರನ್ನು ನಿರ್ಮಿಸುತ್ತಿದೆ’ ಎಂದರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2022–23/3427 ದಿನಾಂಕ:09.09.2022

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1,3&4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022–23ನೇ ಸಾಲಿನ ಲೆಕ್ಕಶೀರ್ಷಿಕೆ ಕೆಕೆಆರ್‌ಡಿಬಿ ಅಡಿಯಲ್ಲಿ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ e-procurement ಮುಖಾಂತರ (1)ಯಾದಗಿರಿ ತಾಲೂಕಿನ 01, (2) ಶಹಾಪೂರ ತಾಲೂಕಿನ 02 ಮತ್ತು (3) ಸುರಪೂರ ತಾಲೂಕಿನ 03 ಒಟ್ಟಾರೆ ವಿಭಾಗದ 06 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವಿವರ ಕೆಳಗಿನಂತಿವೆ. (1)155089, (2)154282, (3)155899, (4)154514, (5)154493 ಮತ್ತು (6)155192, 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಠ ರೂ.13.64 ಲಕ್ಷ ಹಾಗೂ ಗರಿಷ್ಠ ರೂ:221.00 ಲಕ್ಷ,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು (ನಿಯಮಾನುಸಾರ), 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 28,600.00 ಗರಿಷ್ಠ ರೂ: 2,78,100.00, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: **15.09.2022 (11.30 ಗಂಟೆ ನಂತರ)**, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **16.09.2022 (17.30 ಗಂಟೆವರೆಗೆ)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **23.09.2022 (16.00 ಗಂಟೆವರೆಗೆ)**, 8) ಟೆಂಡರ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **26.09.2022 (11.30 ಗಂಟೆ ನಂತರ) (ಕೆಡಬ್ಲ್ಯೂ–1ರ ಕಾಮಗಾರಿಗಳಿಗೆ ಮಾತ್ರ),** 9) ಟೆಂಡರ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26.09.2022 (11.30 ಗಂಟೆ ನಂತರ)** (ಕೆಡಬ್ಲ್ಯೂ–3 ಮತ್ತು 4ರ ಕಾಮಗಾರಿಗಳಿಗೆ ಮಾತ್ರ), 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.09.2022 (11.30 ಗಂಟೆ ನಂತರ)** (ಕೆಡಬ್ಲ್ಯೂ–3 ಮತ್ತು 4ರ ಕಾಮಗಾರಿಗಳಿಗೆ ಮಾತ್ರ), 11) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ. ವಿಭಾಗ: ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/241/ಎಂ.ಸಿ.ಎ/2022–23

ಪರಿಸರವಾದಿಗಳ ಆಕ್ಷೇಪ: ಸ್ವಂತ ಬಳಕೆಗೆ ಮನೆ ಕಟ್ಟುತ್ತಿದ್ದೇವೆ– ಸಂಜಯ್ ಗುಬ್ಬಿ

ಬಂಡೀಪುರ: ಸೂಕ್ಷ್ಮ ವಲಯದಲ್ಲಿ ಕಟ್ಟಡ

ಪ್ರಜಾವಾಣಿ ವಾರ್ತೆ

ಚಾಮರಾಜನಗರ/ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಪರಿಸರ ಸೂಕ್ಷ್ಮ ವಲಯದಲ್ಲಿ ವನ್ಯಜೀವಿ ತಜ್ಞ ಡಾ.ಸಂಜಯ್ ಗುಬ್ಬಿ ಅವರು ಕಟ್ಟಡ ನಿರ್ಮಿಸುತ್ತಿರುವುದಕ್ಕೆ ಪರಿಸರವಾದಿಗಳು ಆಕ್ಷೇಪಿಸಿದ್ದಾರೆ.

ಯುನೈಟೆಡ್ ಕನ್ಸರ್ವೇಷನ್ ಮೂವ್‌ಮೆಂಟ್‌ನ ಗೌರವ ಅಧ್ಯಕ್ಷ ಹಾಗೂ ರಾಜ್ಯ ವನ್ಯಜೀವಿ ಮಂಡಳಿಯ ಮಾಜಿ ಸದಸ್ಯ ಜೋಸೆಫ್ ಹೂವರ್ ಅವರು ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿದ್ದು, ‘ಗುಬ್ಬಿ ಅವರು ನಿಯಮಗಳನ್ನು ಉಲ್ಲಂಘಿಸಿದ್ದಾರೆ’ ಎಂದು ದೂರಿದ್ದಾರೆ.

ಆರೋಪ ನಿರಾಕರಿಸಿರುವ ಸಂಜಯ್ ಗುಬ್ಬಿ, ‘ವೈಯಕ್ತಿಕ ಬಳಕೆಗಾಗಿ ಮನೆ ನಿರ್ಮಿಸುತ್ತಿದ್ದು, ಎಲ್ಲ ನಿಯಮಗಳನ್ನು ಪಾಲಿಸಲಾಗಿದೆ’ ಎಂದಿದ್ದಾರೆ.

ಗುಂಡ್ಲುಪೇಟೆ ತಾಲ್ಲೂಕು ಬಾಚಹಳ್ಳಿಯ ಸರ್ವೆ ನಂಬರ್ 279ರಲ್ಲಿ 4 ಎಕರೆ 15 ಗುಂಟೆ ಜಮೀನನ್ನು ಸಂಜಯ್ ಗುಬ್ಬಿ ಹೊಂದಿದ್ದು, ಜಮೀನು

ಪರಿಸರ ಸೂಕ್ಷ್ಮ ವಲಯದಲ್ಲಿರುವ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಗಳು

ಅವರ ಪತ್ನಿ ಹೆಸರಿನಲ್ಲಿದೆ. ಇದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿದೆ. ಕಣಿಯನಪುರ ಆನೆ ಕಾರಿಡಾರ್ ಕೂಡಾ ಈ ಪ್ರದೇಶದಲ್ಲಿ ಹಾದು ಹೋಗುತ್ತದೆ.

‘ವನ್ಯಜೀವಿಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಸಂಜಯ್ ಗುಬ್ಬಿಯವರೇ ಕಟ್ಟಡ ನಿರ್ಮಿಸುತ್ತಿರುವುದು ದುರದೃಷ್ಟಕರ. ಜಮೀನು ಪರಿಸರ ಸೂಕ್ಷ್ಮ ವಲಯ ಹಾಗೂ ಆನೆ ಕಾರಿಡಾರ್‌ನಲ್ಲಿದೆ ಎಂದು ತಿಳಿದಿದ್ದರೂ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹಿಂದಿನ ನಿರ್ದೇಶಕ ಎಸ್.ಆರ್.ನಟೇಶ್ ಅವರು ಎರಡೇ ದಿನದಲ್ಲಿ ಕಟ್ಟಡ ನಿರ್ಮಿಸಲು ಅವಕಾಶ ನೀಡಿದ್ದಾರೆ’ ಎಂದು ಜೋಸೆಫ್ ಹೂವರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಾಲಚಂದ್ರ ಅವರು ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿದ್ದಾಗ ಪರಿಸರ ಸೂಕ್ಷ್ಮವಲಯದಲ್ಲಿರುವ ರೆಸಾರ್ಟ್, ಹೋಂ ಸ್ಟೇ ಮುಂತಾದ ವಾಣಿಜ್ಯ ಕಟ್ಟಡಗಳನ್ನು ತೆರವುಗೊಳಿಸಬೇಕು ಎಂದು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು. ಹಾಗಿರುವಾಗ, ಗುಬ್ಬಿ ಅವರಿಗೆ ಅನುಮತಿ ನೀಡಿದ್ದಾದರೂ ಹೇಗೆ’ ಎಂದು ಪ್ರಶ್ನಿಸಿದರು.

ಮನೆ ನಿರ್ಮಾಣಕ್ಕೆ ಅನುಮತಿ: ಸಂಜಯ್ ಗುಬ್ಬಿ ಅವರು 2021ರ ಫೆಬ್ರುವರಿ 22ರಂದು ವಾಸಕ್ಕೆ ಹಾಗೂ ಕೃಷಿ ಉಪಕರಣಗಳನ್ನು ಇರಿಸಲು ಐದು ಗುಂಟೆ ಜಮೀನಿನಲ್ಲಿ ಮನೆ ನಿರ್ಮಿಸಲು ಅನುಮತಿ ಕೋರಿದ್ದರು. 24ರಂದು ಬಂಡೀಪುರ ನಿರ್ದೇಶಕರು ಅನುಮತಿ ನೀಡಿದ್ದರು. ಐದು ಗುಂಟೆಗಿಂತ ಹೆಚ್ಚು ಜಾಗ ಬಳಸುವಂತಿಲ್ಲ, ವಾಣಿಜ್ಯ ಉದ್ದೇಶದ ಕಟ್ಟಡ ನಿರ್ಮಿಸುವಂತಿಲ್ಲ ಎಂಬ ಷರತ್ತು ಹಾಕಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್‌ಕುಮಾರ್ ಅವರಿಗೆ ಕರೆ ಮಾಡಿದರೂ ಸಂಪರ್ಕ ಸಾಧ್ಯವಾಗಲಿಲ್ಲ.

‘ನಿಯಮಗಳ ಅನುಸಾರವಾಗಿ ವಾಸದ ಉದ್ದೇಶಕ್ಕಾಗಿ ಮನೆ ನಿರ್ಮಿಸಲು ಅನುಮತಿ ನೀಡಲಾಗಿದೆ’ ಎಂದು ಕೆಳ ಹಂತದ ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಸೂಕ್ಷ್ಮ ಪರಿಸರ ವಲಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಅರಣ್ಯ ಇಲಾಖೆ ಒಪ್ಪಿಗೆ ಮುಖ್ಯ, ವಾಣಿಜ್ಯ ಚಟುವಟಿಕೆಗೆ ಬಳಸಿದರೆ ಕ್ರಮ ವಹಿಸಲಾಗುವುದು

ರವಿಶಂಕರ್, ಗುಂಡ್ಲುಪೇಟೆ ತಹಶೀಲ್ದಾರ್

‘ನಿಯಮಗಳ ಪ್ರಕಾರ ನಿರ್ಮಾಣ’

ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿರುವ ಸಂಜಯ್ ಗುಬ್ಬಿ, ‘ವೈಯಕ್ತಿಕ ಬಳಕೆಗಾಗಿ, ಕಾನೂನಿನನ್ವಯ ಎಲ್ಲ ಷರತ್ತುಗಳನ್ನೂ ಪಾಲಿಸಿ ಮನೆ ಕಟ್ಟುತ್ತಿದ್ದೇವೆ. ವನ್ಯಜೀವಿಗಳ ಓಡಾಟಕ್ಕೆ ತೊಂದರೆಯಾಗದ ಹಾಗೆ ಕಾಮಗಾರಿ ಕೈಗೊಂಡಿದ್ದೇವೆ. ಸುಳ್ಳು ಸುದ್ದಿ ಹಬ್ಬಿಸಿದವರ ವಿರುದ್ಧ ಮಾನನಷ್ಟ ನೋಟಿಸ್ ನೀಡಲಾಗಿದೆ. ಸೂಕ್ತ ಸಮಯದಲ್ಲಿ ಉತ್ತರ ದೊರಕದಿದ್ದರೆ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು’ ಎಂದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಸಂ:ವಾಕರಸಾಸಂ:ಕಾನಿಅ:837:2022–23 ದಿನಾಂಕ : 12–09–2022.

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 17 & 18 ರಿಂದ / 2022–23

(Through GOK e-procurement platform https://eproc.karnataka.gov.in)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ರ ಪ್ರಕಾರ ಇಡಿಗಂಟು (Lumpsum) ಟೆಂಡರ್ ಎಕ ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕೆಲಸಕ್ಕಾಗಿ ಅರ್ಹ ಪ್ರೋಜೆಕ್ಟ ಮ್ಯಾನೇಜಮೆಂಟ್ ಕನ್ಸಲ್ಟನ್ಸಿ ಫರ್ಮ/ಪ್ರೋಜೆಕ್ಟ್ ಮೆನೆಜಮೆಂಟ್ ಸರ್ವಿಸ್ ಎಜೆನ್ಸಿ /ಸರಕಾರದ ನೊಂದಾಯಿತ ಪ್ರಾಕ್ಟಿಸಿಂಗ್ ಸಿವಿಲ್ ಇಂಜನಿಯರ್ಸ್ (Project Management consultancy firms/Project Management Service Agencies/ Practicing Civil Engineers registered in Government Registering Authorities) ರವರಿಗೆ ಮೂರನೇ ಪಕ್ಷಗಾರರಿಂದ ಪರಿವೀಕ್ಷಣೆಗಾಗಿ (Third Party Inspection) ಟೆಂಡರ್ ಕರೆಯಲಾಗಿದ್ದು, ನೊಂದಾಯಿತ ಅರ್ಹ ಕನ್ಸಲ್ಟಂಟ್ಸ್ ಟೆಂಡರ್‌ನ ವಿವರಗಳಿಗಾಗಿ ವೆಬ್‌ಸೈಟ್ **(https://www.eproc.karnataka.gov.in)** ಲಾಗಾನ್ ಆಗಿ ಟೆಂಡರ್‌ನ್ನು ಅರ್ಹ ದಸ್ತಾವೇಜ್‌ನೊಂದಿಗೆ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಆಪ್–ಲೋಡ್ ಮಾಡಬೇಕಾಗಿರುತ್ತದೆ.

ಅ. ಸಂ	ಪ್ರಕಟಣೆ ಸಂ.	ಕೆಲಸದ ಹೆಸರು	ಇ.ಎಂ.ಡಿ ಮೊತ್ತ ರೂ.ಗಳಲ್ಲಿ	ಸೇವೆಗೆ ಬೇಕಾದ ನಿಗದಿತ ಅವಧಿ
1.	17	Third Party Inspection for the work “of Construction of New depot with its Sub works at Shiggaon, Dist : Haveri,. [Work Estimate Amt:700=00 Lakhs]	35000=00	09 ತಿಂಗಳು ಅಥವಾ ಕಾಮಗಾರಿ ಮುಗಿಯುವವರೆಗೆ
2.	18	Third Party Inspection for the work “Construction of Driving & Mechanic traning institute with its sub works at Shiggaon Dist: Haveri “ [Work Estimate Amt: 1740=00 Lakhs]	87000=00	12 ತಿಂಗಳು ಅಥವಾ ಕಾಮಗಾರಿ ಮುಗಿಯುವವರೆಗೆ

ವೇಳಾಪಟ್ಟಿ

(1) ಪ್ರೀ ಬಿಡ್ ಮೀಟಿಂಗ್‌ಗಾಗಿ ದಿನಾಂಕ ಮತ್ತು ವೇಳೆ : **19/09/2022** at 12:00 Hrs, (2) ವಿಚಾರಣೆ ಮತ್ತು ಆಕ್ಷೇಪಣೇಗಾಗಿ ಕೊನೆಯ ದಿನಾಂಕ ಮತ್ತು ವೇಳೆ : **19/09/2022** at 17:00 Hrs (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : **23/09/2022** at 16:00 Hrs, (4) ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : **26 /09/2022** at 11:00 Hrs.

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0836–2332383** ಗೆ ಸಂಪರ್ಕಿಸಬಹುದಾಗಿದೆ ಹಾಗೂ ಸಹಾಯವಾಣಿ (help desk): **080–25501216, 080–25501227** ಸಂಪರ್ಕಿಸಬಹುದಾಗಿದೆ. ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಸುಭಾಷಿತ

ದುಃಖಕ್ಕೆ ಸಿಕ್ಕಷ್ಟು ಬೇಗ ಕಾರಣ ಸುಖಕ್ಕೆ ಸಿಗುವುದಿಲ್ಲ.
-ಪಿ.ಲಂಕೇಶ್

ಲೋಕಾಯುಕ್ತದ ಬಲವರ್ಧನೆ ದಿಟ್ಟ ಕ್ರಮಗಳು ಅಗತ್ಯ

ರಾಜ್ಯ ಸರ್ಕಾರದಲ್ಲಿನ ದುರಾಡಳಿತ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಲೋಕಾಯುಕ್ತ ಸಂಸ್ಥೆಯು ದೇಶದ ಅತ್ಯುತ್ತಮ ತನಿಖಾ ಸಂಸ್ಥೆಗಳಲ್ಲಿ ಒಂದು ಎಂಬ ಕೀರ್ತಿಗೆ ಪಾತ್ರವಾಗಿತ್ತು. ಆದರೆ, 2013ರಿಂದ 2015ರ ನಡುವಿನ ಅವಧಿಯಲ್ಲಿ ಲೋಕಾಯುಕ್ತ ಕಚೇರಿಯ ಒಳಗಡೆಯೇ ನಡೆದ ಚಟುವಟಿಕೆಗಳು ಸಂಸ್ಥೆಯ ಘನತೆಗೆ ಮಸಿ ಬಳಿದಿದ್ದವು. ಆ ಸಂದರ್ಭವನ್ನು ಬಳಸಿಕೊಂಡು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಲೋಕಾಯುಕ್ತ ಪೊಲೀಸ್ ವಿಭಾಗದ ಅಧಿಕಾರ ಮೊಟಕುಗೊಳಿಸಿತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ದಾಖಲಾಗುವ ಪ್ರಕರಣಗಳ ತನಿಖೆಗೆ ಪ್ರತ್ಯೇಕವಾದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರಚಿಸಿ 2016ರಲ್ಲಿ ಆದೇಶಗಳನ್ನು ಹೊರಡಿಸಿತು. ಈ ಐತಿಹಾಸಿಕ ಪ್ರಮಾದದಿಂದಾಗಿ ಲೋಕಾಯುಕ್ತ ಸಂಸ್ಥೆಯು ಹಲ್ಲು ಕಿತ್ತ ಹಾವಿನಂತಾಗಿತ್ತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ದೂರು ಸ್ವೀಕರಿಸಿ, ಎಫ್‌ಐಆರ್ ದಾಖಲಿಸುವ, ತನಿಖೆ ನಡೆಸುವ ಮತ್ತು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸುವ ಅಧಿಕಾರವನ್ನು ಮುಖ್ಯಮಂತ್ರಿ ಅಧೀನದಲ್ಲಿದ್ದ ಎಸಿಬಿಗೆ ನೀಡಲಾಗಿತ್ತು. ತಾನು ಅಧಿಕಾರಕ್ಕೆ ಬಂದಲ್ಲಿ ಎಸಿಬಿಯನ್ನು 24 ಗಂಟೆಗಳಲ್ಲಿ ರದ್ದು ಮಾಡಿ, ಲೋಕಾಯುಕ್ತ ಪೊಲೀಸ್ ವಿಭಾಗವನ್ನು ಬಲವರ್ಧನೆ ಮಾಡುವುದಾಗಿ ಬಿಜೆಪಿಯು 2018ರ ಚುನಾವಣಾ ಪ್ರಣಾಳಿಕೆಯಲ್ಲೇ ಭರವಸೆ ನೀಡಿತ್ತು. ಜೆಡಿಎಸ್ ಕೂಡ ಚುನಾವಣಾ ಪ್ರಚಾರದಲ್ಲಿ ಇದೇ ಮಾತು ಹೇಳಿತ್ತು. 14 ತಿಂಗಳ ಕಾಲ ಸಮ್ಮಿಶ್ರ ಸರ್ಕಾರದ ನೇತೃತ್ವ ವಹಿಸಿದ್ದ ಜೆಡಿಎಸ್ ಹಾಗೂ ನಂತರ ಮೂರು ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ ಈ ವಾಗ್ದಾನವನ್ನು ಮರೆತೇಬಿಟ್ಟಿದ್ದವು. ಎಸಿಬಿ ರಚನೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ದ್ವಿಸದಸ್ಯ ಪೀಠವು ಎಸಿಬಿ ರಚನೆಯ ಆದೇಶವನ್ನು ರದ್ದುಗೊಳಿಸಿ, ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಮೊದಲಿನ ಅಧಿಕಾರ ಮರುಸ್ಥಾಪಿಸಿ ಈಚೆಗೆ ಆದೇಶಿಸಿದೆ. ಹೈಕೋರ್ಟ್ ತೀರ್ಪಿನ ಪಾಲನೆಗೆ 29 ದಿನಗಳ ಸಮಯ ತೆಗೆದುಕೊಂಡ ರಾಜ್ಯ ಸರ್ಕಾರವು ಎಸಿಬಿಯಲ್ಲಿನ ಪ್ರಕರಣಗಳನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹಸ್ತಾಂತರಿಸುವ ಮತ್ತು ಲೋಕಾಯುಕ್ತ ಪೊಲೀಸ್ ಕಚೇರಿಗಳಿಗೆ ಹಿಂದಿನಂತೆಯೇ ಪೊಲೀಸ್ ಠಾಣೆಗಳ ಸ್ಥಾನಮಾನ ನೀಡುವ ಆದೇಶವನ್ನು ಈ ತಿಂಗಳ 9ರಂದು ಹೊರಡಿಸಿದೆ. ಹೈಕೋರ್ಟ್ ಮಧ್ಯಪ್ರವೇಶದಿಂದಾಗಿಯೇ ಲೋಕಾಯುಕ್ತದ ಬಲವರ್ಧನೆಯ ಪ್ರಕ್ರಿಯೆ ಆರಂಭವಾಗಿದೆ. ಇದು, ಬಹುಜನರ ಅಪೇಕ್ಷೆ ಆಗಿತ್ತು.

ಲೋಕಾಯುಕ್ತ ಪೊಲೀಸ್ ವಿಭಾಗವನ್ನು ದಕ್ಷ ತನಿಖಾ ಸಂಸ್ಥೆಯನ್ನಾಗಿ ರೂಪಿಸುವ ಸವಾಲು ಲೋಕಾಯುಕ್ತರು ಹಾಗೂ ಸರ್ಕಾರದ ಎದುರಿಗೆ ಇದೆ

ಲೋಕಾಯುಕ್ತ ಪೊಲೀಸ್ ವಿಭಾಗವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ನಡೆಸುವ ಕೆಲಸವನ್ನು ಪುನಃ ಆರಂಭಿಸಿದೆ. ಈಗ ಲೋಕಾಯುಕ್ತ ಪೊಲೀಸ್ ವಿಭಾಗವನ್ನು ಭ್ರಷ್ಟಾಚಾರ ಮತ್ತು ಅಧಿಕಾರ ದುರ್ಬಳಕೆಯ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯಲ್ಲಿ ದಕ್ಷ ಮತ್ತು ಲೋಪಗಳಿಲ್ಲದ ತನಿಖಾ ಸಂಸ್ಥೆಯನ್ನಾಗಿ ರೂಪಿಸುವ ಸವಾಲು ಲೋಕಾಯುಕ್ತರು ಹಾಗೂ ಸರ್ಕಾರದ ಎದುರಿಗೆ ಇದೆ. ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ 'ಕಳಂಕಿತರು' ಪ್ರವೇಶಿಸದಂತೆ ಎಚ್ಚರಿಕೆ ವಹಿಸಬೇಕು. ಪೊಲೀಸ್ ಅಧಿಕಾರಿಗಳ ಪೂರ್ವಾಪರ ಪರಿಶೀಲಿಸಿ, ಸಂಸ್ಥೆಯ ಮುಖ್ಯಸ್ಥರ ಸಮ್ಮತಿ ಪಡೆದ ಬಳಿಕವಷ್ಟೇ ಈ ವಿಭಾಗಕ್ಕೆ ಅಧಿಕಾರಿಗಳನ್ನು ನಿಯೋಜಿಸುವ ಪದ್ಧತಿಯನ್ನು ಅನುಸರಿಸಬೇಕು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ದಾಖಲಾಗುವ ಪ್ರಕರಣಗಳ ತನಿಖೆಯಲ್ಲಿ ಅನುಸರಿಸಬೇಕಾದ ವಿಧಾನ ಕುರಿತು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಈವರೆಗೂ ಒಂದು ಕೈಪಿಡಿ ಇಲ್ಲ. ಐಪಿಎಸ್ ಅಧಿಕಾರಿಯಾಗಿದ್ದ ಕೆ. ಮಧುಕರ ಶೆಟ್ಟಿ ಅವರು ಸಲ್ಲಿಸಿದ್ದ ಕೈಪಿಡಿಯ ಕರಡು ಸರ್ಕಾರದಲ್ಲೇ ದೂಳು ತಿನ್ನುತ್ತಿದೆ. ಲೋಕಾಯುಕ್ತ ಪೊಲೀಸ್ ವಿಭಾಗವು ಲೋಪಕ್ಕೆ ಅವಕಾಶಗಳಿಲ್ಲದ ತನಿಖಾ ವಿಧಾನ ಅಳವಡಿಸಿಕೊಳ್ಳುವುದಕ್ಕೆ ಪೂರಕವಾಗಿ ಸರ್ಕಾರವು ಕೈಪಿಡಿಗೆ ಅನುಮೋದನೆ ನೀಡಿ, ಅನುಷ್ಠಾನಕ್ಕೆ ತರಬೇಕು. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು, ಕರ್ತವ್ಯಲೋಪ, ಅಧಿಕಾರ ದುರ್ಬಳಕೆ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಪ್ರಾಥಮಿಕ ತನಿಖೆ ನಡೆಸುವುದಕ್ಕೂ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಿರುವ ನಿಯಮಗಳನ್ನು ಕೈಬಿಡಬೇಕು. ತನಿಖೆ ಪೂರ್ಣಗೊಂಡ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡದೆ ವಿಳಂಬ ಧೋರಣೆ ಅನುಸರಿಸುವುದನ್ನು ಕೈಬಿಟ್ಟು, ಕಾಲಮಿತಿಯೊಳಗೆ ಅನುಮತಿ ನೀಡುವುದನ್ನು ಕಡ್ಡಾಯಗೊಳಿಸಬೇಕು. ಲೋಕಾಯುಕ್ತ ಪೊಲೀಸ್ ವಿಭಾಗವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಿಸಿದ ಪ್ರಕರಣಗಳಲ್ಲಿ ಆರೋಪಿಗಳಾಗಿರುವವರು ಮತ್ತು ಬಂಧನಕ್ಕೊಳಗಾದ ಅಧಿಕಾರಿಗಳನ್ನು ಅದೇ ಹುದ್ದೆಗಳಲ್ಲಿ ಮುಂದುವರಿಸುವ ಕೆಟ್ಟ ಚಾಳಿಗೆ ಸರ್ಕಾರ ವಿದಾಯ ಹೇಳಬೇಕು. ಸಂಸ್ಥೆಯ ಘನತೆಗೆ ಚ್ಯುತಿ ಬಾರದಂತೆ ನಿಷ್ಪಕ್ಷಪಾತವಾಗಿ ಹಾಗೂ ವೃತ್ತಿಪರವಾಗಿ ಪ್ರಕರಣಗಳ ತನಿಖೆ ನಡೆಸುವುದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಹೊಣೆ.

ದಿನದ ಟ್ವೀಟ್

ಹೆಸರಿಗೆ ಮಾರುಹೋಗುವ ಮುನ್ನ...

ಮತ್ತೊಮ್ಮೆ ಜನ ವ್ಯಾಲಿ, ರೈನ್‌ಬೋ, ಗ್ರೀನ್ಸ್, ಶೋರ್ಸ್, ಪಾಮ್ ಎಂದೆಲ್ಲಾ ಪಾಶ್ಚಿಮಾತ್ಯ ಹೆಸರುಗಳಿಗೆ ಮಾರುಹೋಗಿ ಆಸ್ತಿ ಖರೀದಿಸುವ ಮುನ್ನ ಆ ಊರು, ಹಳ್ಳಿ, ಹಳ್ಳ, ಕೆರೆ ಕುಂಟೆಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲು ಪ್ರಯತ್ನಿಸುವುದು ಉತ್ತಮ. ಇಲ್ಲವಾದಲ್ಲಿ ಸ್ವತಃ ಪ್ರಕೃತಿಯೇ ತನ್ನ ಪರಿಚಯ ಮಾಡಿಕೊಡುತ್ತದೆ. ಆಗ ಕಾಲ ಮೀರಿರುತ್ತದೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಲೈಂಗಿಕ ಕಿರುಕುಳಕ್ಕೆ ಒಳಗಾಗುವ ಭೀತಿಯಿಂದ ಸಾಮಾನ್ಯವಾಗಿ ಮಹಿಳೆಯರು ಜನಸಂದಣಿಯ ಪ್ರದೇಶಗಳಿಗೆ ತೆರಳುವುದಕ್ಕೆ ಇಷ್ಟಪಡುವುದಿಲ್ಲ. ಈ ಮಧ್ಯೆ, ಹೈದರಾಬಾದ್‌ನಲ್ಲಿ 'SHE' ತಂಡದವರು, ಗಣೇಶ ಚತುರ್ಥಿ ಸಂದರ್ಭದಲ್ಲಿ ಮಹಿಳೆಯರ ಜೊತೆ ಅಸಭ್ಯವಾಗಿ ನಡೆದುಕೊಂಡ 240 ಗಂಡಸರನ್ನು ಹಿಡಿದು ಅವರ ಮೇಲೆ ದೂರು ದಾಖಲಾಗುವಂತೆ ಮಾಡಿರುವುದು ಇತರ ದುರುಳರಿಗೆ ಎಚ್ಚರಿಕೆಯ ಪಾಠವಾಗಲಿದೆ ಎಂದು ನಾನು ಆಶಿಸುತ್ತೇನೆ.

ನತಾಶಾ ರಾಮರತ್ನಂ, ಬರಹಗಾರ್ತಿ

25 ವರ್ಷಗಳ ಹಿಂದೆ
ಶನಿವಾರ, 13-9-1997

• ಜೆಎಂಎಂ: ರಾವ್ ವಿರುದ್ಧ ಕ್ರಮಕ್ಕೆ ದೆಹಲಿ ಹೈಕೋರ್ಟ್ ಅಸ್ತು

ನವದೆಹಲಿ, ಸೆ. 12 (ಯುಎನ್‌ಐ, ಪಿಟಿಐ)– ಬಹುಕೋಟಿ ಜೆಎಂಎಂ ಲಂಚ ಪ್ರಕರಣದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್, ಕೇಂದ್ರದ ನಾಲ್ವರು ಮಾಜಿ ಸಚಿವರು, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಸೇರಿ ಇಬ್ಬರು ಮುಖ್ಯಮಂತ್ರಿಗಳು ಮತ್ತು ಇತರ 11 ಜನರ ವಿರುದ್ಧ ಆರೋಪ ಸಿದ್ಧಪಡಿಸಿದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ದೆಹಲಿ ಹೈಕೋರ್ಟ್ ಸಮರ್ಥಿಸಿ ಅವರ ಕ್ರಿಮಿನಲ್ ಪುನರ್‌ಪರಿಶೀಲನಾ ಅರ್ಜಿ ತಳ್ಳಿಹಾಕಿತು.

• ಇಂದು ಮದರ್ ತೆರೇಸಾ ಅಂತ್ಯಕ್ರಿಯೆ

ಕಲ್ಕತ್ತ, ಸೆ. 12 (ಪಿಟಿಐ, ಯುಎನ್‌ಐ)– ಮದರ್ ತೆರೇಸಾ ಅವರ ಅಂತ್ಯಸಂಸ್ಕಾರ ಹಾಗೂ ಆ ಸಂಬಂಧಿಸಿದ ಆರಾಧನಾ ವಿಧಿಗಳನ್ನು ನಾಳೆ ಇಲ್ಲಿನ ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಸಲು ಭಾರಿ ಸಿದ್ಧತೆಗಳು ನಡೆದಿದ್ದು, ದೇಶ- ವಿದೇಶಗಳಿಂದ ಗಣ್ಯರು ಈಗಾಗಲೇ ಕಲ್ಕತ್ತೆಯತ್ತ ಬರಲಾರಂಭಿಸಿದ್ದಾರೆ. ನಾಳೆ ಬೆಳಗ್ಗೆ 10 ಗಂಟೆಗೆ ಆರಂಭವಾಗುವ ಸಂಸ್ಕಾರ ವಿಧಿಗಳಲ್ಲಿ ಒಟ್ಟು 23 ದೇಶಗಳ ಗಣ್ಯರು ಭಾಗವಹಿಸಲಿದ್ದು, ಅವರಲ್ಲಿ ಕೆಲವರು ಈಗಾಗಲೇ ಬಂದಿದ್ದಾರೆ.

50 ವರ್ಷಗಳ ಹಿಂದೆ
ಬುಧವಾರ, 13-9-1972

• ಅಕ್ಟೋಬರ್ 1ರಿಂದ ವಿದ್ಯುತ್ ಬಳಕೆಯಲ್ಲಿ ಶೇ 25ರಷ್ಟು ಖೋತಾ

ಬೆಂಗಳೂರು, ಸೆ. 12– ಶರಾವತಿ ವಿದ್ಯುತ್ ಉತ್ಪತ್ತಿ ಕೇಂದ್ರಕ್ಕೆ ನೀರು ಒದಗಿಸುವ ಲಿಂಗನಮಕ್ಕಿ ಜಲಾಶಯಕ್ಕೆ ನಿರೀಕ್ಷಿಸಿದಷ್ಟು ನೀರು ಬಂದಿಲ್ಲವಾದ ಕಾರಣ, ಮುಂಜಾಗ್ರತೆ ಕ್ರಮವಾಗಿ ಅಕ್ಟೋಬರ್ 1ರಿಂದ ವಿದ್ಯುತ್ ಬಳಕೆಯಲ್ಲಿ ಶೇ 25ರಷ್ಟು ಖೋತಾ ವಿಧಿಸಲಾಗುವುದು.

ಈ ಸಂಬಂಧದಲ್ಲಿ ಇಂದು ವಿದ್ಯುತ್ ಮಂಡಳಿಯೊಡನೆ ಚರ್ಚೆ ನಡೆಸಿದ ವಿದ್ಯುತ್ ಸಚಿವ ಶ್ರೀ ಎಚ್.ಎಂ. ಚನ್ನಬಸಪ್ಪ ಅವರು 'ಲಿಂಗನಮಕ್ಕಿ ಜಲಾಶಯ ಸೆಪ್ಟೆಂಬರ್–ನವೆಂಬರ್ ಅವಧಿಯಲ್ಲಿ ತುಂಬದಿದ್ದರೆ ಮುಂದೆ ಶೇ 40ರಷ್ಟು ವಿದ್ಯುತ್ ಖೋತಾ ಮಾಡಬೇಕಾಗುತ್ತದೆ. ಅದರಿಂದಾಗಿ ಈಗಿನಿಂದಲೇ ಖೋತಾ ಜಾರಿಗೆ ತರಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ' ಎಂದು ಇಂದು ವರದಿಗಾರರಿಗೆ ತಿಳಿಸಿದರು.

• ಕೆಂಗಲ್ 'ತಪಸ್ಸು' ಆರಂಭ

ಬೆಂಗಳೂರು, ಸೆ. 12– ಮಾಜಿ ರೈಲ್ವೆ ಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯ ಅವರು ಇಂದು 21 ದಿನಗಳ ಕಟು ಪ್ರಾರ್ಥನಾ ಹಾಗೂ ವ್ರತವನ್ನು ಆರಂಭಿಸಿದರು.

ಇದರ ಉದ್ದೇಶ ಕುಡಿತ ಮತ್ತು ಜಾತೀಯತೆಯಿಂದ ಕಾಂಗ್ರೆಸ್ಸಿನ ಶುದ್ಧೀಕರಣ ಹಾಗೂ ರಾಜಕೀಯದಲ್ಲಿ ಉನ್ನತ ಮಟ್ಟದ ಧ್ಯೇಯ ಆದರ್ಶ ಸ್ಥಾಪನೆ.

ರಾಜ್ಯಗಳ ನಡುವಿನ ಆರ್ಥಿಕ ಕಂದಕವು ಅಪಾಯಕಾರಿಯಾಗುವ ಸಾಧ್ಯತೆ ಇದೆ

ಲಯ ತಪ್ಪಬಹುದು 'ಒಂದು ರಾಷ್ಟ್ರ' ಮಂತ್ರ

ವಿಶ್ಲೇಷಣೆ

ಪ್ರವೀಣ್ ಚಕ್ರವರ್ತಿ

ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವವರು ಕಳೆದ ಕೆಲವು ವರ್ಷಗಳಿಂದ 'ಒಂದು ರಾಷ್ಟ್ರ' ಎಂಬ ಭಜನೆ ಮಾಡುತ್ತಿದ್ದಾರೆ. ಒಂದು ರಾಷ್ಟ್ರ, ಒಂದು ಅಸ್ಮಿತೆ; ಒಂದು ರಾಷ್ಟ್ರ, ಒಂದು ಚುನಾವಣೆ; ಒಂದು ರಾಷ್ಟ್ರ, ಒಂದು ಭಾಷೆ; ಒಂದು ರಾಷ್ಟ್ರ, ಒಂದು ಪರೀಕ್ಷೆ; ಒಂದು ರಾಷ್ಟ್ರ, ಒಂದು ಪಠ್ಯಕ್ರಮ; ಒಂದು ರಾಷ್ಟ್ರ, ಒಂದು ತೆರಿಗೆ... ಈ ಬಗೆಯ ಮಾತುಗಳಿವೆ. ದೇಶವನ್ನು ಒಗ್ಗೂಡಿಸಲು, ಬಲಪಡಿಸಲು ಈ ಬಗೆಯ 'ಒಂದಾಗುವಿಕೆ' ಬೇಕು ಎಂದು ಅವರು ಹೇಳುತ್ತಿದ್ದಾರೆ. ಇಡೀ ದೇಶಕ್ಕೆ ಅನ್ವಯವಾಗುವ ಒಂದೇ ಬಗೆಯ ನೀತಿಗಳನ್ನು ಕೇಂದ್ರವು ಜಾರಿಗೊಳಿಸಬೇಕು ಎನ್ನುತ್ತಿದ್ದಾರೆ.

ದೇಶದ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಭಿನ್ನತೆಗಳು ಬಹುಶ್ರುತ. ಆದರೆ, ದೇಶದ ಆರ್ಥಿಕ, ರಾಜಕೀಯ ಮತ್ತು ಜನಸಂಖ್ಯೆಗೆ ಸಂಬಂಧಿಸಿದ ಭಿನ್ನತೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ, ಪೂರ್ತಿಯಾಗಿ ಗುರುತಿಸಿಲ್ಲ. ಬಿಹಾರದ ವ್ಯಕ್ತಿಯು ವಾರ್ಷಿಕ ಸರಾಸರಿ ₹ 45 ಸಾವಿರ ಸಂಪಾದಿಸುತ್ತಾನೆ. ಕರ್ನಾಟಕದ ವ್ಯಕ್ತಿಯು ವಾರ್ಷಿಕ ಸರಾಸರಿ ಐದು ಪಟ್ಟು ಹೆಚ್ಚು, ಅಂದರೆ, ₹ 2.3 ಲಕ್ಷ ಸಂಪಾದಿಸುತ್ತಾನೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರ ಹಿಡಿಯುವ ಸ್ಪರ್ಧೆಯಲ್ಲಿ 23 ರಾಜಕೀಯ ಪಕ್ಷಗಳು ಇವೆ. ಉತ್ತರಪ್ರದೇಶದ ಜನಸಂಖ್ಯೆಯ ಸರಾಸರಿ ವಯಸ್ಸು 22 ವರ್ಷ, ಕರ್ನಾಟಕದಲ್ಲಿ ಇದು 31 ವರ್ಷ. ಬೇರೆ ಬೇರೆ ರಾಜ್ಯಗಳಲ್ಲಿ ಜನ ಬೇರೆ ಬೇರೆ ಭಾಷೆಗಳನ್ನು ಮಾತನಾಡುವುದು, ಬೇರೆ ಬೇರೆ ಆಹಾರ ಕ್ರಮ ಪಾಲಿಸುವುದು, ವಿಭಿನ್ನ ಹಬ್ಬಗಳನ್ನು ಆಚರಿಸುವುದಷ್ಟೇ ಅಲ್ಲದೆ, ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಮತ ಚಲಾಯಿಸುತ್ತಾರೆ, ಅವರ ಸಂಪಾದನೆಯ ಮೊತ್ತ ಬೇರೆ ಬೇರೆ ಇದೆ.

ಭಾರತದಲ್ಲಿನ ಇಂತಹ ಎದ್ದುಕಾಣುವ ಭಿನ್ನತೆಗಳು ಹೆಮ್ಮೆಯ ವಿಚಾರವೂ ಹೌದು ನಾಚಿಕೆಯ ಸಂಗತಿಯೂ ಹೌದು. ನಾವು ನಮ್ಮ ಶ್ರೀಮಂತ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವೈವಿಧ್ಯದ ವಿಚಾರದಲ್ಲಿ ಹೆಮ್ಮೆ ಹೊಂದಿರಬೇಕು. ಆದರೆ, ಆರ್ಥಿಕ ಹಾಗೂ ಜನಸಂಖ್ಯೆಗೆ ಸಂಬಂಧಿಸಿದಂತೆ ರಾಜ್ಯಗಳ ನಡುವಿನ ಅಂತರವು ಅಪೇಕ್ಷಣೀಯವಲ್ಲ. ಅದು ವಿನಾಶಕಾರಿ. ರಾಜ್ಯಗಳ ನಡುವಿನ ಆರ್ಥಿಕ ಕಂದಕವು ಸ್ವಾತಂತ್ರ್ಯಾನಂತರ ಬಹಳ ಹೆಚ್ಚಾಗಿದೆ. ಈಗ ಅದು ಗಂಭೀರ ಪರಿಣಾಮ ಉಂಟುಮಾಡಬಲ್ಲ ವಿಭಜನಕಾರಿ ವಿಷಯವಾಗುವ ಅಪಾಯ ಇದೆ.

ಬೇರೆ ಬೇರೆ ರಾಜ್ಯಗಳ ನಡುವಿನ ಜೀವನೋಪಾಯದ ಅಂತರವನ್ನು ತಗ್ಗಿಸುವ ಅನಿವಾರ್ಯ ಇದೆ. ಇದು ಆಗಬೇಕಾದರೆ 'ಒಂದು ದೇಶ, ಹಲವು ಕ್ರಮಗಳು' ಎಂಬ ಧೋರಣೆ ಬೇಕು. ಅಂದರೆ, ಬೇರೆ ಬೇರೆ ರಾಜ್ಯಗಳಿಗೆ ಸ್ಥಳೀಯವಾದ ಕ್ರಮಗಳು ಬೇಕು. ಊಳಿಗಮಾನ್ಯ ಮನಸ್ಸಿನಿಂದ, ದೆಹಲಿಯಿಂದ 'ಏಕತ್ವ'ವನ್ನು ಹೇರುವುದು ತಿರುಗುಬಾಣ ಆದೀತು. ಇದು ಪ್ರತ್ಯೇಕತಾವಾದಿ ಆಲೋಚನೆಗಳನ್ನು ಬಿತ್ತಬಹುದು, ರಾಷ್ಟ್ರವಿರೋಧಿಯಾಗಿ ಪರಿಣಮಿಸಬಹುದು.

ದೇಶದ ಬೇರೆ ಬೇರೆ ರಾಜ್ಯಗಳ ನಡುವಿನ ಆರ್ಥಿಕ ಅಸಮಾನತೆಯನ್ನು ನಾವು ಅರ್ಥ ಮಾಡಿಕೊಳ್ಳೋಣ. ದೇಶದ ಅಷ್ಟೂ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪೈಕಿ ಐದು ಮುಂಚೂಣಿ ರಾಜ್ಯಗಳಲ್ಲಿ – ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಕೇರಳ – ನಡೆಯುವ ಆರ್ಥಿಕ ಚಟುವಟಿಕೆಗಳ ಪ್ರಮಾಣವು ಇನ್ನುಳಿದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುವ ಆರ್ಥಿಕ ಚಟುವಟಿಕೆಗಳಿಗೆ ಸಮ. ಈ ಐದು ರಾಜ್ಯಗಳಲ್ಲಿನ ಆರ್ಥಿಕ ಚಟುವಟಿಕೆಗಳು ಇಡೀ ದೇಶದ ಅರ್ಧದಷ್ಟು ಆರ್ಥಿಕ ಚಟುವಟಿಕೆಗಳಿಗೆ ಸಮ. ಅಮೆರಿಕ ಮತ್ತು ಚೀನಾದಲ್ಲಿನ ಮುಂಚೂಣಿ ಐದು ರಾಜ್ಯಗಳು ಅಲ್ಲಿನ ಒಟ್ಟು ಆರ್ಥಿಕ ಚಟುವಟಿಕೆಗಳ ಮೂರನೆಯ ಒಂದರಷ್ಟು ಪಾಲನ್ನು ಮಾತ್ರ ಹೊಂದಿವೆ. ಅಂದರೆ, ಭಾರತದಲ್ಲಿನ ಆರ್ಥಿಕ ಚಟುವಟಿಕೆಗಳು ಅಮೆರಿಕ ಹಾಗೂ ಚೀನಾದಲ್ಲಿನ ಆರ್ಥಿಕ ಚಟುವಟಿಕೆಗಳಿಗಿಂತಲೂ ಒಂದೇ ಕಡೆ ಹೆಚ್ಚು ಸಾಂದ್ರೀಕೃತ ಆಗಿವೆ.

ಭಾರತದ ಆರ್ಥಿಕ ಚಟುವಟಿಕೆಗಳು ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತ ಆಗಿರುವ ಕಾರಣ, ಕೇಂದ್ರ ಸರ್ಕಾರದ ತೆರಿಗೆ ವರಮಾನಕ್ಕೆ ಈ ರಾಜ್ಯಗಳೇ ಹೆಚ್ಚಿನ ಕೊಡುಗೆ ನೀಡುತ್ತಿವೆ. ಮಹಾರಾಷ್ಟ್ರ, ಕರ್ನಾಟಕ ಅಥವಾ ಹರಿಯಾಣದ ವ್ಯಕ್ತಿ ಕೇಂದ್ರಕ್ಕೆ ತೆರಿಗೆ ರೂಪದಲ್ಲಿ ವಾರ್ಷಿಕ ಸರಾಸರಿ ₹ 20 ಸಾವಿರ ಪಾವತಿಸುತ್ತಾನೆ. ಆದರೆ, ಬಿಹಾರದ ವ್ಯಕ್ತಿ ಸರಾಸರಿ ₹ 2,000 ಮಾತ್ರ ನೀಡುತ್ತಾನೆ. ಉತ್ತರಪ್ರದೇಶ ಅಥವಾ ಮಧ್ಯ ಪ್ರದೇಶದ ವ್ಯಕ್ತಿ ಸರಾಸರಿ ₹ 4,500 ಕೊಡುತ್ತಾನೆ. ಅಂದರೆ, ಕರ್ನಾಟಕದ ವ್ಯಕ್ತಿಯು ಬಿಹಾರದ ವ್ಯಕ್ತಿಗಿಂತ ಹತ್ತು ಪಟ್ಟು ಹೆಚ್ಚು ಹಣವನ್ನು ತೆರಿಗೆ ರೂಪದಲ್ಲಿ ನೀಡುತ್ತಾನೆ. ಈ ಅಂತರವು ವಿಶ್ವದಲ್ಲಿಯೇ ಅತಿ ಹೆಚ್ಚಿನದು. ಅಮೆರಿಕ ಮತ್ತು ಚೀನಾದ ಶ್ರೀಮಂತ ರಾಜ್ಯ ಅಥವಾ ಪ್ರಾಂತ್ಯದ ವ್ಯಕ್ತಿ ಕೊಡುವ ಸರಾಸರಿ ತೆರಿಗೆ ಮೊತ್ತವು ಬಡ ರಾಜ್ಯದ ವ್ಯಕ್ತಿ ಕೊಡುವ ಸರಾಸರಿ ಮೊತ್ತಕ್ಕಿಂತ ಮೂರು ಪಟ್ಟು ಮಾತ್ರ ಹೆಚ್ಚು.

ಈ ತೆರಿಗೆಯನ್ನು ಸಂಗ್ರಹಿಸುವ ಕೇಂದ್ರ ಸರ್ಕಾರವು ಅದರಲ್ಲಿ ಒಂದಿಷ್ಟನ್ನು ರಾಜ್ಯಗಳಿಗೆ ಕೆಲವು ಯೋಜನೆಗಳಿಗೆ ಹಾಗೂ ಇತರ ವೆಚ್ಚಗಳಿಗೆ ಮರುಹಂಚಿಕೆ ಮಾಡುತ್ತದೆ. ಈ ಕೆಲಸ ಬೇರೆ ದೇಶಗಳಲ್ಲಿಯೂ ನಡೆಯುತ್ತದೆ. ಇದು ಶ್ರೀಮಂತ ಹಾಗೂ ಬಡ ರಾಜ್ಯಗಳ ನಡುವಿನ ಅಂತರವನ್ನು ತಗ್ಗಿಸುವ ಒಂದು ಯತ್ನ. ಕೇಂದ್ರಕ್ಕೆ ನೀಡುವ ₹ 100 ತೆರಿಗೆಗೆ ಪ್ರತಿಯಾಗಿ ಬಿಹಾರದ ವ್ಯಕ್ತಿಗೆ ಸರಾಸರಿ ₹ 600 ಸಿಗುತ್ತದೆ. ಕರ್ನಾಟಕದ ವ್ಯಕ್ತಿಗೆ ಸರಾಸರಿ ₹ 50 ಮಾತ್ರ ಸಿಗುತ್ತದೆ.

ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಹರಿಯಾಣದ ನಿವಾಸಿಗಳು ಕೇಂದ್ರದ ತೆರಿಗೆ ವರಮಾನಕ್ಕೆ ಕೊಡುವ ಹಣವು, ಅವರು ಅಲ್ಲಿಂದ ಪಡೆಯುವ ಹಣಕ್ಕಿಂತ ಹೆಚ್ಚು. ಇತರ ಎಲ್ಲ ರಾಜ್ಯಗಳ ನಿವಾಸಿಗಳು ಕೇಂದ್ರದ ತೆರಿಗೆ ಸಂಗ್ರಹದಿಂದ ಪಡೆಯುವ ಹಣವು, ಅವರು ಕೊಡುವ ಹಣಕ್ಕಿಂತ ಹೆಚ್ಚು. ಹೀಗಾಗಿ, ಈ ಐದು ರಾಜ್ಯಗಳ ನಿವಾಸಿಗಳು ಮಾತ್ರ ದೇಶದ ಇತರ ಭಾಗಗಳ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ. ಶ್ರೀಮಂತ ಹಾಗೂ ಬಡ ರಾಜ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಇದು ಸರಿಯಾದ, ನ್ಯಾಯಬದ್ಧವಾದ ನೀತಿ ಹೌದು. ಆದರೆ, ಕಾಲ ಸರಿದಂತೆಲ್ಲ ಈ ಅಂತರವು ಹೆಚ್ಚುತ್ತ ಸಾಗಿದೆ; ಕಡಿಮೆ ಆಗಿಲ್ಲ. ಹೀಗಾಗಿ, ಈ ರಾಜ್ಯಗಳ ಜನ ಈಗ ದೇಶದ ಇತರ ಪ್ರದೇಶಗಳಿಗಾಗಿ ತಾವು ಇನ್ನೂ ಎಷ್ಟು ಕಾಲ ಕೊಡುತ್ತಿರಬೇಕು ಎಂದು ಪ್ರಶ್ನಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು 'ಒಂದು ರಾಷ್ಟ್ರ, ಒಂದು ನೀತಿ'ಯನ್ನು ಹೇರುವುದು ರಾಜ್ಯಗಳಲ್ಲಿನ ಜನರನ್ನು ಪ್ರಚೋದಿಸಬಹುದು, ದೇಶದ ಸೂಕ್ಷ್ಮ ಸಮತೋಲನಕ್ಕೆ ಬೆದರಿಕೆ ಒಡ್ಡುವ ಉಪ ರಾಷ್ಟ್ರೀಯ ವಾದದ ಅಲೆಗೆ ಕಾರಣವಾಗಬಹುದು.

ಉದಾಹರಣೆಗೆ, ಕರ್ನಾಟಕದಲ್ಲಿನ ಸರ್ಕಾರವು ಉಚಿತವಾಗಿ ಇಂಟರ್ನೆಟ್ ನೀಡುವುದಕ್ಕೆ ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರ ತಾಕೀತು ಮಾಡಿದರೆ, ಕನ್ನಡಿಗರು ತಿರುಗಿನಿಂತು ತಾವು ನೀಡಿದ ತೆರಿಗೆ ಹಣದಿಂದ ಉತ್ತರಪ್ರದೇಶದಲ್ಲಿ ಉಚಿತವಾಗಿ ಸ್ಕೂಟರ್ ನೀಡುತ್ತಿರುವುದು ಏಕೆ ಎಂದು ಕೇಳಬಹುದು. ಕರ್ನಾಟಕದ ಯುವಕರು ನೀಟ್ ಪರೀಕ್ಷೆ ಬರೆಯುವಂತೆ, ಜಿಎಸ್‌ಟಿ ಪಾವತಿಸುವಂತೆ ಅವರ ಇಚ್ಛೆಗೆ ವಿರುದ್ಧವಾಗಿ ಒತ್ತಡ ತಂದರೆ, ಬಿಹಾರದ ರೈತರಿಗೆ ತಮ್ಮ ತೆರಿಗೆ ಹಣವನ್ನು ಏಕೆ ವೆಚ್ಚ ಮಾಡಬೇಕು ಎಂದು ಅವರು ಕೇಳಬಹುದು. ಇವೆಲ್ಲ ಬಹಳ ಅಪಾಯಕಾರಿ ಪ್ರಚೋದನೆಗಳಾಗಬಹುದು. ಇಂಥವನ್ನು ಹೇಗಾದರೂ ಮಾಡಿ ತಡೆಯಬೇಕು.

ಎಲ್ಲ ರಾಜ್ಯಗಳೂ ತಾವೆಲ್ಲ ಒಂದೇ ಎಂದು ವರ್ತಿಸುವಂತೆ ಮಾಡಿದರೆ, ಎಲ್ಲ ರಾಜ್ಯಗಳೂ ಒಂದೇ ನೀತಿಯನ್ನು ಅನುಸರಿಸುವಂತೆ ಮಾಡಿದರೆ ದೇಶವನ್ನು ಒಗ್ಗೂಡಿಸಿದಂತೆ, ಬಲಪಡಿಸಿದಂತೆ ಆಗುತ್ತದೆ ಎಂದು ಕೇಂದ್ರ ನಂಬಿರುವಂತಿದೆ. ಆದರೆ ಭಾರತದ ಬಹುತ್ವವನ್ನು ಗೌರವಿಸದೇ ಇದ್ದರೆ, ಬಹುತ್ವದ ಅಭಿವ್ಯಕ್ತಿಗೆ ಅವಕಾಶ ಕೊಡದೇ ಇದ್ದರೆ ಅದು ಬಹಳ ಬೇಗ ಅಶಾಂತಿಯಾಗಿ ಪರಿವರ್ತನೆ ಕಾಣಬಲ್ಲದು. ಮಹಾತ್ಮ ಗಾಂಧಿ ಅವರ ಆತ್ಮಸಾಕ್ಷಿಯಂತೆ ಇದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಹೇಳಿದಂತೆ, 'ಏಕತೆ ಅಂದರೆ ಏಕರೂಪತೆ ಅಲ್ಲ'.

ಲೇಖಕ: ರಾಜಕೀಯ ಅರ್ಥಶಾಸ್ತ್ರಜ್ಞ
ಕಾಂಗ್ರೆಸ್ಸಿನ ಪದಾಧಿಕಾರಿ

ಚುರುಮುರಿ

ಗುಲ್ಡೋಜರುಗಳು

• ಲಿಂಗರಾಜು ಡಿ.ಎಸ್.

'ಮತದಲ್ಲಿ ಕೀಳ್ಯಾವುದೋ ವೋಟ್ರಪ್ಪ ಮತದಲ್ಲಿ ಮೇಲ್ಯಾವುದು ಕೀಳ್ಯಾವುದೋ, ಹುಟ್ಟೀ ಸಾಯುವ ಹಾಳು ಮನುಸಾರ ಮತದಲ್ಲಿ ಕೀಳ್ಯಾವುದು ಮೇಲ್ಯಾವುದೋ! ಇಟ್ಟ ನಾಮ ಪರ್ಸೆಂಟೇಜ್ ಬೂದಿ ಕತ್ತ ಕತ್ತಲು ನಿರನಾಮಾ ಹಾ ಒದಿರಿ ಹಾ ಒದಿರಿ ಹಾ ಒದಿರಿ...' ತುರೇಮಣೆ ಗಾನ ಕೇಳಿ ನಗ ಬಂತು.

'ಇದೇನ್ಸಾ ಹೊತ್ನಂತೆ ಸತ್ಯ ಹರಿಶ್ಚಂದ್ರನ ನೆನಸಿಗ್ಯತಿದೀರಿ?' ಅಂತಂದೆ.

'ಇದು 17 ತ್ಯಾಗಿಗಳು ಮತದಾರರಿಗೋಸ್ಕರ ಹಾಡಿದ ಚರಮಗೀತೆ ಕಯ್ಯಾ. ಎಲೆಕ್ಷನ್ನಿಗೆ ಮೊದಲೇ ಕುಣಿತ ಪ್ರಾಕ್ಟಿಸ್ ಮಾಡಿಕ್ಯತಾವ್ರೆ' ಅಂತಂದರು.

'ಅದೇನ್ಸಾ ಯಾವುದನ್ನ ಎಲ್ಲಿಗೋ ತಾರಾಕಿ ಲಡ್ಡುಲಸೆ ಅಂತ ಕತೆ ಕಟ್ಟಿತೀರ!'

'ನೋಡ್ಲಾ, ಮೊದಲು ಜಲಲ ಜಲಧಾರೆ ಸುರುವಾತಲ್ಲಾ ಜನಕ್ಕೇನಾದ್ರೂ ಪಾಯ್ದೆ ಆಯ್ತಾ? ಇಲ್ಲ! ಆಮೇಲೆ ಪಾದಯಾತ್ರೆ, ಉತ್ಸವ ನಡೆದವಲ್ಲಾ ಜನ ಊರಿಗೋಗಕೆ ದಾರಿ ಇಲ್ದೆ ದಿಕ್ಕಾಪಾಲಾದ್ರು ಅಷ್ಟೇಯ? ಮಾಮೇರಿ ಮಳೆ ಬಿದ್ದು ಜಲಾಘಾತ ಆಯ್ತಲ್ಲಾ. ಜನದ ಕಷ್ಟ ಕೇಳಕೆ ಮಂತ್ರಿಗಳು ಒಂದು ದಿನ ಬಂದು ಕಣ್ಣೀರಾಕಿ ಹೋದ್ರು. 'ಸಾ, ನಮ್ಮ ಕಷ್ಟ ನೋಡಿ!' ಅಂದ್ರೆ 'ದಿನಾ ಸಾಯೋರ್ಗೆ ಅಳೋರ್ಯಾರು ತಡೀರ್ಲಾ' ಅಂದೋರೆ ಸ್ಪಂದನದಲ್ಲಿ 'ಚೀಲ ನಿಮ್ದು ಅಕ್ಕಿ ನಮ್ದು, ಲಾಂಗು ಡ್ರೈವು ಹೋಗುಮಾ 150 ಸೀಟು ಗೆಲ್ಲುಮಾ...' ಅಂತ ರೇಡಿಯಾಯ್ತಾವ್ರೆ' ಅಂದರು.

'ಹ್ಞೂಂ ಕಪ್ಪಾ, ಜನ ನೆಗೆದುಬಿದ್ದು ಸಾಯಲಿ ಅಧಿಕಾರವೇ ಮುಖ್ಯ. ಎಲ್ಲ ಪಕ್ಷದವ್ರೂ ಸೇರಿ ಊರು, ಸೈಟು, ಕೆರೆ ನುಂಗಿ, ರಾಜಕಾಲುವೆ ಜರುಗ್ಸಿದ್ರೂ ಇನ್ನೂ ಹಸಿವು ತೀರಿಲ್ಲ ಕನ್ರೋ' ಅಂತು ಯಂಟಪ್ಪಣ್ಣ.

'ಹ್ಞೂಂಕನೇಳಿ, ಒತ್ತುವರಿ ಮಾಡಿದ ಬಡವ್ರಿಗೆ ಬುಲ್ಡೋಜರು, ಉಳ್ಳೋರಿಗೆ ನೋಟಿಸು. ಮನ್ನೆ ಹೆಡ್‌ಮೇಷ್ಟ್ರು ಇನ್‌ಸ್ಪೆಕ್ಟನ್ನಿಗೆ ಬಂದಿದ್ದೋರು 'ಚೆನ್ನಾಗಿ ಓದಿಕ್ಯಂಡು 100ಕ್ಕೆ 150 ಮಾರ್ಕ್ಸ್ ತಗಬಕು' ಅಂತ ಹೇಳಿ ಹೋಗ್ಯವುರಂತೆ. ಅ ಸ್ಪಂದನದ ಪ್ರಭಾವ ಇನ್ನೂ ಇಳಿದಿಲ್ಲ' ಅಂದರು ತುರೇಮಣೆ.

ಸಂಗತ

ಪಿಎಚ್‌.ಡಿ. ಎಂಬ 'ಕದ್ದ ಮಾಲು!'

ತಮ್ಮ ಆಲೋಚನೆಗಳನ್ನು ಅಕ್ಷರರೂಪಕ್ಕೆ ಇಳಿಸುವ ಕೌಶಲ ಪಿಎಚ್‌.ಡಿ. ಹಂತದ ವಿದ್ಯಾರ್ಥಿಗಳಲ್ಲೂ ಏಕೆ ಮೈಗೂಡಿಲ್ಲ ಎಂಬುದು ಚಿಂತನಾರ್ಹ ಸಂಗತಿಯಾಗಿದೆ

• ಎಚ್.ಕೆ.ಶರತ್

ಸಂಶೋಧನಾ ಪ್ರಬಂಧದ ಶೇಕಡ 25ಕ್ಕಿಂತ ಹೆಚ್ಚು ಭಾಗ ಇತರರು ಬರೆದ ಪುಸ್ತಕಗಳು, ಸಂಶೋಧನಾ ಲೇಖನಗಳು, ಪ್ರಬಂಧಗಳು ಮತ್ತು ಇತರ ಮೂಲಗಳಲ್ಲಿರುವ ಪಠ್ಯದೊಂದಿಗೆ ಸಾಮ್ಯತೆ ಹೊಂದಿರುವ ಕಾರಣಕ್ಕೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಈ ವರ್ಷ ಪಿಎಚ್.ಡಿ. ಪದವಿಗಾಗಿ ಸಲ್ಲಿಕೆಯಾದ 60 ಪ್ರಬಂಧಗಳನ್ನು ತಿರಸ್ಕರಿಸಿರುವುದು ಶೈಕ್ಷಣಿಕ ವಲಯದಲ್ಲಿ ಸಣ್ಣ ಚರ್ಚೆ ಹುಟ್ಟುಹಾಕಿದೆ.

'ಶೇ 25ಕ್ಕಿಂತ ಕಡಿಮೆ ಭಾಗ ಕದ್ದರೆ ಸಮಸ್ಯೆ ಇಲ್ಲವೇ' ಅಂತೆಲ್ಲ ಕೆಲವರು ಕುಹಕವಾಡುತ್ತಿದ್ದಾರೆ. ತಂತ್ರಾಂಶ ಬಳಸಿ ಸಾಮ್ಯತೆಯ ಪ್ರಮಾಣ ಕಂಡುಹಿಡಿಯುವ ಪ್ರಕ್ರಿಯೆಯು ಒಂದು ತಾಂತ್ರಿಕ ಕಸರತ್ತೇ ವಿನಾ ಸಂಶೋಧನೆ ಮತ್ತು ಸಂಶೋಧನಾ ಪ್ರಬಂಧದ ಗುಣಮಟ್ಟದ ಸುಧಾರಣೆಗೆ ಇದು ಹೆಚ್ಚೇನೂ ಕೊಡುಗೆ ನೀಡಲಾರದು ಎಂಬುದು ಇಲ್ಲಿ ಗಮನಿಸಬೇಕಿರುವ ಅಂಶ. ಸಾಮ್ಯತೆ ಪ್ರಮಾಣದ ಆಧಾರದಲ್ಲಿ ಪ್ರಬಂಧಗಳನ್ನು ಪಿಎಚ್.ಡಿ. ಪದವಿಗೆ ಸ್ವೀಕರಿಸಬೇಕೊ ಅಥವಾ ತಿರಸ್ಕರಿಸಬೇಕೊ ಎಂದು ನಿರ್ಧರಿಸುವುದು ಗುಣಮಟ್ಟ ಸುಧಾರಣೆ ದಿಸೆಯಲ್ಲಿ ಇಡಬಹುದಾದ ಒಂದು ಸಣ್ಣ ಹೆಜ್ಜೆಯಷ್ಟೆ ಎನ್ನಲು ಒಂದಿಷ್ಟು ಸಕಾರಣಗಳಿವೆ.

ಶೈಕ್ಷಣಿಕ ವಲಯ ಚಿಂತಿಸಬೇಕಿರುವುದು ಸಾಮ್ಯತೆ ಪ್ರಮಾಣ ತಗ್ಗಿಸುವುದು ಹೇಗೆ ಎಂಬುದರ ಕುರಿತಷ್ಟೇ ಅಲ್ಲ. ತಮ್ಮ ಆಲೋಚನೆಗಳನ್ನು ಅಕ್ಷರ ರೂಪಕ್ಕೆ ಇಳಿಸಿ, ಬರಹಗಳ ಮೂಲಕ ಸಂವಹನ ನಡೆಸುವ ಕೌಶಲವು ಪಿಎಚ್.ಡಿ. ಹಂತದ ವಿದ್ಯಾರ್ಥಿಗಳಲ್ಲೂ ಏಕೆ ಮೈಗೂಡಿಲ್ಲ ಎಂಬುದು ನಮ್ಮನ್ನು ಚಿಂತೆಗೀಡುಮಾಡಬೇಕಲ್ಲವೇ? ಈ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಲು ಇಂತಹ ನಿದರ್ಶನಗಳಾದರೂ ಪ್ರಚೋದಿಸಬೇಕಲ್ಲವೇ?

ಸಿದ್ಧ ಮಾದರಿಯ ಪ್ರಶ್ನೆ- ಉತ್ತರಗಳ ಸರಪಳಿಯಲ್ಲಿ ಸಿಲುಕಿ ನಲುಗುತ್ತಿರುವ ನಮ್ಮ ಶಿಕ್ಷಣ ವ್ಯವಸ್ಥೆಯು ನಿರ್ದಿಷ್ಟ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎಂಬುದನ್ನು ಹೇಳಿಕೊಡಲು ಹೆಚ್ಚು ಮುತುವರ್ಜಿ ತೋರುತ್ತಿದೆ. ಯಾವುದೇ ಪ್ರಶ್ನೆಯನ್ನು ತನ್ನದೇ ದೃಷ್ಟಿಕೋನದಿಂದ ವಿಶ್ಲೇಷಿಸಿ, ತನ್ನ ತಿಳಿವಳಿಕೆಗೆ ಅನುಗುಣವಾಗಿ ಸ್ವಂತ ಉತ್ತರ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸುವುದೇ ಅಪರೂಪವಾಗಿದೆ. ವಿದ್ಯಾರ್ಥಿ ಜೀವನದುದ್ದಕ್ಕೂ ನೆನಪಿನ ಶಕ್ತಿಯನ್ನೇ ಬಂಡವಾಳವನ್ನಾಗಿಸಿಕೊಂಡು, ಪರೀಕ್ಷೆಗಳಲ್ಲಿ ನೋಟ್ಸ್ ಅಥವಾ ಯಾವುದಾದರೂ ಪುಸ್ತಕದಲ್ಲಿನ ಸಾಲುಗಳನ್ನು ಯಥಾವತ್ತಾಗಿ ಬರೆದು ಉತ್ತಮ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳೂ ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಹೀಗೆ ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ಉತ್ತಮ ಫಲಿತಾಂಶ ಪಡೆದುಕೊಂಡೇ ಬಂದ ಎಷ್ಟೋ ವಿದ್ಯಾರ್ಥಿಗಳು ಕೂಡ, ಸ್ವತಂತ್ರವಾಗಿ ವಿಶ್ಲೇಷಿಸಿ ಬರೆಯುವ ಸಂದರ್ಭ ಎದುರಾದಾಗ ತಿಣುಕಾಡುವುದಿದೆ.

ಅಂಕಗಳು, ರ್‍ಯಾಂಕುಗಳ ಹಿಂದೆ ಬಿದ್ದಿರುವ ಶೈಕ್ಷಣಿಕ ವ್ಯವಸ್ಥೆಗೆ ವಿದ್ಯಾರ್ಥಿಗಳಲ್ಲಿ ಬರೆಯುವ ಕೌಶಲ ಮೈಗೂಡಿಸುವುದು ಆದ್ಯತೆಯಾಗಿದ್ದರೆ, ಸಂಶೋಧನಾ ಪ್ರಬಂಧ ಬರೆಯುವ ಹಂತದಲ್ಲಿ ಪರದಾಡುವ ಪ್ರಮೇಯ ಉದ್ಭವಿಸುತ್ತಿರಲಿಲ್ಲ.

ಪದವಿ- ಸ್ನಾತಕೋತ್ತರ ಪದವಿ ಹಂತದ ಕಲಿಕೆಯ ವೇಳೆಯಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಬೇಕಿರುವ ಸೆಮಿನಾರ್ ರಿಪೋರ್ಟ್, ಪ್ರಾಜೆಕ್ಟ್ ರಿಪೋರ್ಟ್‌ಗಳು ಕೂಡ ಬಹುತೇಕ ಸಂದರ್ಭಗಳಲ್ಲಿ ಕಾಪಿ-ಪೇಸ್ಟ್ ಕೌಶಲಕ್ಕಷ್ಟೇ ಕನ್ನಡಿ ಹಿಡಿಯುವಂತೆ ಇರುತ್ತವೆ. ತಾವು ಸಿದ್ಧಪಡಿಸುವ ವರದಿ ಅಥವಾ ಪ್ರಬಂಧಗಳು ಸಾಮ್ಯತೆಯ ಪ್ರಮಾಣವನ್ನು ಪತ್ತೆ ಹಚ್ಚುವ ತಂತ್ರಾಂಶಗಳ ಮೂಲಕ ಹಾದು ಹೋಗುವುದಾದರೆ, ಹಲವು ವಿದ್ಯಾರ್ಥಿಗಳು ಸಾಮ್ಯತೆಯ ಪ್ರಮಾಣ ತಗ್ಗಿಸಲೆಂದೇ ಇರುವ ತಾಂತ್ರಿಕ ಪರಿಕರಗಳ ಮೊರೆ ಹೋಗುತ್ತಾರೆ. ಕೆಲ ತಂತ್ರಾಂಶಗಳಿಗೆ ಪಠ್ಯ ಹಾಕಿದರೆ, ಅವು ಪದಗಳನ್ನು ಅದಲು ಬದಲು ಮಾಡಿ ಹೊಸ ವಾಕ್ಯಗಳನ್ನು ರಚಿಸಿ ನಮ್ಮೆದುರು ಇಡುತ್ತವೆ. ಇಂತಹ ತಾಂತ್ರಿಕ ಹತಾರಗಳ ನೆರವಿನಿಂದ ಸಂಶೋಧನಾ ಪ್ರಬಂಧದಲ್ಲಿನ ಸಾಮ್ಯತೆ ಪ್ರಮಾಣ ತಗ್ಗಿಸುವವರೂ ಇದ್ದಾರೆ. ಇಂತಹ ತಂತ್ರಗಳ ಮೊರೆ ಹೋಗದ ಕಾರಣಕ್ಕೂ ಕೆಲವರ ಪ್ರಬಂಧಗಳಲ್ಲಿನ ಸಾಮ್ಯತಾ ಪ್ರಮಾಣ ಹೆಚ್ಚಿರಬಹುದಾದ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.



ನೌಕರಿ, ಬಡ್ತಿ, ವೇತನ ಹೆಚ್ಚಳದಂತಹ ಬಾಹ್ಯ ಒತ್ತಡಗಳ ಕಾರಣಕ್ಕೆ ಪಿಎಚ್.ಡಿ. ಪದವಿ ಪಡೆಯಲೇಬೇಕಿರುವ ಅನಿವಾರ್ಯಕ್ಕೆ ಸಿಲುಕಿರುವ ಕೆಲವರು, ಈ ಪ್ರಕ್ರಿಯೆಯ ಭಾಗವಾಗಿ ಮಾಡಲೇಬೇಕಿರುವ ಕೆಲಸಗಳನ್ನು ಹೊರಗುತ್ತಿಗೆ ನೀಡುವುದೂ ಉಂಟು. ನಿಗದಿಪಡಿಸಿದಷ್ಟು ಹಣ ಪಾವತಿಸಿದರೆ ಸಂಶೋಧನಾ ಲೇಖನ, ಪ್ರಬಂಧ ಬರೆದುಕೊಡುವ, ಪೇಟೆಂಟುಗಳಿಗೆ ಹೆಸರು ಸೇರಿಸುವ ಖಾಸಗಿ ಕನ್ಸಲ್ಟೆನ್ಸಿಗಳು ಇತ್ತೀಚೆಗೆ ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ಪಿಎಚ್.ಡಿಗೆ ಪ್ರವೇಶ ಪಡೆದವರ ಸಂಪರ್ಕ ವಿವರಗಳನ್ನು ಹೇಗೋ ದಕ್ಕಿಸಿಕೊಳ್ಳುವ ರಿಸರ್ಚ್ ಕನ್ಸಲ್ಟೆನ್ಸಿಗಳು ಪದೇಪದೇ ಕರೆ ಮಾಡಿ, 'ನಿಮಗೆ ಮಾರ್ಗದರ್ಶನದ ಅಗತ್ಯವಿದೆಯೇ' ಎಂದು ವಿಚಾರಿಸುವುದೂ ಇದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನೂ ಒಳಗೊಂಡಂತೆ ಹಲವು ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ, ಸಂಶೋಧನಾ ಗುಣಮಟ್ಟ ಕಾಯ್ದುಕೊಳ್ಳುವ ಸವಾಲನ್ನು ಮೆಟ್ಟಿ ನಿಲ್ಲುವುದಕ್ಕೆ ಸುಲಭದ ದಾರಿಗಳಿಲ್ಲ. ಗುಣಮಟ್ಟದ ಸಂಶೋಧನೆ ಕೈಗೊಳ್ಳಲು ಅಗತ್ಯವಿರುವ ಮೂಲಸೌಕರ್ಯ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದೂ ಆದ್ಯತೆಯಾಗಬೇಕಿದೆ.

ವಾಚಕರ ವಾಣಿ

ಸರ್ಕಾರಿ ವಾಹನ: ವಾಮಮಾರ್ಗದ ಬಳಕೆ ಬೇಡ

ಸರ್ಕಾರಿ ವಾಹನಗಳ ದುರುಪಯೋಗಕ್ಕೆ ಕಡಿವಾಣ ಹಾಕಬೇಕು ಎಂದು ಕೆಎಸ್‌ಟಿಡಿಸಿ ಎಂಪ್ಲಾಯೀಸ್ ಯೂನಿಯನ್ ಆಗ್ರಹಿಸಿರುವುದು (ಪ್ರ.ವಾ., ಸೆ. 12) ಸ್ವಾಗತಾರ್ಹ. ವಾರಾಂತ್ಯಗಳಲ್ಲಿ ನಾವು ಪುಣ್ಯಕ್ಷೇತ್ರಗಳಿಗೆ ಹೋದಾಗ ಅಲ್ಲಿ ಸರ್ಕಾರಿ ವಾಹನಗಳನ್ನು ಕಾಣುತ್ತೇವೆ. ಶನಿವಾರ ಹಾಗೂ ಭಾನುವಾರ ರಜಾದಿನಗಳಾಗಿದ್ದರೂ ಅಧಿಕಾರಿಗಳು ಸರ್ಕಾರಿ ವಾಹನಗಳನ್ನು ಉಪಯೋಗಿಸುತ್ತಾರೆ ಎಂದರೆ ಏನೆನ್ನಬೇಕು? ಇದರಿಂದ ಸರ್ಕಾರದ ಹಣ ಪೋಲಾಗುವುದು ಅರ್ಥವಾಗುತ್ತದೆ.

ಅಲ್ಲದೆ ಸರ್ಕಾರಿ ಅಧಿಕಾರಿಗಳಿಗೆ ಪ್ರವಾಸ ಭತ್ಯೆಯಂತಹ ಸೌಲಭ್ಯಗಳನ್ನು ಕೊಟ್ಟಿದ್ದರೂ ಅವರು ಈ ರೀತಿ ವಾಮಮಾರ್ಗದಲ್ಲಿ ಸರ್ಕಾರದ ಅರ್ಥಾತ್ ಸಾರ್ವಜನಿಕರ ಹಣವನ್ನು ಪೋಲು ಮಾಡುವುದು ಸರಿಯೇ?

ಬಾಲಕೃಷ್ಣ ಎಂ.ಆರ್., ಬೆಂಗಳೂರು

ರಾಷ್ಟ್ರಪತಿ ಹುದ್ದೆಯ ಅಗತ್ಯ: ಚಿಂತನೆಗೆ ಸಕಾಲ

ರಾಣಿ ಎಲಿಜಬೆತ್ ಮರಣದ ಪ್ರಯುಕ್ತ ಭಾರತದಲ್ಲೂ ಸರ್ಕಾರಿ ಶೋಕ ಆಚರಿಸಲಾಯಿತು. ಅಲ್ಲಿ ರಾಜವಂಶ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ನಡುವಣ ಸಂಬಂಧ ಹೀಗೆಯೇ ಮುಂದುವರಿಯಬೇಕೆ ಎಂಬ ಚರ್ಚೆ ಒಂದು ವಾರದ ನಂತರ ಆರಂಭವಾಗಬಹುದು. ಇಲ್ಲಿಯೂ ಅಂತಹ ವಿಷಯವೊಂದಿದೆ. ಕಾಮನ್‌ವೆಲ್ತ್ ದೇಶಗಳಲ್ಲೊಂದಾದ ಭಾರತದಲ್ಲಿ ಪ್ರಧಾನಿಯನ್ನು ರಾಷ್ಟ್ರಪತಿ ನೇಮಕ ಮಾಡುತ್ತಾರೆ. ಬ್ರಿಟನ್ನಿನ ರಾಣಿ ನಿರ್ವಹಿಸಿದ ಕೊನೆಯ ಮುಖ್ಯ ಕರ್ತವ್ಯವೂ ಹೊಸ ಪ್ರಧಾನಿಯನ್ನು ನೇಮಿಸಿದ್ದು.

ರಾಜಪ್ರಭುತ್ವವನ್ನು ಉಳಿಸಿಕೊಂಡು ಹೋಗಲು ವಾರ್ಷಿಕವಾಗಿ ಎಷ್ಟು ಖರ್ಚು ತಗಲುತ್ತದೆ ಎಂಬ ಅಂದಾಜುಗಳು ಹೊರಬರುತ್ತಿವೆ. ವೇತನಕ್ಕೆ ಗ್ರ್ಯಾಂಟ್, ಖಾಸಗಿ ಖರ್ಚುಗಳಿಗಾಗಿ ಪ್ರೈವಿ ಪರ್ಸ್ ಇತ್ಯಾದಿ ನೀಡಲಾಗುತ್ತಿದೆ. ಭಾರತದಲ್ಲಿನ ರಾಷ್ಟ್ರಪತಿ ಹುದ್ದೆ ಕೆಲಮಟ್ಟಿಗೆ ಬ್ರಿಟನ್ನಿನ ರಾಜ, ರಾಣಿಯ ಪದಗಳನ್ನು ಹೋಲುತ್ತದೆ. ಆನುವಂಶಿಕ ಅಲ್ಲ ಹಾಗೂ ಸಂಪತ್ತು, ಆದಾಯದ ಮೂಲಗಳಿಲ್ಲ ಎಂಬುದು ಪ್ರಮುಖ ವ್ಯತ್ಯಾಸ. ಇಲ್ಲಿನ ಉಪರಾಷ್ಟ್ರಪತಿಗೆ ರಾಜ್ಯಸಭೆಯನ್ನು ನಡೆಸುವ ಜವಾಬ್ದಾರಿಯಾದರೂ ಇರುತ್ತದೆ, ಆದರೆ ರಾಷ್ಟ್ರಪತಿಗೆ ಕಾಲಬದ್ಧ ಕೆಲಸವೇ ಇಲ್ಲ. ಬಹುಪಾಲು ಅಲಂಕಾರಿಕವಾದ ಈ ಹುದ್ದೆಗೆ ಗಮನಾರ್ಹ ಮೊತ್ತ ವ್ಯಯವಾಗುತ್ತಿದೆ. 'ರಾಜ' ಪದವನ್ನು ತೆಗೆಯಬೇಕು ಎನ್ನುವವರು ಇತ್ತಲೂ ಗಮನಹರಿಸಲಿ.

ರಾಷ್ಟ್ರಪತಿಯ ಆಯ್ಕೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಧಾನಿಯ ಪಾತ್ರ ಮುಖ್ಯವಾಗಿರುವುದು ಹಾಗೂ ಕಾರ್ಯಶೈಲಿಯಲ್ಲಿ ಅಧ್ಯಕ್ಷೀಯತೆ ಕಾಣುತ್ತಿರುವುದು ಗೊತ್ತಿರುವ ಸಂಗತಿಯೇ. ಯು.ಕೆ. ನೈಜ ರಿಪಬ್ಲಿಕ್ ಆಗಿ ಇದ್ದುದು ಹನ್ನೊಂದು ವರ್ಷ ಮಾತ್ರ (ಕ್ರಿ.ಶ. 1649ರಿಂದ 1660). ಭಾರತ 1950ರಿಂದ ರಿಪಬ್ಲಿಕ್ ಆಗಿದೆ. ಈಗ ಬದಲಾವಣೆಗಳ ಬಗೆಗೆ ನಿರ್ಧರಿಸಲು ಸಕಾಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಹಾಲಿನ ದರ ಏರಿಕೆ ಪ್ರಸ್ತಾವಕ್ಕೆ ಅನುಮತಿ ಬೇಡ

ಪ್ರತೀ ಲೀಟರ್ ಹಾಲಿನ ದರವನ್ನು ₹ 3ರಷ್ಟು ಹೆಚ್ಚಿಸಲು ಸರ್ಕಾರಕ್ಕೆ ಕೆಎಂಎಫ್ ಪ್ರಸ್ತಾವ ಸಲ್ಲಿಸಿರುವುದು ಸರಿಯಲ್ಲ. ಬೆಲೆ ಏರಿಕೆಯ ಈ ಕಷ್ಟ ಕಾಲದಲ್ಲಿ ಹಾಲಿನ ದರದಲ್ಲೂ ಹೆಚ್ಚಳವಾದರೆ ಜನಸಾಮಾನ್ಯರ ಬದುಕು ಇನ್ನಷ್ಟು ದುಸ್ತರವಾಗುತ್ತದೆ. ದರ ಹೆಚ್ಚಿಸಲು ಸರ್ಕಾರ ಅನುಮತಿ ನೀಡಬಾರದು. ರೈತರ ಅನುಕೂಲಕ್ಕಾಗಿ ದರ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಕೆಎಂಎಫ್ ಹೇಳುತ್ತಿರುವುದು ನೆಪ ಅಷ್ಟೇ. ಹೆಚ್ಚಳ ಆಗುವ ದರದ ಅಷ್ಟೂ ಮೊತ್ತ ರೈತರಿಗೆ ತಲುಪುವುದಿಲ್ಲ.

ವಿಜಯಕುಮಾರ್ ಎಚ್.ಕೆ., ರಾಯಚೂರು

ದೋಸೆ ಚಪ್ಪರಿಸುವ ಮೊದಲು...

'ದೋಸೆ ಚಪ್ಪರಿಸುವುದರಲ್ಲಿ ತಪ್ಪೇನಿದೆ?' ಎಂದು ಬಿ.ಎಸ್.ಭಗವಾನ್ ಅವರು ಕೇಳಿರುವುದು (ವಾ.ವಾ., ಸೆ. 12) ಹಾಸ್ಯಾಸ್ಪದವಷ್ಟೇ ಅಲ್ಲ ತೀರಾ ಬಾಲಿಶವಾಗಿಯೂ ಇದೆ. ತಪ್ಪಿರುವುದು ತಿಂಡಿ ಸವಿಯುವುದರಲ್ಲಿ ಅಲ್ಲ, ಬದಲಿಗೆ ಸಮಯ ಸಂದರ್ಭ ಎಂಥದ್ದು ಎಂಬುದರಲ್ಲಿ. ರಾಜ್ಯವು ಪ್ರವಾಹದಲ್ಲಿ ಸಿಲುಕಿ ಪರದಾಡುತ್ತಿರುವಾಗ, ಕಾಳಜಿ ಕೇಂದ್ರಗಳಲ್ಲಿ ಊಟಕ್ಕೂ ನೂಕುನುಗ್ಗಲಿರುವಾಗ ಒಬ್ಬ ಜನಪ್ರತಿನಿಧಿ ಬೆಣ್ಣೆ ಮಸಾಲೆದೋಸೆ ಚಪ್ಪರಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಸಂದರ್ಭವೇ ಇದನ್ನು ಅಮಾನವೀಯ ನಡೆ ಎಂದು ಹೇಳುತ್ತದೆ. ತೀರಾ ತಡೆಯಲಾಗದೆ ಬೇರೆಯವರ ಒತ್ತಾಯಕ್ಕೋ ಮತ್ತೊಂದಕ್ಕೋ ತಿಂದು ಚಪ್ಪರಿಸಲೇಬೇಕಾದ ಸಂದರ್ಭ ಬಂದರೆ ಕನಿಷ್ಠ ಆ ವಿಡಿಯೊವನ್ನು ಕಷ್ಟದಲ್ಲಿರುವವರಿಗೆ ತೋರಿಸದೆಯೂ ಇರಬಹುದಿತ್ತಲ್ಲವೇ?

ರವಿಕಿರಣ್ ಶೇಖರ್, ಬೆಂಗಳೂರು

ತಪ್ಪು ಸರಿಪಡಿಸುವ ಹೆಸರಲ್ಲಿ ಗದಾಪ್ರಹಾರ

ಪತ್ರಿಕೆಯಲ್ಲಿನ (ಪ್ರ.ವಾ., ಸೆ. 12) ಎರಡು ಪ್ರಮುಖ ಸಂಗತಿಗಳು ಮನ ಕಲಕಿದವು. ಇಲಾಖೆಗಳೇ ಕೆರೆ– ಕಾಲುವೆ ಒತ್ತುವರಿ ಮಾಡಿದ ಸಚಿತ್ರ ಮಾಹಿತಿ ಒಂದು ಪುಟದಲ್ಲಿದ್ದರೆ, ಪ್ರಭಾವಿಗಳ ಜಾಗ ಉಳಿಸಲು ಬಡವರ ಮನೆ ತೆರವು ಮಾಡಹೊರಟ ಬಿಬಿಎಂಪಿಯ ಕ್ರಮದ ಕುರಿತು ಮತ್ತೊಂದು ಪುಟದಲ್ಲಿದೆ. ನೆಲದ ಕಾನೂನು ಎಲ್ಲರಿಗೂ ಒಂದೇ ಆಗಬೇಕು. ಆದರೆ ಯಾವಾಗಲೂ ಅದು ಉಳ್ಳವರ ಪರವಾಗುತ್ತಿದೆ. ಇತ್ತೀಚಿನ ಮಳೆ ಅವಾಂತರದಿಂದ ಬೆಂಗಳೂರು ಪೂರ್ವ ವಲಯ ಅಕ್ಷರಶಃ ಕಂಗೆಟ್ಟಿದೆ. ಹಿಂದೆ ಆದ ತಪ್ಪುಗಳನ್ನು ಸರಿಪಡಿಸುವ ಹೆಸರಿನಲ್ಲಿ ಈಗ ಮತ್ತೆ ಬಡವರ ಮೇಲೆ ಗದಾಪ್ರಹಾರವಾಗಲಿದೆ. ಬಿಬಿಎಂಪಿ ಅಥವಾ ಅದರಂಥದ್ದೇ ಸಂಸ್ಥೆಗಳು ಅನುಮತಿ ನೀಡಿದ ನಂತರವೇ ಮನೆ ಕಟ್ಟಿ ಕಂದಾಯವನ್ನೂ ಕಟ್ಟುತ್ತಿದ್ದೇವೆ ಎನ್ನುವ ನಿವಾಸಿಗಳ ಗೋಳಿಗೆ ಯಾರು ಉತ್ತರ ಹೇಳಬೇಕು?

ರಾಜಕಾಲುವೆ ಒತ್ತುವರಿ ತೆರವು ಮಾಡದೇ ಬೆಂಗಳೂರು ಉಳಿಯಲಾರದು. ಒತ್ತುವರಿ ಮಾಹಿತಿ ಇರದೆ ಮನೆ ಕಟ್ಟಿದ ಜನರ ಬವಣೆಯೂ ಸಕಾರಣವೇ? ಹಾಗಾದರೆ ದೋಷ ಸರಿಪಡಿಸುವುದು ಹೇಗೆ? ಇಲಾಖೆಗಳೇ ಮಾಡಿದ ಒತ್ತುವರಿಗೆ ಏನು ಪರಿಹಾರ? ಅವೈಜ್ಞಾನಿಕ, ಅವೈಚಾರಿಕತೆಗೆ ಇದಕ್ಕಿಂತ ಕನ್ನಡಿ ಬೇಕೆ?

ವಿಮಲಾ ಕೆ.ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋರ್ಟ್ ಕಟಕಟೆಯಲ್ಲಿ 'ಜ್ಞಾನವಾಪಿ'

ಕಾಶಿಯಲ್ಲಿರುವ ಜ್ಞಾನವಾಪಿ ಮಸೀದಿಯಲ್ಲಿ ಇದೆ ಎಂದು ಹೇಳಲಾಗುವ ಶ್ರೀಶೃಂಗಾರ ಗೌರಿ ದೇಗುಲದಲ್ಲಿ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿಯು ವಿಚಾರಣೆಗೆ ಯೋಗ್ಯವಾಗಿದೆ ಎಂದು ಜಿಲ್ಲಾ ನ್ಯಾಯಾಲಯ ತೀರ್ಪು ಕೊಟ್ಟಿದೆ. ದೇಶದ ಗಮನವು ಮತ್ತೆ ದೇಗುಲ–ಮಸೀದಿ ವಿವಾದಗಳತ್ತ ಹರಿಯಲು ಇದು ಕಾರಣವಾಗಿದೆ

ರಾಜಕೀಯ ಪರಿಣಾಮ

ಭಾರತದ ಅತಿ ದೊಡ್ಡ ಧಾರ್ಮಿಕ ವಿವಾದವಾಗಿದ್ದ ರಾಮಜನ್ಮಭೂಮಿ–ಬಾಬರಿ ಮಸೀದಿ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥಗೊಂಡಿದೆ. 'ರಾಮಮಂದಿರ ನಿರ್ಮಾಣವು 2023ರ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ. 2024ರ ಜನವರಿಯಲ್ಲಿ ಮಕರ ಸಂಕ್ರಾಂತಿ ದಿನದಂದು ಶ್ರೀರಾಮ ಮೂರ್ತಿಯನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗುವುದು' ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹೇಳಿದ್ದಾರೆ. ಲೋಕಸಭೆಗೆ 2024ರ ಮೇಯಲ್ಲಿ ಚುನಾವಣೆ ನಡೆಯುವ ನಿರೀಕ್ಷೆ ಇದೆ. ರಾಮ ಜನ್ಮಭೂಮಿ ವಿವಾದವು ರಾಜಕೀಯವಾಗಿ ಬೆಳೆಯಲು ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ನೆರವು ನೀಡಿದೆ. ಜ್ಞಾನವಾಪಿ ಮಸೀದಿ ವಿವಾದವು ಕೂಡ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ನೆರವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಜ್ಞಾನವಾಪಿ ಮಸೀದಿಯು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿನಿಧಿಸುತ್ತಿರುವ ವಾರಾಣಸಿ ಲೋಕಸಭಾ ಕ್ಷೇತ್ರದಲ್ಲಿಯೇ ಇದೆ.



ಕಾಶಿ ವಿಶ್ವೇಶ್ವರ–ಜ್ಞಾನವಾಪಿ ಮಸೀದಿ ಸಂಕೀರ್ಣ

ಪ್ರಜಾವಾಣಿ ಗ್ರಾಫಿಕ್ಸ್| ಮಂಜುನಾಥ ಹುಲಕೊಪ್ಪದ

1991 ಮೊಘಲ್ ದೊರೆ ಔರಂಗಜೇಬನ ಆದೇಶದ ಮೇರೆಗೆ 1669ರಲ್ಲಿ ದೇವಸ್ಥಾನವನ್ನು ಧ್ವಂಸ ಮಾಡಿ, ಆ ಸ್ಥಳದಲ್ಲಿ ಜ್ಞಾನವಾಪಿ ಮಸೀದಿಯನ್ನು ನಿರ್ಮಿಸಲಾಗಿದೆ ಎಂದು ಕಾಶಿ ವಿಶ್ವೇಶ್ವರ ದೇವಸ್ಥಾನದ ಭಕ್ತರು ಆರೋಪಿಸಿದ್ದರು. ಎರಡು ಸಾವಿರ ವರ್ಷಗಳ ಹಿಂದೆಯೇ ಹಿಂದೂ ದೊರೆ ವಿಕ್ರಮಾದಿತ್ಯನು ದೇವಸ್ಥಾನ ನಿರ್ಮಿಸಿದ್ದನು ಎಂದು ಪ್ರತಿಪಾದಿಸಿದ್ದರು. ವಾರಾಣಸಿ ಕೋರ್ಟ್‌ನಲ್ಲಿ ಸ್ವಯಂಭೂ ಜ್ಯೋತಿರ್ಲಿಂಗ ಭಗವಾನ್ ವಿಶ್ವೇಶ್ವರ ಹೆಸರಿನಲ್ಲಿ ಸಲ್ಲಿಸಲಾದ ಮೊದಲ ಅರ್ಜಿಯಲ್ಲಿ ಕೆಲವು ಬೇಡಿಕೆಗಳನ್ನು ಇಡಲಾಗಿತ್ತು. ಇಡೀ ಜ್ಞಾನವಾಪಿ ಸಂಕೀರ್ಣವನ್ನು ಕಾಶಿ ವಿಶ್ವನಾಥ ದೇವಸ್ಥಾನದ ಭಾಗ ಎಂದು ಘೋಷಿಸಬೇಕು ಎಂದು ಅರ್ಜಿಯಲ್ಲಿ ಆಗ್ರಹಿಸಲಾಗಿತ್ತು.

ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಪೂಜೆಗೆ ಅವಕಾಶ ನೀಡಬೇಕು ಹಾಗೂ ದೇವಸ್ಥಾನ ಜೀರ್ಣೋದ್ಧಾರ ಮಾಡಲು ಹಾಗೂ ಮರು ನಿರ್ಮಾಣ ಮಾಡಲು ಅವಕಾಶ ನೀಡಬೇಕು ಎಂದೂ ಭಕ್ತರು ಆಗ್ರಹಿಸಿದ್ದರು. ಹಳೆಯ ವಿಶ್ವೇಶ್ವರ ದೇವಸ್ಥಾನದ ಅವಶೇಷಗಳ ಮೇಲೆ ಮಸೀದಿ ನಿರ್ಮಾಣವಾಗಿರುವ ಕಾರಣ, 1991ರ ಪೂಜಾಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯು ಇದಕ್ಕೆ ಅನ್ವಯವಾಗುವುದಿಲ್ಲ ಎಂದೂ ಪ್ರತಿಪಾದಿಸಲಾಗಿತ್ತು. ಇಲ್ಲಿಂದ ಜ್ಞಾನವಾಪಿ ಮಸೀದಿ ವಿಚಾರ ಮುನ್ನೆಲೆಗೆ ಬಂದಿತು.

1998 1991ರ ಪೂಜಾಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯ ಆಧಾರದ ಮೇಲೆ ವಿಶ್ವೇಶ್ವರ ದೇವಸ್ಥಾನದ ಭಕ್ತರ ಅರ್ಜಿಯನ್ನು ವಜಾಗೊಳಿಸಬೇಕು ಹಾಗೂ ಕೆಳಹಂತದ ನ್ಯಾಯಾಲಯದಲ್ಲಿ ಈ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ ಎಂದು ಪ್ರತಿಪಾದಿಸಿದ ಜ್ಞಾನವಾಪಿ ಮಸೀದಿಯನ್ನು ನಿರ್ವಹಣೆ ಮಾಡುತ್ತಿರುವ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಯು ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು

2019 ಸ್ವಯಂಭೂ ಜ್ಯೋತಿರ್ಲಿಂಗ ಭಗವಾನ್ ವಿಶ್ವೇಶ್ವರ ಹೆಸರಿನಲ್ಲಿ ಡಿಸೆಂಬರ್‌ನಲ್ಲಿ ವಾರಾಣಸಿ ಜಿಲ್ಲಾ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ವಕೀಲ ವಿಜಯ ಶಂಕರ್ ರಸ್ತೋಗಿ ಎಂಬುವರು, ಇಡೀ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಪುರಾತತ್ವ ಸಮೀಕ್ಷೆ ನಡೆಸುವಂತೆ ಆಗ್ರಹಿಸಿದ್ದರು

2020 ಅಂಜುಮಾನ್ ಸಮಿತಿಯು ಪುರಾತತ್ವ ಸಮೀಕ್ಷೆಯನ್ನು ವಿರೋಧಿಸಿತು. ಅಲಹಾಬಾದ್ ಹೈಕೋರ್ಟ್ ತಡೆ ನೀಡದ ಕಾರಣ, ಕೆಳಹಂತದ ನ್ಯಾಯಾಲಯಕ್ಕೆ ಹೋದ ಸಮಿತಿಯು, 1991ರ ಅರ್ಜಿಯ ವಿಚಾರಣೆಯನ್ನು ಪುನರಾರಂಭಿಸುವಂತೆ ಕೋರಿತು

2021 ಮಾರ್ಚ್ ಪೂಜಾ ಸ್ಥಳಗಳ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಅಂದಿನ ಮುಖ್ಯ ನ್ಯಾಯಮೂರ್ತಿ ಎಸ್‌.ಎ. ಬೊಬಡೆ ಅವರ ನೇತೃತ್ವದ ಪೀಠ ವಿಚಾರಣೆಗೆ ಎತ್ತಿಕೊಂಡಿತ್ತು

2021 ಏಪ್ರಿಲ್ ಸಮೀಕ್ಷೆ ಕೈಗೊಂಡು ವರದಿ ಸಲ್ಲಿಸುವಂತೆ ಭಾರತೀಯ ಪುರಾತತ್ವ ಇಲಾಖೆಗೆ ವಾರಾಣಸಿ ಕೋರ್ಟ್ ಆದೇಶ ನೀಡಿತು. ಆದರೆ ಕೋರ್ಟ್ ನಿರ್ಧಾರಕ್ಕೆ ಉತ್ತರ ಪ್ರದೇಶ ವಕ್ಫ್ ಮಂಡಳಿ ಹಾಗೂ ಅಂಜುಮಾನ್ ಸಮಿತಿ ವಿರೋಧ ವ್ಯಕ್ತಪಡಿಸಿದವು. ಇದೇ ಅವಧಿಯಲ್ಲಿ ಎಲ್ಲರ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡ ಅಲಹಾಬಾದ್ ಹೈಕೋರ್ಟ್, ಪುರಾತತ್ವ ಸಮೀಕ್ಷೆಗೆ ತಡೆ ನೀಡಿತು

2021ಆಗಸ್ಟ್ ರಾಖಿ ಸಿಂಗ್, ಲಕ್ಷ್ಮಿ ದೇವಿ, ಸೀತಾ ಸಾಹು, ಮಂಜು ವ್ಯಾಸ್ ಹಾಗೂ ರೇಖಾ ಪಾಠಕ್ ಎಂಬ ಐವರು ಮಹಿಳೆಯರು ವಾರಾಣಸಿ ಕೋರ್ಟ್ ಮೊರೆ ಹೋದರು. 'ಜ್ಞಾನವಾಪಿ ಮಸೀದಿಯ ಒಳಗಡೆ ಇರುವ ಹನುಮಾನ್, ನಂದಿ ಮತ್ತು ಶೃಂಗಾರ ಗೌರಿ ವಿಗ್ರಹಗಳಿಗೆ ಪ್ರತಿನಿತ್ಯವೂ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು' ಎಂದು ಕೋರಿದ್ದರು. ಜ್ಞಾನವಾಪಿ ಪ್ರಾಂಗಣದಲ್ಲಿ ಇರುವ ಈ ವಿಗ್ರಹಗಳಿಗೆ ಯಾರೂ ಹಾನಿ ಮಾಡದಂತೆ ನಿರ್ದೇಶನ ನೀಡುವಂತೆಯೂ ಕೋರಿದ್ದರು

2022ಏಪ್ರಿಲ್ ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿ ಆಧಾರದಲ್ಲಿ, ಅಡ್ವೊಕೇಟ್ ಕಮಿಷನರ್ ಅವರನ್ನು ನೇಮಿಸಿದ ವಾರಾಣಸಿ ಕೋರ್ಟ್, ಸಂಕೀರ್ಣದ ವಿಡಿಯೊ ಚಿತ್ರೀಕರಣ ಮಾಡಲು ಸೂಚನೆ ನೀಡಿತು. ಈ ನಿರ್ದೇಶನವನ್ನು ಅಂಜುಮಾನ್ ಸಮಿತಿಯು ಅಲಹಾಬಾದ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತು. ಆದರೆ, ಕೋರ್ಟ್ ಸೂಚನೆಯನ್ನು ಹೈಕೋರ್ಟ್ ಎತ್ತಿಹಿಡಿದಿದ್ದರಿಂದ, ಸಮಿತಿಯು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಅರ್ಜಿಯನ್ನು ಸಲ್ಲಿಸಿತು

2022 ಮೇ ವಿಡಿಯೊ ಚಿತ್ರೀಕರಣ ಮಾಡಲು ಮುಂದಾದ ವಕೀಲರ ತಂಡಕ್ಕೆ ಮಸೀದಿಯ ಒಳಗೆ ಪ್ರವೇಶವನ್ನು ನಿರಾಕರಿಸಲಾಯಿತು ಎನ್ನಲಾಗಿದೆ. ಆದರೆ ಮೇ 17ರೊಳಗೆ ಸಮೀಕ್ಷೆ ಪೂರ್ಣಗೊಳಿಸಿ ವರದಿ ನೀಡುವಂತೆ ಕೋರ್ಟ್ ಸೂಚಿಸಿತು. ಎರಡು ದಿನಗಳ ಬಳಿಕ ಸಮೀಕ್ಷೆಯ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲಾಯಿತು. 'ಜ್ಞಾನವಾಪಿ ಸಂಕೀರ್ಣದ ಒಳಗಿನ ತೊಟ್ಟಿಯ ನೀರನ್ನು ಖಾಲಿ ಮಾಡಿದಾಗ, ಅದರಡಿಯಲ್ಲಿ ಶಿವಲಿಂಗದ ಇರುವಿಕೆ ಕಂಡುಬಂದಿದೆ' ಎಂದು ಅರ್ಜಿದಾರರು ಹೇಳಿಕೊಂಡರು. ಶಿವಲಿಂಗ ಇದೆ ಎನ್ನಲಾದ ಸ್ಥಳಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸುವಂತೆ ಜಿಲ್ಲಾಧಿಕಾರಿಗೆ ಕೋರ್ಟ್ ಸೂಚಿಸಿತು.

'ಢಮರುಗ, ಕಮಲ ಹಾಗೂ ತ್ರಿಶೂಲದ ಕುರುಹುಗಳು ಮತ್ತು ಮಸೀದಿಯ ಬುನಾದಿ ಗೋಡೆಯ ಮೇಲೆ ಸನಾತನ ಧರ್ಮಕ್ಕೆ ಸಂಬಂಧಿಸಿದ ಚಿಹ್ನೆಗಳು ಕಂಡುಬಂದಿವೆ' ಎಂದು ಹಿಂದೂಗಳ ಪರ ವಕೀಲರು ಹೇಳಿಕೊಂಡರು. ಆದರೆ ಈ ಹೇಳಿಕೆಗಳನ್ನು ಮುಸ್ಲಿಮರ ಪರ ವಕೀಲರು ಅಲ್ಲಗಳೆದರು. 'ಅಲ್ಲಿರುವುದು ಶಿವಲಿಂಗವಲ್ಲ, ಅದು ಕಾರಂಜಿ' ಎಂದು ಸ್ಪಷ್ಟನೆ ನೀಡಿದರು.

ಜ್ಞಾನವಾಪಿ ಮಾದರಿಯ ವಿವಾದಗಳು

ಕುತುಬ್ ಮಿನಾರ್, ದೆಹಲಿ: 13ನೇ ಶತಮಾನದಲ್ಲಿ ನಿರ್ಮಾಣವಾದ ಕುತುಬ್ ಮಿನಾರ್ ಇರುವ ಕುತುಬ್ ಸಂಕೀರ್ಣವು ಮೂಲದಲ್ಲಿ ಹಿಂದೂ ಮತ್ತು ಜೈನ ದೇವಾಲಯಗಳಾಗಿದ್ದವು. ಕುತುಬ್ ಉದ್ದೀನ್ ಐಬಕ್ ಅವುಗಳನ್ನು ನಾಶ ಮಾಡಿ ಈಗಿನ ಕಟ್ಟಡ ನಿರ್ಮಿಸಿದ್ದಾನೆ, ಅದನ್ನು ಮರಳಿ ಹಿಂದೂಗಳಿಗೆ ನೀಡಬೇಕು ಎಂದು ಕೋರಿ ದೆಹಲಿಯ ನ್ಯಾಯಾಲಯದಲ್ಲಿ 2020ರ ಡಿಸೆಂಬರ್‌ನಲ್ಲಿ ಅರ್ಜಿ ಸಲ್ಲಿಕೆ ಆಗಿತ್ತು. ಕೋರ್ಟ್ ಈ ಅರ್ಜಿಯನ್ನು ವಜಾ ಮಾಡಿತ್ತು. ಅದನ್ನು ಪ್ರಶ್ನಿಸಿ 2022ರ ಫೆಬ್ರುವರಿಯಲ್ಲಿ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ. ಅದರ ವಿಚಾರಣೆಗೆ ಕೋರ್ಟ್ ಒಪ್ಪಿಗೆ ಕೊಟ್ಟಿದೆ. ಕುತುಬ್ ಮಿನಾರ್ ಹೆಸರನ್ನು ವಿಷ್ಣುಸ್ತಂಭ ಎಂದು ಬದಲಾಯಿಸಬೇಕು ಎಂದು ಹಿಂದುತ್ವವಾದಿ ಸಂಘಟನೆ ಮಹಾಕಾಳ ಮಾನವ ಸೇವಾ 2022ರ ಮೇಯಲ್ಲಿ ಆಗ್ರಹಿಸಿತ್ತು.

ಭೋಜಶಾಲಾ ಸಂಕೀರ್ಣ, ಧಾರ್, ಮಧ್ಯ ಪ್ರದೇಶ: ಮಧ್ಯ ಪ್ರದೇಶದ ಧಾರ್ ಜಿಲ್ಲೆಯಲ್ಲಿರುವ 11ನೇ ಶತಮಾನದ ಭೋಜಶಾಲಾ ಸಂಕೀರ್ಣವನ್ನು ಹಿಂದೂಗಳಿಗೆ ನೀಡಬೇಕು ಮತ್ತು ಅಲ್ಲಿ ಮುಸ್ಲಿಮರು ನಮಾಜ್ ಮಾಡುವುದನ್ನು ನಿಷೇಧಿಸಬೇಕು ಎಂದು ಕೋರಿ ಮಧ್ಯ ಪ್ರದೇಶ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಇದಕ್ಕೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಮತ್ತು ಮಧ್ಯ ಪ್ರದೇಶ ಸರ್ಕಾರಕ್ಕೆ ಮಧ್ಯ ಪ್ರದೇಶ ಹೈಕೋರ್ಟ್ ನೋಟಿಸ್ ನೀಡಿದೆ. ಭೋಜಶಾಲಾ–ಕಮಲ್ ಮೌಲಾ ಮಸೀದಿ ತಮ್ಮದು ಎಂದು ಹಿಂದೂ ಮತ್ತು ಮುಸ್ಲಿಂ ಸಮುದಾಯ ವಾದಿಸುತ್ತಿವೆ. ಭೋಜಶಾಲಾ ಸಂಕೀರ್ಣದಲ್ಲಿ ನಮಾಜ್ ಮಾಡಲು ಮುಸ್ಲಿಮರಿಗೆ ಅವಕಾಶ ನೀಡಿ ಭಾರತೀಯ ಪುರಾತತ್ವ ಇಲಾಖೆಯು 2003ರಲ್ಲಿ ಅಧಿಸೂಚನೆ ಹೊರಡಿಸಿತ್ತು.

ತಾಜ್ ಮಹಲ್, ಆಗ್ರಾ, ಉತ್ತರ ಪ್ರದೇಶ: ತಾಜ್ ಮಹಲ್ ಎಂಬುದು ತೇಜೋ ಮಹಾಲಯ ಎಂಬ ಹೆಸರಿನ ಶಿವ ದೇವಾಲಯ. ಅದರ ಕುರುಹುಗಳು ತಾಜ್‌ಮಹಲ್‌ನ ಮುಚ್ಚಿರುವ 20 ಕೊಠಡಿಗಳಲ್ಲಿ ಇವೆ. ಹಾಗಾಗಿ, ಕೊಠಡಿ ತೆರೆಯಲು ಅವಕಾಶ ಕೊಡಬೇಕು ಎಂದು ಕೋರಿ 2022ರ ಮೇಯಲ್ಲಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಕೋರ್ಟ್ ಈ ಅರ್ಜಿಯನ್ನು ಮೇ 11ರಂದು ವಜಾ ಮಾಡಿತು.

ಶಾಹಿ ಮಸೀದಿ, ಮಥುರಾ, ಉತ್ತರ ಪ್ರದೇಶ: ಮಥುರಾದ ಶಾಹಿ ಮಸೀದಿ ಮತ್ತು ಕೃಷ್ಣ ಜನ್ಮಭೂಮಿಗೆ ಸಂಬಂಧಿಸಿ ಎರಡು ಪ್ರಕರಣಗಳು ಅಲಹಾಬಾದ್ ಹೈಕೋರ್ಟ್ ಮತ್ತು ಮಥುರಾ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇವೆ. ಶ್ರೀಕೃಷ್ಣ ದೇವಾಲಯದ ಸಮೀಪವೇ ಇರುವ ಶಾಹಿ ಮಸೀದಿಯನ್ನು ಹಿಂದೂಗಳಿಗೆ ಹಸ್ತಾಂತರಿಸಬೇಕು ಎಂದು ಕೋರಿದ ಅರ್ಜಿಯು 2020ರ ನವೆಂಬರ್‌ನಲ್ಲಿ ಅಲಹಾಬಾದ್ ಹೈಕೋರ್ಟ್‌ಗೆ ಸಲ್ಲಿಕೆಯಾಗಿದೆ. ಕೃಷ್ಣ ಜನ್ಮಸ್ಥಾನದಲ್ಲಿ ಮಸೀದಿ ನಿರ್ಮಾಣವಾಗಿದೆ. ಹಾಗಾಗಿ, ಅದನ್ನು ಹಿಂದೂಗಳಿಗೆ ಕೊಡಬೇಕು ಎಂಬುದು ಈ ಅರ್ಜಿಯ ವಾದವಾಗಿದೆ. ಇಂತಹುದೇ ಇನ್ನೊಂದು ಅರ್ಜಿಯು ಮಥುರಾ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಕೆ ಆಗಿದೆ.

2022 ಜುಲೈ 21 ಐವರು ಮಹಿಳೆಯರು ಸಲ್ಲಿಸಿರುವ ಅರ್ಜಿಯ ಬಗ್ಗೆ ವಾರಾಣಸಿ ಜಿಲ್ಲಾ ನ್ಯಾಯಾಧೀಶರು ನೀಡುವ ತೀರ್ಪಿನವರೆಗೆ ಕಾಯುವುದಾಗಿ ಸುಪ್ರೀಂ ಕೋರ್ಟ್ ಹೇಳಿತು

2022ಆಗಸ್ಟ್ 24 ಎರಡೂ ಕಡೆಯವರ ವಾದ ಆಲಿಸಿದ ಜಿಲ್ಲಾ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಅವರು, ಮಹಿಳೆಯರ ಅರ್ಜಿ ವಿಚಾರಣೆಗೆ ಅರ್ಹವೇ ಎಂಬುದನ್ನು ಸೆ. 12ರಂದು ಪ್ರಕಟಿಸುವುದಾಗಿ ಹೇಳಿದ್ದರು

2022 ಸೆ.12 ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಅರ್ಹ ಎಂದು ವಾರಾಣಸಿ ಜಿಲ್ಲಾ ನ್ಯಾಯಾಧೀಶರು ಪ್ರಕಟಿಸಿದರು

ಪೂಜಾ ಸ್ಥಳಗಳ ಯಥಾಸ್ಥಿತಿ ಕಾಯುವ ಕಾಯ್ದೆ

ಜ್ಞಾನವಾಪಿ ಮಸೀದಿ ವಿವಾದವು ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991 ಕಡೆಗೆ ಗಮನ ಹರಿಯುವಂತೆ ಮಾಡಿದೆ. ಮಸೀದಿಯ ಒಳಗೆ ಇತ್ತು ಎನ್ನಲಾದ ಶ್ರೀ ಶೃಂಗಾರಗೌರಿ ಮೂರ್ತಿಗೆ ಪೂಜೆಗೆ ಅವಕಾಶ ಕಲ್ಪಿಸಬೇಕು ಎಂದು ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿಯು ವಿಚಾರಣೆಗೆ ಅರ್ಹವಲ್ಲ ಎಂದು ಜ್ಞಾನವಾಪಿ ಮಸೀದಿಯ ಆಡಳಿತ ನೋಡಿಕೊಳ್ಳುತ್ತಿರುವ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಯು ವಾದಿಸಿದೆ. ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯನ್ನು ತನ್ನ ವಾದಕ್ಕೆ ಮುಖ್ಯ ಆಧಾರವಾಗಿ ಮಸೀದಿಯು ಬಳಸಿಕೊಂಡಿದೆ.

ಯಾವುದೇ ಪೂಜಾಸ್ಥಳದ ಸ್ವರೂಪವನ್ನು 1947ರಲ್ಲಿ ಇದ್ದ ರೀತಿಯಲ್ಲಿಯೇ ಉಳಿಸಿಕೊಳ್ಳಬೇಕು. ಯಾವುದೇ ಬದಲಾವಣೆಗೆ ಅವಕಾಶ ಇಲ್ಲ ಎಂದು ಕಾಯ್ದೆ ಹೇಳುತ್ತದೆ. 1991ರ ಜುಲೈ 11ರಂದು ಈ ಕಾಯ್ದೆಯು ಜಾರಿಗೆ ಬಂತು.

ಕಾಯ್ದೆಯ ಸೆಕ್ಷನ್ 4 (1) ಹೀಗೆ ಹೇಳುತ್ತದೆ: 'ಪೂಜಾ ಸ್ಥಳವೊಂದರ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಹೇಗೆ ಇತ್ತೋ ಅದೇ ರೀತಿಯಲ್ಲಿ ಮುಂದುವರಿಯಬೇಕು'.

ಕಾಯ್ದೆಯ ಸೆಕ್ಷನ್ 4 (2) ಹೀಗೆ ಹೇಳುತ್ತದೆ: 'ಪೂಜಾ ಸ್ಥಳವೊಂದರ ಧಾರ್ಮಿಕ ಸ್ವರೂಪವನ್ನು 1947ರ ಆಗಸ್ಟ್ 15ಕ್ಕೂ ಹಿಂದೆ ಪರಿವರ್ತಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿದ್ದು ನ್ಯಾಯಾಲಯ, ನ್ಯಾಯಮಂಡಳಿ ಅಥವಾ ಇನ್ನಿತರ ಪ್ರಾಧಿಕಾರಗಳಲ್ಲಿ ವಿಚಾರಣೆಗೆ ಬಾಕಿ ಇರುವ ಯಾವುದೇ ದಾವೆ, ಮೇಲ್ಮನವಿ ಅಥವಾ ಕಾನೂನು ಪ್ರಕ್ರಿಯೆಗಳು ರದ್ದಾಗಲಿವೆ'. ಈ ಕಾಯ್ದೆಯು ಅಯೋಧ್ಯೆ ರಾಮಮಂದಿರ–ಬಾಬರಿ ಮಸೀದಿ ವಿವಾದಕ್ಕೆ ಅನ್ವಯ ಆಗುವುದಿಲ್ಲ.

ಆಧಾರ: ಪಿಟಿಐ, ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ 1991, ಲೈವ್ ಲಾ ಜಾಲತಾಣ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ರಾಷ್ಟ್ರೀಯ ಪಕ್ಷ ಸ್ಥಾಪಿಸಲು ನಿರ್ಧರಿಸಿದ್ದಾರೆ. ಅವರ ಈ ಯತ್ನ ಯಶಸ್ವಿ ಆಗುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 223

ನಾರದ ಬೋಧಿಸಿದ ಪಂಚಾಕ್ಷರೀ

ಶಂಕರನ ವಿರಹದಿಂದ ದುಃಖಿತೆಯಾದ ಪಾರ್ವತಿ, ಎಂತಹ ಶ್ರೇಷ್ಠ ಮಾತಾಪಿತೃಗಳಲ್ಲಿ ಜನಿಸಿದರೇನು? ಎಂಥ ಸೌಂದರ್ಯ ಇದ್ದರೇನು? ಬಯಸಿದ ಪತಿ ಸಿಗದಿದ್ದರೆ ಪ್ರಯೋಜನವೇನು? – ಎಂದು ತನ್ನನ್ನು ಸದಾ ನಿಂದಿಸಿಕೊಳ್ಳುತ್ತಾ ವ್ಯಥಿಸುತ್ತಿದ್ದಳು. ಶಿವನಿಲ್ಲದೆ ತನಗೆ ಬದುಕಿಲ್ಲ ಎಂದು ಸದಾ ಶಿವನನ್ನೇ ಕನವರಿಸುತ್ತಿದ್ದಳು. ಶಿವ ತಪಸ್ಸು ಮಾಡುತ್ತಿದ್ದಾಗ ತಾನು ನಿಷ್ಠೆಯಿಂದ ಸೇವೆ ಮಾಡಿದ್ದನ್ನು ಸ್ಮರಿಸುತ್ತಾ, ಆಗಾಗ್ಗೆ 'ಶಿವ ಶಿವ' ಎಂದು ಉಚ್ಚರಿಸುತ್ತಿದ್ದಳು. ಆಹಾರ-ನಿದ್ರೆ ಇಲ್ಲದೆ ಸದಾ ಶಿವನ ಕನವರಿಸುತ್ತಾ ಅಳುತ್ತಿದ್ದ ಪಾರ್ವತಿ ಸುಸ್ತಾಗಿ ಎಚ್ಚರತಪ್ಪಿ ಬೀಳುತ್ತಿದ್ದಳು. ತಂದೆ ಹಿಮವಂತ, ತಾಯಿ ಮೇನಾದೇವಿ ಮತ್ತು ಮೈನಾಕ ಮೊದಲಾದ ಸೋದರರೆಲ್ಲರೂ ಗಿರಿಜೆಗೆ ಎಷ್ಟೇ ಸಾಂತ್ವನ ಮಾಡಿದರೂ, ಪಾರ್ವತಿಯ ದುಃಖ ಶಮನವಾಗಲಿಲ್ಲ.

ಈ ವಿಷಯ ತಿಳಿದ ದೇವೇಂದ್ರನು ನಾರದನ ಮೊರೆಹೋದ. ದೇವೇಂದ್ರನ ಕೋರಿಕೆ ಮೇರೆಗೆ ಹಿಮವಂತನ ಮನೆಗೆ ಬಂದ ನಾರದ, 'ನಿನ್ನೆಲ್ಲಾ ಸಮಸ್ಯೆ ಪರಿಹಾರಕ್ಕೆ ಶಿವನನ್ನು ಸ್ಮರಿಸು' ಎಂದು ಸಾಂತ್ವನ ಹೇಳಿದ. ನಾರದನನ್ನು ನೋಡಿ ಪಾರ್ವತಿಗೆ ದುಃಖ ಕಡಿಮೆ ಆದಂತಾಯಿತು. ನಾರದ, 'ಎಲೈ ಗಿರಿಜೆ, ಸತ್ಯವಾದ ಮಾತನ್ನು ಹೇಳುತ್ತೇನೆ. ಅದರಂತೆ ನಡೆದರೆ ನಿನ್ನ ಇಷ್ಟಾರ್ಥವು ಸಿದ್ಧಿಸುವುದು. ಮಹಾದೇವನನ್ನು ನೀನು ಸೇವಿಸಿರುವೆ. ಆದರೆ ತಪಸ್ಸನ್ನು ಮಾಡಿ ಸೇವಿಸಲಿಲ್ಲ. ಸೌಂದರ್ಯಗರ್ವದಿಂದ ಶಿವನ ಸೇವೆ ಮಾಡಿದೆ. ಆ ಗರ್ವವನ್ನು ಶಿವನು ಮನ್ಮಥನ ದಹನಮಾಡಿ ನಾಶಮಾಡಿದ. ನಿನ್ನ ಸ್ವಾಮಿಯಾದ ಮಹೇಶ್ವರ ಮಹಾ ವಿರಕ್ತ, ಮಹಾ ಹಠಯೋಗಿ. ಆ ಶಿವನು ಭಕ್ತವತ್ಸಲ. ನೀನು ತಪಸ್ಸಿನಿಂದ ಅವನನ್ನು ಭಕ್ತಿಯಿಂದ ಆರಾಧಿಸು. ನೀನು ತಪಸ್ಸಿನಿಂದ ಪರಿಶುದ್ಧಳಾದರೆ ಶಿವ ನಿನ್ನ ಮದುವೆಯಾಗುತ್ತಾನೆ' ಎಂದ. ಗಿರಿಜೆಗೆ ಸ್ವಲ್ಪ ಸಮಾಧಾನವಾಯಿತು. ಆಗ ಪಾರ್ವತಿ 'ನಾರದಮುನಿ, ರುದ್ರನನ್ನಾರಾಧಿಸಲು ಮಂತ್ರವೊಂದನ್ನು ನನಗೆ ಉಪದೇಶಿಸು' ಎಂದು ಪ್ರಾರ್ಥಿಸಿದಳು.

ಆಗ ನಾರದ ಶಿವಪಂಚಾಕ್ಷರೀ (ನಮಃ ಶಿವಾಯ) ಮಂತ್ರವನ್ನು ವಿಧಿವತ್ತಾಗಿ ಪಾರ್ವತಿಗೆ ಉಪದೇಶಿಸಿದ. ಶಿವಪಂಚಾಕ್ಷರೀ ಮಂತ್ರದ ಮಹತ್ವವನ್ನೂ ಹೇಳಿದ. 'ಎಲೈ ಗಿರಿಜೆ, ಈ ಮಂತ್ರದ ಅದ್ಭುತವಾದ ಮಹಿಮೆಯನ್ನು ಹೇಳುವೆನು ಕೇಳು. ಇದನ್ನು ಕೇಳಿದ ಮಾತ್ರದಿಂದಲೇ ಶಿವ ಪ್ರಸನ್ನನಾಗುವನು. ಈ ಪಂಚಾಕ್ಷರೀಮಂತ್ರವು ಎಲ್ಲಾ ಮಂತ್ರಗಳಿಗೂ ಶ್ರೇಷ್ಠವಾದುದು. ಇದು ಇಷ್ಟಾರ್ಥಗಳನ್ನೂ ಭೋಗ-ಮೋಕ್ಷಗಳನ್ನೂ ಕೊಡುವುದು. ಈ ಮಂತ್ರವನ್ನು ವಿಧಿವತ್ತಾಗಿ ಜಪಿಸಿ ಶಂಕರನನ್ನು ಆರಾಧಿಸಿದರೆ ಪ್ರತ್ಯಕ್ಷನಾಗುವನು. ನೀನು ತಪೋನಿಯಮದಿಂದಿದ್ದು, ಶಂಕರನ ರೂಪವನ್ನು ಧ್ಯಾನಿಸುತ್ತಾ ಪಂಚಾಕ್ಷರೀಮಂತ್ರವನ್ನು ಜಪಿಸು. ಶಿವನು ಶೀಘ್ರದಲ್ಲಿಯೇ ಪ್ರತ್ಯಕ್ಷನಾಗುವನು. ನಿನ್ನೆಲ್ಲಾ ಇಷ್ಟಾರ್ಥಗಳು ಈಡೇರುವುವು. ಮಹಾಯೋಗಿಯಾದ ಶಿವನನ್ನು ತಪಸ್ಸಿನಿಂದ ಪಡೆಯಬಹುದೇ ಹೊರತು, ಯಾವುದೇ ಸೌಂದರ್ಯದ ಪ್ರದರ್ಶನದಿಂದ ಮತ್ತು ಬಲವಂತದಿಂದ ಅವನನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ. ಯೋಗಗುರುವಾದ ಮಹಾಶಿವನನ್ನು ತಪಸ್ಸಿನಿಂದ ಒಲಿಸಿಕೊಂಡರೆ, ನಿನ್ನ ಎಲ್ಲಾ ಅಭೀಷ್ಟೆಯೂ ನೆರವೇರುವುದು' ಎಂದು ಹೇಳಿದ ನಾರದ ಅಲ್ಲಿಂದ ಸ್ವರ್ಗಕ್ಕೆ ತೆರಳಿದ.

ನಾರದನ ಹಿತವಾದ ಮಾತು ಕೇಳಿ ಉಲ್ಲಸಿತಳಾದ ಪಾರ್ವತಿ, ಸಂತೋಷದಿಂದ ಹಿಗ್ಗಿದಳು. ನಾರದ ಉಪದೇಶಿಸಿದಂತೆ ಪಂಚಾಕ್ಷರೀಮಂತ್ರವನ್ನ ಜಪಿಸುತ್ತಾ ತಪಸ್ಸು ಮಾಡಲು ಹೊರಟಳು ಎಂಬಲ್ಲಿಗೆ ಪಾರ್ವತೀಖಂಡದ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂರು ಸೂತ್ರಗಳು

ಕಾಯಕವ ಚರಿಪುದಾತ್ಮ ಜುಗುಪ್ಸೆಗೆಡೆಗುಡದೆ |
ಆಯತದ ಲೋಕಧರ್ಮಗಳ ಪಾಲಿಪುದು ||
ಆಯತಿಗೆ ಬಾಯ್ಬಿಡದೆ ಗತವ ಚಿಂತಿಸದಿಹುದು |
ಧ್ಯೇಯವೀ ಸೂತ್ರಗಳು – ಮಂಕುತಿಮ್ಮ || 713 ||

ಪದ-ಅರ್ಥ: ಚರಿಪುದಾತ್ಮ = ಚರಿಪುದು(ನಡೆಸುವುದು) + ಆತ್ಮ, ಜುಗುಪ್ಸೆಗೆಡೆಗುಡದೆ = ಜಿಗುಪ್ಸೆಗೆ + ಎಡೆಗುಡದೆ(ಅವಕಾಶ ಕೊಡದೆ), ಆಯತದ = ವಿಸ್ತಾರದ, ಆಯತಿಗೆ = ಮುಂದಾಗಬೇಕಾದ್ದಕ್ಕೆ, ಬಾಯ್ಬಿಡದೆ = ಆಸೆ ಪಡದೆ, ಗತವ = ಹಿಂದಾದದ್ದನ್ನು

ವಾಚ್ಯಾರ್ಥ: ಜಿಗುಪ್ಸೆ ಪಡದೆ ಪ್ರಪಂಚದ ಕಾರ್ಯಗಳನ್ನು ಮಾಡುವುದು. ಆತ್ಮವಿಸ್ತಾರಕ್ಕೆ ಬೇಕಾದ ಲೋಕದ ಧರ್ಮಗಳನ್ನು ಪಾಲಿಸುವುದು. ಮುಂದಾಗುವುದಕ್ಕೆ ಅತಿಯಾಸೆಯಿಂದ ಬಾಯಿ ಬಿಡದೆ, ಹಿಂದಾಗಿ ಹೋದದ್ದರ ಬಗ್ಗೆ ಚಿಂತಿಸದಿರುವುದು. ಇದೇ ಮೂಲಸೂತ್ರಗಳು

ವಿವರಣೆ: ಈ ಚೌಪದಿ ಸುಂದರ ಬದುಕಿನ ಮೂರು ಪ್ರಮುಖ ಸೂತ್ರಗಳನ್ನು ತಿಳಿಸುತ್ತದೆ. ಬದುಕು ನಿಜವಾಗಿ ನೋಡಿದರೆ ತುಂಬ ಸುಂದರ ಹಾಗೂ ಸುಲಭ. ಆದರೆ ನಾವು ಅದನ್ನು ನಮ್ಮ ಪೂರ್ವಾಗ್ರಹಗಳಿಂದಾಗಿ, ಸ್ವಯಂಕೃತ ಅಪರಾಧಗಳಿಂದಾಗಿ ತುಂಬ ಕಷ್ಟವನ್ನಾಗಿ ಮಾಡಿಕೊಳ್ಳುತ್ತೇವೆ. ಕಗ್ಗದಲ್ಲಿ ತಿಳಿಸಿರುವ ಮೂರು ಸೂತ್ರಗಳನ್ನು ಪಾಲಿಸಿದರೆ ಬದುಕು, ಸಂತೋಷವನ್ನು, ನೆಮ್ಮದಿಯನ್ನು ಪಡೆಯಬಹುದು.

ಮೊದಲನೆಯ ಸೂತ್ರ, ನಮಗೆ ದೊರಕಿದ ಅವಕಾಶಗಳಲ್ಲಿ, ನಮಗಿರುವ ಶಕ್ತಿಯಲ್ಲಿ, ಒದಗಿದ ಕರ್ತವ್ಯಗಳನ್ನು ಆತ್ಮಕ್ಕೆ ಜಿಗುಪ್ಸೆಯಾಗದಂತೆ ಮಾಡಬೇಕು. ಯಾವ ಕೆಲಸವೂ ಕೀಳಲ್ಲ, ನಾವು ಅದು ಕೀಳು ಎಂದು ಭಾವಿಸುವವರೆಗೆ, ನಾವು ಮಾಡುವ ಕೆಲಸದ ಬಗ್ಗೆ ನಮಗೇ ಜಿಗುಪ್ಸೆ ಇದ್ದರೆ ನಾವು ಎಂದಿಗೂ ಶ್ರೇಷ್ಠ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ. ಕಾರ್ಯದ ಬಗೆಗಿನ ಕೀಳರಿಮೆ ಸದಾಕಾಲ ಕೆಳಗೆ ಎಳೆಯುತ್ತಲೇ ಇರುತ್ತದೆ. ವಚನಕಾರರು ಹೇಳಿದಂತೆ, "ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು" ಯಾಕೆಂದರೆ "ಕಾಯಕವೇ ಕೈಲಾಸ" ವಲ್ಲವೆ? ಮಾಡುವ ಕೆಲಸದಲ್ಲಿ ಕೀಳರಿಮೆಯಿಲ್ಲದ ಪ್ರೀತಿ ಒಂದನೇ ಸೂತ್ರ. ಎರಡನೆಯದು, ಆಯತದ ಧರ್ಮಗಳನ್ನು ಪಾಲಿಸುವುದು. ಯಾವವು ಆಯತದ ಲೋಕಧರ್ಮಗಳು? ಅವು ನಮ್ಮ ಆತ್ಮವಿಸ್ತರಣಕ್ಕೆ ಸಾಧನವಾಗುವ ಕ್ರಿಯೆಗಳು. ಬಯಕೆಯು ಪ್ರಧಾನವಾದಾಗ ಆತ್ಮದ ಪರಿಜ್ಞಾನ ಅತೀ ಕಡಿಮೆಯಾಗುತ್ತದೆ. ಬಯಕೆಗಳನ್ನು ಪೂರ್ತಿ ಬಿಡುವುದು ಸಾಧ್ಯವಿಲ್ಲವೆಂದಾದರೂ ಬಯಕೆಯ ತೀಕ್ಷ್ಣತೆಯನ್ನು ಕಡಿಮೆ ಮಾಡಿಕೊಳ್ಳಬೇಕು. ನಮ್ಮ ಅಪೇಕ್ಷೆಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದರೆ, ಚೈತನ್ಯವೃದ್ಧಿಯಾಗುತ್ತದೆ, ಅರಿವು ಮೂಡುತ್ತದೆ. ಮೂರನೆಯ ಸೂತ್ರ, ಆಗಿ ಹೋದದ್ದಕ್ಕೆ ಚಿಂತಿಸದೆ ಮುಂದೆ ಆಗುವುದಕ್ಕೆ ಅತಿಯಾದ ಅಪೇಕ್ಷೆ ಪಡದಿರುವುದು.

ಗತೇ ಶೋಕೋ ನಕರ್ತವ್ಯೋ ಭವಿಷ್ಯಂ ನೈವ ಚಿಂತಯೇತ್ |
ವರ್ತಮಾನೇನ ಕಾಲೇನ ವರ್ತಯಂತಿ ವಿಚಕ್ಷಣಾ ||

"ಕಳೆದುಹೋದದ್ದಕ್ಕೆ ಶೋಕಿಸುವ ಅಗತ್ಯವಿಲ್ಲ. ಭವಿಷ್ಯದ ಬಗ್ಗೆ ಚಿಂತೆ ಬೇಡ. ವಿವೇಕಿಗಳು ವರ್ತಮಾನದಲ್ಲೇ ಬದುಕುತ್ತಾರೆ". ಬದುಕಿನ ಸುಖ ವರ್ತಮಾನದಲ್ಲಿ. ಈ ಮೂರು ಸೂತ್ರಗಳನ್ನು ನಾವು ಪಾಲಿಸುವುದು ಸಾಧ್ಯವಾದಲ್ಲಿ ಬದುಕು ಹಗುರಾದೀತು, ನೆಮ್ಮದಿಯ ಗೂಡಾದೀತು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಸೆಪ್ಟೆಂಬರ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತೃತೀಯ ಗಂ. 10-38 **ನಕ್ಷತ್ರ:** ರೇವತಿ ಗಂ. 06-36 **ಯೋಗ:** ವೃದ್ಧಿ ಗಂ. 07-36, **ಕರಣ:** ವಿಷ್ಟಿ ಗಂ. 10-38, ಸಿಂಹ ಮಾಸದ 27 ನೇ ದಿನ. **ರಾಹುಕಾಲ :** ಮಧ್ಯಾಹ್ನ 03:00–04:30 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-30
ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ರಾತ್ರಿ 08-51)
ಮುಸ್ಲಿಂ ದಿನಾಂಕ : 16 ಸಫರ್
ಅದೃಷ್ಟ ಸಂಖ್ಯೆ : 3, 11

ಮೇಷ: ನಿಮ್ಮ ಚಟುವಟಿಕೆಗಳು ಚುರುಕುಗೊಂಡಿದ್ದು, ತುಂಬಾ ಲವಲವಿಕೆಯಿಂದ ಇರುವಿರಿ. ನಿಮ್ಮ ಕೆಲಸಕಾರ್ಯಗಳ ಅಭಿವೃದ್ಧಿಯ ಬಗ್ಗೆ ಯೋಚಿಸಲು ಮತ್ತು ಹೊಸ ಹೊಂದಾಣಿಕೆಗಳ ಬಗ್ಗೆ ಕೆಲಸ ಮಾಡಲು ಸೂಕ್ತ ದಿನ.

ವೃಷಭ: ಹಣಕಾಸಿನ ವ್ಯವಹಾರಗಳೆಲ್ಲ ಸುಗಮವಾಗಿ ಸಾಗುತ್ತಿರುವುದರಿಂದ ಮನಸ್ಸಿಗೆ ನಿರಾಳ. ಹಣ ಹೂಡಿಕೆಯ ವಿಷಯದಲ್ಲಿ ನಿಮ್ಮ ಅನಿಸಿಕೆಯಂತೆ ನಡೆಯುವುದು ಉತ್ತಮ. ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರ ಸಿಗಲಿದೆ.

ಮಿಥುನ: ವಾಣಿಜ್ಯೋದ್ಯಮಿಗಳು ಭದ್ರತೆಯ ಬಗ್ಗೆ ಗಮನ ಹರಿಸಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಈವರೆಗೆ ಕಲಿತಿರುವ ವಿಷಯಗಳನ್ನು ಪ್ರಾಯೋಗಿಕವಾಗಿ ಬಳಕೆಗೆ ತರಲು ಇದು ಸುದಿನ.

ಕರ್ಕಾಟಕ: ಅನವಶ್ಯಕವಾಗಿ ಎಳೆದುಕೊಳ್ಳುವ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ. ಈ ದಿನ ನಿಮಗೆ ಬರುವ ನೂತನ ಯೋಚನೆಗಳು ಖರ್ಚಿಗೆ ದಾರಿಯಾದರೂ ಮುಂದಿನ ದಿನಗಳಲ್ಲಿ ಉಪಕಾರಿಯಾಗಿರುತ್ತದೆ.

ಸಿಂಹ: ಮರಗೆಲಸದವರಿಗೆ ಸುದಿನ. ಗೆಳೆಯರೊಂದಿಗೆ ದೂರದ ಪ್ರಯಾಣದ ಸಾಧ್ಯತೆಗಳು ಹೆಚ್ಚಿರುವುದು. ಸಂತೋಷಕೂಟದಲ್ಲಿ ಪಾಲ್ಗೊಳ್ಳುವಿರಿ. ಸಂಗೀತದಲ್ಲಿನ ನಿಮ್ಮ ಆಸಕ್ತಿಗೆ ಮನೆಯವರಿಂದ ಪ್ರೋತ್ಸಾಹ ಸಿಗಲಿದೆ.

ಕನ್ಯಾ: ಮಕ್ಕಳ ಯಶಸ್ಸನ್ನು ಕಂಡು ಸಂಭ್ರಮಿಸುವಿರಿ. ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಉದ್ಯೋಗಕ್ಕೆ ಅನಿವಾರ್ಯವಾದ ವಿಚಾರಗಳ ಅಧ್ಯಯನ ಮಾಡುವ ಬಗ್ಗೆ ಯೋಚಿಸಿ. ಸ್ತ್ರೀವರ್ಗದ ಮಹತ್ವದ ಸಹಾಯ ಪ್ರಾಪ್ತವಾಗಲಿದೆ.

ತುಲಾ: ನ್ಯಾಯಾಲಯದ ಮೆಟ್ಟಿಲೇರಿದ ಸಮಸ್ಯೆ ಹೊಸ ತಿರುವನ್ನು ಹೊಂದುವುದು. ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ವ್ಯಕ್ತಿತ್ವವಿರಲಿ.

ವೃಶ್ಚಿಕ: ಇಂದು ನಿಮ್ಮ ಸುತ್ತಮುತ್ತಲಿನ ಸಹೋದ್ಯೋಗಿಗಳ ಪ್ರತಿಕ್ರಿಯೆಗಳತ್ತ ಹೆಚ್ಚಿನ ಗಮನ ನೀಡುವುದು ಉತ್ತಮ. ನಿರ್ದಿಷ್ಟ ಗುರಿ ಮತ್ತು ಕಠಿಣ ಶ್ರಮ ಯಶಸ್ಸಿನತ್ತ ಕೊಂಡೊಯ್ಯಲಿದೆ. ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಿ.

ಧನು: ಬಹುದಿನಗಳಿಂದ ಮನಸ್ಸಿನಲ್ಲಿರುವ ಕನಸುಗಳನ್ನು ಪೂರೈಸಿಕೊಳ್ಳಲು ಇಂದಿನ ದಿನವನ್ನು ಉಪಯೋಗಿಸಬಹುದು. ಗುರು-ಹಿರಿಯರ ಸ್ಮರಣೆಯ ಪೂರ್ವಕವಾಗಿ ಹೊಸ ಹಾದಿಯಲ್ಲಿ ಹೆಜ್ಜೆ ಇಡಲು ಇದು ಸುದಿನ.

ಮಕರ: ನೇರ ನಡೆ-ನುಡಿ ಕಲಹ ಉಂಟಾಗುವುದಕ್ಕೆ ಕಾರಣವಾಗಬಹುದು, ಭವಿಷ್ಯದ ಭರವಸೆ ಕಳೆದುಕೊಳ್ಳುವಂತಾಗಲಿದೆ. ಬಾಡಿಗೆ ದಾರರಿಂದ ಸಣ್ಣ-ಪುಟ್ಟ ಕಿರಿಕಿರಿ ತಪ್ಪಿದ್ದಲ್ಲ. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವ.

ಕುಂಭ: ಸಿನಿಮಾ ರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಈ ದಿನ ಅವಕಾಶ ಸಿಗಬಹುದು. ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ಕೀರ್ತಿ ಎಲ್ಲ ಕಡೆಗೆ ಹರಡುವುದು.

ಮೀನ: ಕುಟುಂಬದಲ್ಲಿ ಹೆಣ್ಣು ಮಗುವಿನ ಸಂತಾನದ ಶುಭ ಸುದ್ದಿ ಸಿಗಲಿದೆ. ಉತ್ಸಾಹವಿರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯಗಳಿಕೆ ಆಗುವುದು.

ಪದಬಂಧ 5078

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಡನಾಟವನ್ನು ಹೀಗೂ ಹೇಳಬಹುದು (4)
3.ಬಹು ಕಾಲ ಇರುವಂಥದ್ದು (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪೂರ್ವವೂ ಆಗಿರುವ ವಿರಳತೆ (4)
7.ಕರುವಿನಲ್ಲಿ ಕಾಣಿಸಿದ ಅಶ್ರು (3)
9.ಎರಡಾಗಿ ಸೀಳಿದುದುದು (3)
10.ಯಾರೂ ದಿಕ್ಕಿಲ್ಲದವನು (3)
11.ಓದು ಬರಹ ಬಾರದವರಿಗಾಗಿ ಬರೆದು ಕೊಟ್ಟಿದ್ದು (3)
13.ವೃಕ್ಷದ ಬಳಿ ಸಿಕ್ಕಿರುವ ಪಚ್ಚೆ (4)
14.ಗಮನಿಸಿ! ಆಕಾಶ ಇಲ್ಲಿಯೇ ಕಾಣುತ್ತಿದೆ (3)
15.ಕೊನೆಗೆ ವಿಕ್ರಯಿಸಿದ್ದಕ್ಕೇ ಇಷ್ಟು ಅಸ್ತವ್ಯಸ್ತತೆ! (4)
16.ಈತ ನಾಶ ಮಾಡುವವನು (4)

ಮೇಲಿಂದ ಕೆಳಕ್ಕೆ
2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಬಾಗಿಲನ್ನು ಭದ್ರ ಪಡಿಸುವ ಕೊಂಡಿ (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ದುಃಖಾಂತವಾದ ಪ್ರಹಸನ (5)
12.ಹಡಗನ್ನು ಬಂದರಿನಲ್ಲಿ ನಿಲ್ಲಿಸಲು ಬಳಸುವ ಸಾಧನ (3)
13.ಮನದಿಂದ ಮಾಡಿಕೊಂಡಿರುವ ಅರಿಕೆ (3)



5077ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ರುಮ 3.ಇಂಚರ 5.ಜನಾನುರಾಗಿ 6.ಗವಿ 8.ಮಾಸ 9.ವರ 10.ಕಸು 14.ಮರ್ಮಭೇದಕ 15.ರದನ 16.ವಕ್ತಾರ

ಮೇಲಿಂದ ಕೆಳಕ್ಕೆ: 1.ವಿನಿಯೋಗ 2.ಮಜಲು 3.ಇಂಗಿತ 4.ರಸಾಭಾಸ 7.ವಿಧುರ 8.ಮಾಪಕ 9.ವನಚರ 11.ಸುಕುಮಾರ 12.ವಾಮನ 13.ಕಕವ

ಸುಡೊಕು 5464

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			
7	2			5		6		3
	8		7				5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5463ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಶೇ 83ಕ್ಕಿಂತ ಹೆಚ್ಚು ವೆಚ್ಚಕ್ಕೆ ತಯಾರಿ?

ಒಂದನೇ ಪುಟದಿಂದ...

ಈ ಯೋಜನೆಯಲ್ಲಿ ಕುಡಿಯುವ ನೀರು, ಜಲಮೂಲಗಳ ಪುನರುಜ್ಜೀವನ, ಹಸಿರು ಪ್ರದೇಶ–ಪಾರ್ಕ್ ಎಂದು ಮೂರು ವರ್ಗಗಳನ್ನು ಮಾಡಿ, ಹಣ ನಿಗದಿ ಮಾಡಲಾಗಿದೆ. ಕೇಂದ್ರ ಶೇ 50ರಷ್ಟು, ರಾಜ್ಯ ಶೇ 40 ಹಾಗೂ ಸ್ಥಳೀಯ ಸಂಸ್ಥೆಗಳು ಶೇ 10ರಷ್ಟು ವೆಚ್ಚ ಮಾಡಬೇಕಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರತಿಮನೆಗೂ ನಲ್ಲಿ ನೀರು ಪೂರೈಸುವ ಯೋಜನೆಯನ್ನು ನಿರ್ವಹಿಸಲಿದೆ. ಇದಕ್ಕಾಗಿ ಮಂಡಳಿ ಸಲ್ಲಿಸಿರುವ ಅಂದಾಜು ಪಟ್ಟಿ ಕೇಂದ್ರ ನಿಗದಿ ಮಾಡಿರುವ ಹಣಕ್ಕಿಂತ ₹5,393.28 ಕೋಟಿ ಹೆಚ್ಚಾಗಿದೆ. ಇನ್ನು ಸ್ಥಳೀಯ ಸಂಸ್ಥೆಗಳು ಜಲಮೂಲಗಳ ಪುನರುಜ್ಜೀವನಕ್ಕೆ ಮೂರುಪಟ್ಟು ಹೆಚ್ಚು ಹಾಗೂ ಹಸಿರು ಪ್ರದೇಶ– ಪಾರ್ಕ್ ಅಭಿವೃದ್ಧಿಪಡಿಸಲು ಎಂಟುಪಟ್ಟು ಹೆಚ್ಚು ವೆಚ್ಚದ ಅಂದಾಜು ಪಟ್ಟಿ ನೀಡಿವೆ.

ಅಮೃತ್ 2.0 ಯೋಜನೆ ವೆಚ್ಚ

₹2.27 ಲಕ್ಷ ಕೋಟಿ
ಕೇಂದ್ರ–ಎಲ್ಲ ರಾಜ್ಯಗಳ ಪಾಲು

₹76,760 ಕೋಟಿ
ಕೇಂದ್ರದ ಪಾಲು

'ಅಮೃತ್ 2.0 ಯೋಜನೆ 2021–22ರಿಂದ ನಾಲ್ಕು ವರ್ಷದಲ್ಲಿ ಅನುಷ್ಠಾನವಾಗಬೇಕಿದೆ. ದೇಶದ ಇತರೆ ರಾಜ್ಯಗಳು ಕ್ರಿಯಾಯೋಜನೆಗಳನ್ನು ಸಲ್ಲಿಸಿ, ಸಮ್ಮತಿ ಪಡೆದು ಯೋಜನೆ ಆರಂಭಿಸಿವೆ. ಆದರೆ ನಮ್ಮ ರಾಜ್ಯ ಕ್ರಿಯಾಯೋಜನೆಯನ್ನೇ ಸಲ್ಲಿಸದೆ ವಿಳಂಬ ಮಾಡುತ್ತಿದೆ. ಕ್ರಿಯಾಯೋಜನೆ ಕೊಡಿ ಎಂದು ಕೇಂದ್ರ ಕೇಳುತ್ತಿದೆ. ನಮ್ಮಲ್ಲಿ ಅದು ಸಿದ್ಧವಾಗಿಲ್ಲ' ಎಂದು ಹಿರಿಯ ಅಧಿಕಾರಿ ಹೇಳಿದರು.

ಆಡಳಿತಾತ್ಮಕ ವೆಚ್ಚ (ಕೋಟಿಗಳಲ್ಲಿ)

₹144.72 ಯೋಜನೆ ಅಭಿವೃದ್ಧಿ ಮತ್ತು ನಿರ್ವಹಣೆ ಕನ್ಸಲ್ಟೆಂಟ್(ಪಿಡಿಎಂಸಿ)	₹13.92 ನಗರ ಮಿಷನ್ ನಿರ್ವಹಣೆ ಘಟಕ(ಸಿಎಂಎಂಯು)
₹10.78 ರಾಷ್ಟ್ರೀಯ ಯೋಜನೆ ನಿಗಾ ಘಟಕ (ಪಿಎಂಯು)	₹8 ಸಾಮರ್ಥ್ಯ ನಿರ್ಮಾಣ; ₹6 ಸುಧಾರಣೆ ಅನುಷ್ಠಾನ
₹3.72 ರಾಜ್ಯ ಮಿಷನ್ ನಿರ್ವಹಣೆ ಘಟಕ (ಎಸ್ಎಂಎಂಯು)	₹1.8 ಇತರೆ ಆಡಳಿತಾತ್ಮಕ ವೆಚ್ಚ
ಒಟ್ಟು (ಅಂದಾಜುಪಟ್ಟಿಯಂತೆ) ₹188.94	ಕೇಂದ್ರ ನಿಗದಿಪಡಿಸಿರುವುದು ₹149.6

ಹೆಚ್ಚು ಮಾಡಬಾರದು ಎಂದೇನೂ ಇಲ್ಲ...

'ಮುಖ್ಯ ಕಾರ್ಯದರ್ಶಿ ಅವರು ನೀಡಿರುವ ಸೂಚನೆಯಂತೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. ನಗರ ನೀರು ಸಂಪರ್ಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸುತ್ತಿದ್ದೇವೆ. ಕೇಂದ್ರ ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಅಂದಾಜುಪಟ್ಟಿ ಹೆಚ್ಚು ಮಾಡಬಾರದೆಂದೇನೂ ಇಲ್ಲ. ಹೆಚ್ಚಾದರೆ ರಾಜ್ಯ ಸರ್ಕಾರ ಕೊಡುತ್ತದೆ. ಇಲ್ಲದಿದ್ದರೆ ಯೋಜನೆವೆಚ್ಚ ಕಡಿಮೆ ಮಾಡಿಕೊಳ್ಳಬೇಕು' ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ಮೋಹನ್ ರಾಜ್ ತಿಳಿಸಿದರು.

ಬಿಜೆಪಿ, ಆರ್‌ಎಸ್‌ಎಸ್ ಕೆಂಗಣ್ಣಿಗೆ ಗುರಿಯಾದ ಕಾಂಗ್ರೆಸ್ ಟ್ವೀಟ್

ಕಿಡಿ ಹಚ್ಚಿದ ಖಾಕಿ ಚಡ್ಡಿ ಚಿತ್ರ

ನವದೆಹಲಿ (ಪಿಟಿಐ): ಬೆಂಕಿ ಹಚ್ಚಿರುವ ಖಾಕಿ ಚಡ್ಡಿಯ ಚಿತ್ರವನ್ನು ಸೋಮವಾರ ಟ್ವಿಟರ್‌ನಲ್ಲಿ ಪ್ರಕಟಿಸಿರುವ ಕಾಂಗ್ರೆಸ್, ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕೆಂಗಣ್ಣಿಗೆ ಗುರಿಯಾಗಿದೆ. 'ಇನ್ನು 145 ದಿನಗಳು ಉಳಿದಿವೆ. ದೇಶವನ್ನು ದ್ವೇಷದ ಸಂಕೋಲೆಯಿಂದ ಬಿಡಿಸುವುದು ಹಾಗೂ ಬಿಜೆಪಿ–ಆರ್‌ಎಸ್‌ಎಸ್ ಮಾಡಿರುವ ಹಾನಿಯನ್ನು ಸರಿಪಡಿಸುವುದು ನಮ್ಮ ಗುರಿ. ಹಂತ ಹಂತವಾಗಿ ಈ ಗುರಿ ಮುಟ್ಟುತ್ತೇವೆ' ಎಂದು ಚಿತ್ರಕ್ಕೆ ಅಡಿಬರಹ ನೀಡಲಾಗಿದೆ. ಇದು ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

ಕಾಂಗ್ರೆಸ್ ಹಿಂಸೆಗೆ ಸ್ಪಷ್ಟ ಪ್ರಚೋದನೆ ನೀಡುತ್ತಿದೆ ಎಂದು ಆರೋಪಿಸಿರುವ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ತಕ್ಷಣ ಪೋಸ್ಟರ್ ತೆಗೆದುಹಾಕುವಂತೆ ಆಗ್ರಹಿಸಿದ್ದಾರೆ. ಕಾಂಗ್ರೆಸ್ ಪಕ್ಷವು ದ್ವೇಷ ಹಬ್ಬಿಸುವ ಮೂಲಕ ಜನರನ್ನು ಒಗ್ಗೂಡಿಸಲು ಯತ್ನಿಸುತ್ತಿದೆ ಎಂದು ಆರ್‌ಎಸ್‌ಎಸ್ ಜಂಟಿ ಪ್ರಧಾನ ಕಾರ್ಯದರ್ಶಿ ಮನಮೋಹನ್ ವೈದ್ಯ ಟೀಕಿಸಿದ್ದಾರೆ.

ಕಾಂಗ್ರೆಸ್‌ನ ಈ ಹಿಂದಿನ ನಾಯಕರು ಸಹ ದ್ವೇಷ ಹಾಗೂ ನಿಂದನೆಯನ್ನು ಅಸ್ತ್ರವಾಗಿ ಬಳಸಿದ್ದರೂ ಸಂಘದ ಏಳ್ಗೆಯನ್ನು ತಡೆಯಲಾಗಲಿಲ್ಲ ಎಂದು ಅವರು ಹೇಳಿದ್ದಾರೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಪ್ರತಿಕ್ರಿಯೆಗೆ ಕಾಂಗ್ರೆಸ್ ಪ್ರಬಲ ತಿರುಗೇಟು ನೀಡಿದೆ. 'ದ್ವೇಷ, ಮತಾಂಧತೆ ಹಾಗೂ ಪೂರ್ವಗ್ರಹದ ಬೆಂಕಿ ಹೊತ್ತಿಸಿದವರು ಅವುಗಳನ್ನು ವಾಪಸ್ ಪಡೆಯಲು ಸಿದ್ಧರಾಗಲೇಬೇಕು' ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಇರಾನಿಗೆ ತಿರುಗೇಟು: ಭಾರತ್ ಜೋಡೊ ಯಾತ್ರೆಗೆ ಜನರಿಂದ ಭಾರಿ ಸ್ಪಂದನೆ ವ್ಯಕ್ತವಾಗಿದ್ದಕ್ಕೆ ಇರಿಸು ಮುರಿಸುಗೊಂಡಿರುವ ಬಿಜೆಪಿಯು ಹಗಲಿರುಳು ಸುಳ್ಳುಗಳನ್ನು ಹೆಣೆಯುತ್ತಿದೆ ಎಂದು ಕಾಂಗ್ರೆಸ್ ಸೋಮವಾರ ತಿರುಗೇಟು ನೀಡಿದೆ. ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದ ಸ್ಮಾರಕಕ್ಕೆ ಭೇಟಿ ನೀಡಬೇಕಿತ್ತು ಎಂದು ಟೀಕಿಸಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಕಾಂಗ್ರೆಸ್ ಮುಖಂಡರು ತರಾಟೆಗೆ ತೆಗೆದುಕೊಂಡಿದ್ದಾರೆ. ಮುಖಂಡರಾದ ಪವನ್ ಖೇರಾ, ಮಾಣಿಕಂ ಟಾಗೋರ್ ಅವರು ರಾಹುಲ್ ಅವರು ವಿವೇಕಾನಂದ ಸ್ಮಾರಕಕ್ಕೆ ಭೇಟಿ ನೀಡಿದ್ದ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಸಿಪಿಎಂ ಟೀಕೆ: ಎಡಪಕ್ಷಗಳ ಆಡಳಿತ ಇರುವ ಕೇರಳದಲ್ಲಿ 19 ದಿನದ ಭಾರತ್ ಜೋಡೊ ಯಾತ್ರೆ ಹಮ್ಮಿಕೊಂಡಿರುವ ಕಾಂಗ್ರೆಸ್, ಬಿಜೆಪಿ ಆಡಳಿತ ಇರುವ ಉತ್ತರ ಪ್ರದೇಶದಲ್ಲಿ ಕೇವಲ 2 ದಿನಗಳಿಗೆ ಯಾತ್ರೆಯನ್ನು ಸೀಮಿತಗೊಳಿಸಿದೆ ಎಂದು ಸಿಪಿಎಂ ಆರೋಪಿಸಿದೆ. ಇದು ಬಿಜೆಪಿ–ಆರ್‌ಎಸ್‌ಎಸ್ ವಿರುದ್ಧದ ಹೋರಾಟದ ಅಚ್ಚರಿಯ ವಿಧಾನ ಎಂದು ಟೀಕಿಸಿದೆ. ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಕೇರಳದಲ್ಲಿ ಎಡಪಕ್ಷಗಳನ್ನು ಬಿಜೆಪಿಯ 'ಎ ಟೀಮ್' ಎಂದು ಲೇವಡಿ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷವು ನಡೆಸುತ್ತಿರುವ 'ಭಾರತವನ್ನು ಒಗ್ಗೂಡಿಸಿ' ಯಾತ್ರೆಯು ಕೇರಳದ ರಾಜಧಾನಿ ತಿರುವನಂತಪುರವನ್ನು ಸೋಮವಾರ ಹಾದು ಹೋಯಿತು. ಅಲ್ಲಿ ಭಾರಿ ಸಂಖ್ಯೆಯ ಜನರು ಯಾತ್ರೆಗೆ ಸೇರಿಕೊಂಡರು ಪಿಟಿಐ ಚಿತ್ರ

ಕೇರಳ: ಭಾರತ್ ಜೋಡೊ ಯಾತ್ರೆಗೆ ಕಿಕ್ಕಿರಿದ ಜನ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಭಾರತ್ ಜೋಡೊ ಯಾತ್ರೆಯು ಕೇರಳದಲ್ಲಿ ಎರಡನೇ ದಿನಕ್ಕೆ ಅಡಿಯಿಟ್ಟಿದ್ದು, ಭಾರಿ ಜನಸ್ಪಂದನ ವ್ಯಕ್ತವಾಗಿದೆ. ನಗರದ ಹೊರವಲಯದ ವೆಲ್ಲಯಾನಿ ಜಂಕ್ಷನ್‌ನಿಂದ ಸೋಮವಾರ ಬೆಳಿಗ್ಗೆ ಯಾತ್ರೆ ಆರಂಭಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ನೋಡಲು ರಸ್ತೆಯ ಎರಡೂ ಬದಿಗಳಲ್ಲಿ ಜನರು ಕಿಕ್ಕಿರಿದು ಸೇರಿದ್ದ ದೃಶ್ಯ ಕಂಡುಬಂದಿತು. ಸಾವಿರಾರು ಜನರು ರಾಹುಲ್ ನೇತೃತ್ವದ ಯಾತ್ರೆಯಲ್ಲಿ ಹೆಜ್ಜೆಹಾಕಿದರು.

ಯಾತ್ರೆಯಲ್ಲಿ ಭಾರಿ ಸಂಖ್ಯೆಯ ಜನರು ಸೇರಿದ್ದಕ್ಕೆ ಹರ್ಷ ವ್ಯಕ್ತಪಡಿಸಿರುವ ರಾಹುಲ್, 'ಪ್ರತಿ ಮುಂಜಾನೆಯೂ ಹೊಸ ಭರವಸೆಯೊಂದಿಗೆ ಆರಂಭವಾಗುತ್ತಿದೆ. ಉತ್ತಮ ನಾಳೆಗಳಿಗಾಗಿ ಭಾರತ ಹಾಗೂ ಯುವ ಜನಾಂಗ ಕಾಯುತ್ತಿದೆ' ಎಂದು ಅವರು ಫೇಸ್‌ಬುಕ್‌ನಲ್ಲಿ ಉಲ್ಲೇಖಿಸಿದ್ದಾರೆ. ರಾಹುಲ್ ಅವರು ರಾಜ್ಯದ ವಯನಾಡ್ ಲೋಕಸಭಾ ಕ್ಷೇತ್ರದ ಸದಸ್ಯರಾಗಿದ್ದಾರೆ.

12 ಕಿಲೋಮೀಟರ್ ದೂರವನ್ನು ಮೂರು ಗಂಟೆಗಳಲ್ಲಿ ಪಾದಯಾತ್ರಿಗಳು ಕ್ರಮಿಸಿದರು. ಸಂಸದರಾದ ಶಶಿ ತರೂರ್, ಕೆ.ಸಿ. ವೇಣುಗೋಪಾಲ್, ಕೇರಳ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ. ಸುಧಾಕರನ್, ಪ್ರತಿಪಕ್ಷದ ನಾಯಕ ವಿ.ಡಿ. ಸತೀಶನ್ ಅವರ ಜತೆ ಮಕ್ಕಳು, ಯುವಜನರು ಹಾಗೂ ವಯಸ್ಸಾದವರೂ ಯಾತ್ರೆಯಲ್ಲಿ ಪಾಲ್ಗೊಂಡರು.

ಕೇರಳದಲ್ಲಿ ಭಾನುವಾರ ಶುರುವಾದ ಭಾರತ್ ಜೋಡೊ ಯಾತ್ರೆಯು ರಾಜ್ಯದ 7 ಜಿಲ್ಲೆಗಳಲ್ಲಿ 450 ಕಿಲೋಮೀಟರ್ ದೂರವನ್ನು 19 ದಿನಗಳಲ್ಲಿ ಕ್ರಮಿಸಲಿದೆ. ಅಕ್ಟೋಬರ್ 1ರಂದು ಯಾತ್ರೆಯು ಕರ್ನಾಟಕವನ್ನು ಪ್ರವೇಶಿಸಲಿದೆ.

ಜೇಬುಗಳ್ಳರ ಕೈಚಳಕ: ಯಾತ್ರೆಯಲ್ಲಿ ಭಾರಿ ಸಂಖ್ಯೆಯ ಜನರು ಸೇರಿದ್ದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡಿರುವ ಜೇಬುಗಳ್ಳರು, ತಮ್ಮ ಕೈಚಳಕ ತೋರಿಸಿದ ಪ್ರಸಂಗಗಳು ನಡೆದಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಜೇಬು ಕತ್ತರಿಸುತ್ತಿದ್ದ ನಾಲ್ಕು ಸದಸ್ಯರ ತಂಡವನ್ನು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿ ಪೊಲೀಸರು ಪತ್ತೆಹಚ್ಚಿದ್ದಾರೆ.

ಸುದ್ದಿ 2 ನಿಮಿಷ

ಶಾ ಬಳಸುವ ಮಫ್ಲರ್ ಬೆಲೆ ₹ 80,000: ಗೆಹಲೋತ್ ಆರೋಪ

ಜೈಪುರ (ಪಿಟಿಐ): 'ಗೃಹ ಸಚಿವ ಅಮಿತ್ ಶಾ ಅವರು ಬಳಸುವ ಮಫ್ಲರ್‌ನ ಬೆಲೆ ₹ 80,000, ಬಿಜೆಪಿಯ ಬಹುತೇಕ ನಾಯಕರು ಸುಮಾರು ₹2.5 ಲಕ್ಷ ಮೌಲ್ಯದ ಸನ್‌ಗ್ಲಾಸ್‌ಗಳನ್ನು ಬಳಸುತ್ತಾರೆ' ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆರೋಪಿಸಿದ್ದಾರೆ.

ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಧರಿಸಿದ್ದ ಟೀ ಶರ್ಟ್ ದರ ಕುರಿತಂತೆ ಬಿಜೆಪಿ ಮುಖಂಡರು ಟೀಕೆ ಮಾಡಿರುವ ಬೆನ್ನಲ್ಲೇ ಗೆಹಲೋತ್ ಈ ಆರೋಪ ಮಾಡಿದ್ದಾರೆ.

ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಯಾತ್ರೆಗೆ ಜನರಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರೆಯುತ್ತಿರುವುದು ಬಿಜೆಪಿಯವರಿಗೆ ದಿಗಿಲು ಮೂಡಿಸಿದೆ ಎಂದು ಅವರು ಹೇಳಿದ್ದಾರೆ.

ಭಾರತ್ ಜೋಡೋ ಕುರಿತು ಬಿಜೆಪಿಯವರಿಗೆ ಇರುವ ಸಮಸ್ಯೆಯಾದರೂ ಏನು? ದುಬಾರಿ ಮೌಲ್ಯದ ಮಫ್ಲರ್, ಸನ್‌ಗ್ಲಾಸ್ ಧರಿಸುವ ಅವರು ರಾಹುಲ್ ಗಾಂಧಿ ಟೀ ಶರ್ಟ್ ಬಗ್ಗೆ ಮಾತನಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಟಿ ಶರ್ಟ್ ಕುರಿತಂತೆ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ. ಪ್ರಧಾನಿ, ಗೃಹ ಸಚಿವರು, ಇತರೆ ನಾಯಕರು ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ರಾಹುಲ್‌ಗಾಂಧಿ ವಿರುದ್ಧ ದಾಳಿಗಿಳಿದಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಮೂಸೆವಾಲಾ ಹತ್ಯೆ: ಮೂರು ರಾಜ್ಯಗಳಲ್ಲಿ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣದಲ್ಲಿ ಭಯೋತ್ಪಾದಕ ಗ್ಯಾಂಗ್‌ನ ಕೈವಾಡ ಇರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ಮೂರು ರಾಜ್ಯಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂಸೆವಾಲಾ ಹತ್ಯೆ ಆರೋಪಿಗಳಾದ ಗೋಲ್ಡಿ ಬ್ರಾರ್ ಮತ್ತು ಜಗ್ಗು ಭಗವಾನ್‌ಪುರಿ ನಿವಾಸ ಸೇರಿದಂತೆ ಪಂಜಾಬ್, ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಶೋಧ ನಡೆಸಲಾಗಿದೆ.

ಗುರುಗ್ರಾಮ ಬಳಿಯ ನಹರ್‌ಪುರ್ ರೂಪಾ ಗ್ರಾಮದಲ್ಲಿ ಕೌಶಲ್ ಚೌಧರಿ ಮತ್ತು ಅವರ ಆಪ್ತ ಅಮಿತ್ ದಾಗರ್ ಹಾಗೂ ಸಂದೀಪ್ ಅವರ ಮನೆಗಳ ಮೇಲೆ ಎನ್‌ಐಎ ಶೋಧ ನಡೆಸಿತು. ಎನ್‌ಐಎ ತಂಡದೊಂದಿಗೆ ಸ್ಥಳೀಯ ಪೊಲೀಸ್ ಸಿಬ್ಬಂದಿ ಜೊತೆಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎನ್‌ಐಎ ತಂಡ ಬೆಳಿಗ್ಗೆ 5.30ರ ಸುಮಾರಿಗೆ ಗುರುಗ್ರಾಮ ತಲುಪಿ, ನಹರ್‌ಪುರ ರೂಪಾ ಗ್ರಾಮದ ಮೂರು ಸ್ಥಳಗಳಲ್ಲಿ ಶೋಧ ನಡೆಸಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆಯು ಪಂಜಾಬ್‌ನಲ್ಲಿ ಪಾಕಿಸ್ತಾನದಿಂದ ಮಾದಕವಸ್ತು ಕಳ್ಳಸಾಗಣೆಯಲ್ಲಿ ತೊಡಗಿರುವ ಆರೋಪದ ಪ್ರಕರಣವನ್ನು ತನಿಖೆ ನಡೆಸುತ್ತಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

16ನೇ ವಾರ್ಷಿಕ ಚಿರಸ್ಮರಣೆ

ಶ್ರೀ ಸುಧಾ ಕೃಷ್ಣಪ್ಪ, ಆನೇಕಲ್
ನಿಧನ: 13.09.2006
ನೀವು ನಮ್ಮನ್ನಗಲಿ ಇಂದಿಗೆ ಹದಿನಾರು ವರ್ಷವಾಯಿತು. ನಿಮ್ಮ ಸವಿನೆನಪೇ ನಮಗೆ ದಿವ್ಯ ಚೇತನ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಸದಾ ಪ್ರಾರ್ಥಿಸುವ ಹಾಗೂ ನಿಮ್ಮ ಸವಿನೆನಪಿನಲ್ಲಿರುವ
ಪತ್ನಿ, ಮಕ್ಕಳು ಕುಟುಂಬ ಹಾಗೂ ಬಂಧು-ಮಿತ್ರರು

ಸೋನಾಲಿ ಸಾವಿನ ಪ್ರಕರಣ: ಸಿಬಿಐ ತನಿಖೆ

ನವದೆಹಲಿ: ಬಿಜೆಪಿ ನಾಯಕಿ ಸೋನಾಲಿ ಫೋಗಾಟ್ ಅವರ ಅನುಮಾನಾಸ್ಪದ ಸಾವಿನ ಪ್ರಕರಣದ ತನಿಖೆಯನ್ನು ಕೇಂದ್ರ ಗೃಹ ಸಚಿವಾಲಯವು ಸೋಮವಾರ ಸಿಬಿಐಗೆ ಹಸ್ತಾಂತರಿಸಿದೆ.

ಸಚಿವಾಲಯದ ಈ ನಿರ್ಧಾರವನ್ನು ಸೋನಾಲಿ ಕುಟುಂಬವು ಸ್ವಾಗತಿಸಿದೆ. ಸೋನಾಲಿ ಅವರ ಸಹೋದರ ರಿಂಕು ಫೋಗಾಟ್, 'ನಮ್ಮ ಕುಟುಂಬವು ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆರಂಭದಿಂದಲೂ ಒತ್ತಾಯಿಸಿತ್ತು' ಎಂದಿದ್ದಾರೆ.

ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕು ಎಂದು ಕೋರಿ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ಸಚಿವಾಲಯವು ತನಿಖೆಯನ್ನು ಸಿಬಿಐಗೆ ನೀಡಿದೆ.

ಪಣಜಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಾವಂತ್ ಅವರು, 'ಗೋವಾ ಪೊಲೀಸರು ಪ್ರಕರಣದ ಕುರಿತು ಅತ್ಯುತ್ತಮವಾಗಿ ತನಿಖೆ ಮಾಡಿದ್ದಾರೆ. ಕೆಲವು ಸುಳಿವುಗಳನ್ನೂ ಪತ್ತೆ ಮಾಡಿದ್ದಾರೆ. ಆದರೆ, ಸೋನಾಲಿ ಅವರ ಮಗಳ ಬೇಡಿಕೆ ಹಾಗೂ ಹರಿಯಾಣದ ಜನತೆಯ ಒತ್ತಾಯದ ಮೇರೆಗೆ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲು ನಾವು ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆದಿದ್ದೇವೆ' ಎಂದು ತಿಳಿಸಿದ್ದಾರೆ.

ಜ್ಞಾನವಾಪಿ: ಅರ್ಜಿ ವಿಚಾರಣೆಗೆ ಅರ್ಹ

ಒಂದನೇ ಪುಟದಿಂದ...

ಮಸೀದಿಯಲ್ಲಿ ಇರುವ ನೀರಿನ ತೊಟ್ಟಿಯಲ್ಲಿ 'ಶಿವಲಿಂಗ' ಪತ್ತೆಯಾಗಿದೆ ಎಂದು ಹಿಂದೂ ದೂರುದಾರರ ಪರ ವಕೀಲರು ಈ ಹಿಂದೆ ಹೇಳಿದ್ದರು. ಅದಾದ ಬಳಿಕ, ಆ ಸ್ಥಳಕ್ಕೆ ಪ್ರವೇಶ ನಿರ್ಬಂಧಿಸಲು ಕೋರ್ಟ್ ಆದೇಶ ಕೊಟ್ಟಿತ್ತು. ಆದರೆ, ಶಿವಲಿಂಗ ಪತ್ತೆಯಾಗಿದೆ ಎಂಬುದನ್ನು ಮಸೀದಿಯ ಪರ ವಕೀಲರು ಅಲ್ಲಗಳೆದಿದ್ದಾರೆ. ಶಿವಲಿಂಗ ಎಂದು ಹೇಳಲಾಗುತ್ತಿರುವ ವಸ್ತುವು ಕಾರಂಜಿ ಎಂದು ಅವರು ಹೇಳಿದ್ದಾರೆ.

ದೂರುದಾರರು ಪೂಜೆಯ ಹಕ್ಕನ್ನು ಮಾತ್ರ ಕೇಳಿ ಅರ್ಜಿ ಸಲ್ಲಿಸಿದ್ದಾರೆ. ಅವರು ಮಸೀದಿಯನ್ನು ದೇಗುಲವಾಗಿ ಪರಿವರ್ತಿಸಬೇಕು ಎಂದು ಕೇಳಿಲ್ಲ. 1993ರವರೆಗೆ ಈ ಮೂರ್ತಿಗೆ ನಿರಂತರವಾಗಿ ಪೂಜೆ ನಡೆಯುತ್ತಿತ್ತು. ಅದಾದ ಬಳಿಕ, ವರ್ಷಕ್ಕೆ ಒಮ್ಮೆ ಪೂಜೆ ನಡೆಯುತ್ತಿತ್ತು ಎಂದು ಕೋರ್ಟ್ ಹೇಳಿದೆ.

'ಇದೊಂದು ಚಾರಿತ್ರಿಕ ದಿನ' ಎಂದು ಹಿಂದೂ ದೂರುದಾರರು ಹೇಳಿದ್ದಾರೆ. 'ಇಡೀ ದೇಶವೇ ಖುಷಿಗೊಂಡಿದೆ. ಪ್ರತಿ ಹಿಂದುವೂ ದೀಪ ಹಚ್ಚಿ ಹರ ಹರ ಮಹಾದೇವ ಎನ್ನಬೇಕು' ಎಂದು ದೂರುದಾರರಲ್ಲಿ ಒಬ್ಬರಾದ ಮಂಜು ವ್ಯಾಸ್ ಹೇಳಿದ್ದಾರೆ. ಮಂಜು ಮತ್ತು ಇತರ ನಾಲ್ವರು ಮಹಿಳೆಯರು 2021ರ ಆಗಸ್ಟ್‌ನಲ್ಲಿ ಈ ಅರ್ಜಿ ಸಲ್ಲಿಸಿದ್ದಾರೆ.

ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ತೀರ್ಪನ್ನು ಶ್ಲಾಘಿಸಿದ್ದಾರೆ. ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಮಸೀದಿ ವಿವಾದವನ್ನೂ ಕೈಗೆತ್ತಿಕೊಳ್ಳಬೇಕಿದೆ ಎಂದು ಅವರು ಹೇಳಿದ್ದಾರೆ.

ವಿವಾದ ಏನು?

ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಜ್ಞಾನವಾಪಿ ಮಸೀದಿ ವಿಚಾರದಲ್ಲಿ ಹಲವು ದಶಕಗಳಿಂದ ವಿವಾದ ಇದೆ. ಅಯೋಧ್ಯೆಯ ರಾಮಜನ್ಮಭೂಮಿ–ಬಾಬರಿ ಮಸೀದಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹಿಂದೂಗಳ ಪರವಾಗಿ ತೀರ್ಪು ನೀಡಿದ ಬಳಿಕ, ಕಾಶಿ ವಿಶ್ವನಾಥ ಮಂದಿರದ ಸಮೀಪ ಇರುವ ಈ ಮಸೀದಿಯನ್ನು 'ವಾಪಸ್ ಪಡೆಯಬೇಕು' ಎಂಬ ಕೂಗು ಪ್ರಬಲವಾಯಿತು.

ಮೊಘಲ್ ದೊರೆ ಔರಂಗಜೇಬನು 17ನೇ ಶತಮಾನದಲ್ಲಿ ದೇವಾಲಯದ ಒಂದು ಭಾಗವನ್ನು ನಾಶ ಮಾಡಿ ಮಸೀದಿ ನಿರ್ಮಿಸಿದ್ದಾನೆ ಎಂದು ಹಿಂದೂಗಳು ಪ್ರತಿಪಾದಿಸುತ್ತಿದ್ದಾರೆ. ಆದರೆ, ಔರಂಗಜೇಬನ ಆಳ್ವಿಕೆಗೆ ಮುನ್ನವೇ ಈ ಮಸೀದಿ ಇತ್ತು. ಅದು ಭೂ ದಾಖಲೆಗಳಲ್ಲಿಯೂ ಇದೆ ಎಂಬುದು ಮುಸ್ಲಿಮರ ವಾದವಾಗಿದೆ.

ಪಕ್ಷದ ಬಗ್ಗೆ ಅಸಮಾಧಾನ ಇಲ್ಲ: ಅಜಿತ್ ಪವಾರ್

ಮುಂಬೈ (ಪಿಟಿಐ): 'ಪಕ್ಷದ ಕುರಿತು ನಾನು ಅಸಮಾಧಾನ ಹೊಂದಿಲ್ಲ ಮತ್ತು ಪಕ್ಷವು ನನ್ನನ್ನು ಕಡೆಗಣಿಸಿಲ್ಲ' ಎಂದು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನಾಯಕ ಅಜಿತ್ ಪವಾರ್ ಅವರು ಸೋಮವಾರ ಸ್ಪಷ್ಟಪಡಿಸಿದರು.

ದೆಹಲಿಯಲ್ಲಿ ಭಾನುವಾರ ಆಯೋಜಿಸಿದ್ದ ಎನ್‌ಸಿಪಿಯ 8ನೇ ರಾಷ್ಟ್ರೀಯ ಸಮಾವೇಶದ ಅಂತ್ಯದ ವೇಳೆ ಅವರು ವೇದಿಕೆಯಲ್ಲಿ ಹಾಜರಿರಲಿಲ್ಲ. ಅವರು ಹೊರನಡೆದು ಹೋಗುತ್ತಿರುವ ದೃಶ್ಯವನ್ನು ಮಾಧ್ಯಮಗಳು ತೋರಿಸಿದ್ದವು. ಅಜಿತ್ ಪವಾರ್ ಹಾಗೂ ಎನ್‌ಸಿಪಿ ಮಹಾರಾಷ್ಟ್ರ ಘಟಕದ ಮುಖ್ಯಸ್ಥ ಜಯಂತ್ ಪಾಟೀಲ್ ಅವರ ಮಧ್ಯೆ ಶೀತಲ ಸಮರ ನಡೆಯುತ್ತಿದೆ ಎಂಬ ಊಹಾಪೋಹಗಳು ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಮಹತ್ವ ನೀಡಲಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಅದು ಕೇವಲ ಶೌಚಾಲಯದ ವಿರಾಮವಾಗಿತ್ತು. ನಾನು ಬೆಳಿಗ್ಗೆಯಿಂದ ವೇದಿಕೆ ಮೇಲೆ ಕುಳಿತಿದ್ದೆ. ಶೌಚಾಲಯಕ್ಕೆ ಹೋಗಬೇಕು ಅನಿಸುವುದು ಸಾಮಾನ್ಯ ವಿಷಯ. ಆದರೆ ಮಾಧ್ಯಮಗಳು ಇದನ್ನೇ ದೊಡ್ಡ ವಿಷಯವನ್ನಾಗಿಸಿವೆ. ಪಕ್ಷ ನನ್ನನ್ನು ಯಾವತ್ತೂ ಕಡೆಗಣಿಸಿಲ್ಲ. ಪಕ್ಷದ ನಾಯಕತ್ವದ ಜೊತೆ ನನಗೆ ಅಸಮಾಧಾನವೂ ಇಲ್ಲ. ಪಕ್ಷ ನನಗೆ ಪ್ರಮುಖ ಹುದ್ದೆಗಳನ್ನು ನೀಡಿದೆ. ನನ್ನನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕನನ್ನಾಗಿ ಮಾಡಿದೆ' ಎಂದು ಅವರು ಹೇಳಿದರು.

ಸಮಾವೇಶದ ಕಡೆಯಲ್ಲಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸಮಾರೋಪ ಭಾಷಣ ಮಾಡುವ ಮುನ್ನ ಅಜಿತ್ ಪವಾರ್ ಅವರು ಭಾಷಣ ಮಾಡಬೇಕಿತ್ತು. ಅವರ ಹೆಸರನ್ನು ಕೂಗಲಾಯಿತು ಆದರೆ ಆ ವೇಳೆ ಅವರು ಸ್ಥಳದಲ್ಲಿ ಉಪಸ್ಥಿತರಿರಲಿಲ್ಲ.

ರಾಮಮಂದಿರ ನಿರ್ಮಾಣಕ್ಕೆ ₹ 1,800 ಕೋಟಿ

ಅಯೋಧ್ಯೆ (ಪಿಟಿಐ): ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರವನ್ನು ನಿರ್ಮಿಸಲು ಅಂದಾಜು ₹1,800 ಕೋಟಿ ವೆಚ್ಚವಾಗಲಿದೆ ಎಂದು ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿರುವ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಚನೆಯಾಗಿರುವ ಟ್ರಸ್ಟ್, ಭಾನುವಾರ ಇಲ್ಲಿನ ಫೈಜಾಬಾದ್ ಸರ್ಕಿಟ್ ಹೌಸ್‌ನಲ್ಲಿ ನಡೆದ ಸುದೀರ್ಘ ಸಭೆಯ ನಂತರ ಮಂದಿರ ನಿರ್ಮಾಣ ರಚನೆಯ ನಿಯಮಗಳು ಮತ್ತು ಕೈಪಿಡಿಗೆ ಅನುಮೋದನೆ ನೀಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225388/ 9611225266

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿ 9980814578, 9980812378

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

29-9-2022,ವಿಮಾನ ಮತ್ತು ಬಸ್ಸಿನಲ್ಲಿ ಚೆನ್ನೈ, ಮಹಾಬಲೇಶ್ವರಂ, ಕಂಚಿ 2ದಿನಗಳ ಪ್ರವಾಸ. 6,750/-. 25-9-2022, ಸಿಗಂದೂರು. ಅನುಗ್ರಹಯಾತ್ರ. 9880079351

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಸಿಎಎ: 4 ವಾರಗಳಲ್ಲಿ ಪ್ರತಿಕ್ರಿಯಿಸಲು ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ: ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳಿಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ 4 ವಾರಗಳ ಗಡುವು ನೀಡಿದೆ.

ಬೇರೆ ಬೇರೆ ಆಯಾಮಗಳಲ್ಲಿ ಸಿಎಎ ಅನ್ನು ವಿರೋಧಿಸಿ ಒಟ್ಟು 200 ಅರ್ಜಿಗಳು ಸಲ್ಲಿಕೆಯಾಗಿವೆ. ಎಲ್ಲಾ ಅರ್ಜಿಗಳನ್ನು ಒಂದೇ ನೆಲೆಯಲ್ಲಿ ವಿಚಾರಣೆ ನಡೆಸುವುದು ಕಷ್ಟವಾಗಲಿದೆ. ಆದ್ದರಿಂದ ಈ ಎಲ್ಲಾ ಅರ್ಜಿಗಳನ್ನು ವಿಷಯ ಆಧಾರಿತವಾಗಿ ಬೇರ್ಪಡಿಸಬೇಕು ಎಂದು ವಿವಿಧ ಅರ್ಜಿದಾರರ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದರು.

ಇದಕ್ಕೆ ಒಪ್ಪಿದ ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್ ಹಾಗೂ ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಅವರಿದ್ದ ಪೀಠವು, ಅರ್ಜಿಗಳನ್ನು ವಿಷಯಾಧಾರಿತವಾಗಿ ಬೇರ್ಪಡಿಸಲು ಕೇಂದ್ರ ಸರ್ಕಾರಕ್ಕೆ ಎರಡು ವಾರಗಳ ಸಮಯ ನೀಡಿತು. ಈ ರೀತಿ ವಿಷಯಾಧಾರಿತವಾಗಿ ಬೇರ್ಪಡಿಸಿದ ಅರ್ಜಿಗಳಿಗೆ ಕೇಂದ್ರವು ಪ್ರತಿಕ್ರಿಯಿಸಬೇಕು ಎಂದು ಹೇಳಿತು.

ಈ ಪ್ರಕರಣವನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಬಹುದು ಎಂದೂ ಸೂಚಿಸಿದ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಅಕ್ಟೋಬರ್ 31ಕ್ಕೆ ನಿಗದಿಪಡಿಸಿದೆ.

ಇ.ಡಿ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ ಮೇನಕಾ ಗಂಭೀರ್

ಕೋಲ್ಕತ್ತ (ಪಿಟಿಐ): ಜಾರಿ ನಿರ್ದೇಶನಾಲಯದ ಆದೇಶದಲ್ಲಿ ನಿರ್ಬಂಧ ಹೇರದಿದ್ದರೂ ಭಾರತದ ಹೊರಗೆ ಪ್ರಯಾಣಿಸುವುದನ್ನು ತಡೆಯಲಾಗಿದೆ ಎಂದು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಸಂಬಂಧಿ ಮೇನಕಾ ಗಂಭೀರ್ ಅವರು ಸೋಮವಾರ ಕೋಲ್ಕತ್ತ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಮೌಶುಮಿ ಭಟ್ಟಾಚಾರ್ಯ ಅವರು ಅರ್ಜಿಯನ್ನು ಈ ವಾರದ ಕೊನೆಯಲ್ಲಿ ವಿಚಾರಣೆಗೆ ತೆಗೆದುಕೊಳ್ಳುವ ನಿರೀಕ್ಷೆಯಿದೆ.

ಇ.ಡಿ ನಿರ್ದೇಶನದ ಮೇರೆಗೆ ಶನಿವಾರ ಸಂಜೆ ಎನ್‌ಎಸ್‌ಸಿ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದೇಶ ಪ್ರಯಾಣಕ್ಕೆ ತಡೆಹಿಡಿಯಲಾಗಿದೆ ಎಂದು ಗಂಭೀರ್ ಅವರು ನ್ಯಾಯಾಂಗ ನಿಂದನೆ ಅರ್ಜಿಯಲ್ಲಿ ಹೇಳಿದ್ದಾರೆ. ನ್ಯಾಯಮೂರ್ತಿ ಭಟ್ಟಾಚಾರ್ಯ ಅವರು ಆ. 30ರಂದು ಟಿಎಂಸಿ ಸಂಸದ ಅಭಿಷೇಕ್ ಪತ್ನಿಯ ಸಹೋದರಿ ಗಂಭೀರ್ ಅವರನ್ನು ಕೋಲ್ಕತ್ತದ ಪ್ರಾದೇಶಿಕ ಕಚೇರಿಯಲ್ಲಿ ಪ್ರಶ್ನಿಸುವಂತೆ ಮತ್ತು ಮುಂದಿನ ವಿಚಾರಣೆಯ ದಿನಾಂಕದವರೆಗೆ ಅವರ ವಿರುದ್ಧ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳದಂತೆ ಕೇಂದ್ರ ಸಂಸ್ಥೆಗೆ ನಿರ್ದೇಶನ ನೀಡಿದ್ದರು.

ಐಪಿಎಸ್ ಅಧಿಕಾರಿ ವರ್ಮಾ ವಜಾ

ಗುಜರಾತ್: ಇಶ್ರಾತ್ ಜಹಾನ್ ಎನ್‌ಕೌಂಟರ್ ಪ್ರಕರಣದ ಸಿಬಿಐ ತನಿಖಾಧಿಕಾರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಿವೃತ್ತಿಗೆ ಒಂದು ತಿಂಗಳಿರುವಾಗ ಸೇವೆಯಿಂದ ವಜಾ
- ಅಂತರರಾಷ್ಟ್ರೀಯ ಸಂಬಂಧಕ್ಕೆ ಧಕ್ಕೆ ತಂದ ಪ್ರಮುಖ ಆರೋಪ

ಅಹಮದಾಬಾದ್: ಇಶ್ರಾತ್ ಜಹಾನ್ ಎನ್‌ಕೌಂಟರ್ ಪ್ರಕರಣದಲ್ಲಿ ಸಿಬಿಐ ತನಿಖಾ ತಂಡದ ನೇತೃತ್ವ ವಹಿಸಿದ್ದ ಗುಜರಾತ್ ಕೇಡರ್‌ನ ಐಪಿಎಸ್ ಅಧಿಕಾರಿ ಸತೀಶ್ ಚಂದ್ರ ವರ್ಮಾ ಅವರನ್ನು ಅವರ ನಿವೃತ್ತಿಗಿಂತ ಒಂದು ತಿಂಗಳು ಮೊದಲೇ ಸೇವೆಯಿಂದ ವಜಾಗೊಳಿಸಲಾಗಿದೆ. ಇದೇ 30ರಂದು ಅವರು ನಿವೃತ್ತಿ ಆಗಬೇಕಿತ್ತು.

ಇಲಾಖಾ ಪ್ರಕ್ರಿಯೆಯ ವಿವಿಧ ಕಾರಣಗಳಿಗಾಗಿ ಅವರನ್ನು ಸರ್ಕಾರ ಆಗಸ್ಟ್ 30ರಂದು ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ. 'ದೇಶದ ಅಂತರರಾಷ್ಟ್ರೀಯ ಸಂಬಂಧಗಳನ್ನು ಹದಗೆಡಿಸುವ ನಿಟ್ಟಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ' ಕಾರಣವೂ ಸೇರಿದಂತೆ ಹಲವು ಕಾರಣಗಳಿಗಾಗಿ ವರ್ಮಾ ಅವರನ್ನು ವಜಾಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ವರ್ಮಾ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ರಾಜ್ಯ ಸರ್ಕಾರದ ಅಧಿಕಾರಿಗಳು ಈ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. 'ಈ ವಿಷಯ ನ್ಯಾಯಾಲಯದಲ್ಲಿರುವ ಕಾರಣ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ವರ್ಮಾ ಅವರ ನಿಕಟವರ್ತಿಯೊಬ್ಬರು ತಿಳಿಸಿದ್ದಾರೆ.

ವರ್ಮಾ ಅವರನ್ನು ವಜಾಗೊಳಿಸುವ ಆದೇಶವನ್ನು ದೆಹಲಿ ಹೈಕೋರ್ಟ್ ವರ್ಷದಿಂದ ತಡೆಹಿಡಿದಿತ್ತು. ವಜಾ ಆದೇಶದ ಜಾರಿಗೆ ಕೋರಿ ಕೇಂದ್ರ ಸರ್ಕಾರ ಸೆ. 1ರಂದು ಅರ್ಜಿ ಸಲ್ಲಿಸಿತ್ತು. ಅದಕ್ಕೆ ಹೈಕೋರ್ಟ್ ಸೆ. 7ರಂದು ಅನುಮತಿ ನೀಡಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಆದೇಶವನ್ನು ವರ್ಮಾ ಅವರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

19 ವರ್ಷದ ಯುವತಿ ಇಶ್ರಾತ್ ಜಹಾನ್, ಆಕೆಯ ಸ್ನೇಹಿತ ಜಾವೆದ್ ಶೇಕ್ ಉರುಫ್ ಪ್ರಾಣೇಶ್ ಪಿಳ್ಳೈ ಮತ್ತು ಇಬ್ಬರು ಪಾಕಿಸ್ತಾನಿ ಪ್ರಜೆಗಳನ್ನು ಅಹಮದಾಬಾದ್ ಹೊರವಲಯದಲ್ಲಿ 2004ರಲ್ಲಿ ಎನ್‌ಕೌಂಟರ್ ಮೂಲಕ ಹತ್ಯೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದವರು ಈಗಿನ ಪ್ರಧಾನಿ ನರೇಂದ್ರ ಮೋದಿ.

ಇದು ನಕಲಿ ಎನ್‌ಕೌಂಟರ್ ಎಂದು ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿದ್ದರೂ, ಈ ಕುರಿತು ಯಾವುದೇ ವಿಚಾರಣೆ ನಡೆಯಲಿಲ್ಲ. 2010–11ರಲ್ಲಿ ಗುಜರಾತ್ ಸರ್ಕಾರವು ಇಲಾಖೆ ಪ್ರಕರಣಗಳ ಮೇರೆಗೆ ವರ್ಮಾ ಅವರಿಗೆ ಬಡ್ತಿಯನ್ನು ನಿರಾಕರಿಸಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿದಾರರ ಪರ ವಕೀಲರ ವಾದ

ಹಿಜಾಬ್ ಹೆಸರಿನಲ್ಲಿ ಕಸಿದ ಶಿಕ್ಷಣದ ಹಕ್ಕು

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲೆಗಳಲ್ಲಿ ಹಿಜಾಬ್ ಧರಿಸುವ ಮೂಲಕ ವಿದ್ಯಾರ್ಥಿನಿಯರು ಯಾವುದೇ ಅಪರಾಧ ಎಸಗಿಲ್ಲ. ಆದರೂ ಅವರ ಶಿಕ್ಷಣ ಸೇರಿದಂತೆ ಎಲ್ಲ ಹಕ್ಕುಗಳನ್ನು ಕಸಿಯಲಾಗಿದೆ ಎಂದು ವಿದ್ಯಾರ್ಥಿಗಳ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದಾರೆ.

ಹಿಜಾಬ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠದ ಎದುರು ವಾದ ಮಂಡಿಸಿದ ಹಿರಿಯ ವಕೀಲ ಯೂಸುಫ್ ಮುಚ್ಚಾಲ, 'ಈ ವಿದ್ಯಾರ್ಥಿಗಳು ಏನು ಅಪರಾಧ ಎಸಗುತ್ತಿದ್ದಾರೆ. ಕೇವಲ ತಲೆಯ ಮೇಲೆ ಒಂದು ತುಂಡು ಬಟ್ಟೆ ಹಾಕಿಕೊಳ್ಳಲು ಅನುಮತಿ ಕೇಳಿದ್ದಕ್ಕೆ ಅವರಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗುತ್ತಿದೆ. ಹಿಜಾಬ್ ಧರಿಸಿದವರನ್ನು ವಿಚಿತ್ರ ಎಂಬಂತೆ ನೋಡುವ ಬದಲು ಗೌರವದಿಂದ ಕಾಣಬೇಕು' ಎಂದರು.

'ಇಲ್ಲಿಯವರೆಗೆ ಅನೇಕ ವಿದ್ಯಾರ್ಥಿನಿಯರು ಯಾವುದೇ ಅಡೆತಡೆ ಇಲ್ಲದೆ ಶಾಲೆಗಳಲ್ಲಿ ಹಿಜಾಬ್ ಧರಿಸುತ್ತಿದ್ದರು' ಎಂದ ಅವರು, 'ಹೈಕೋರ್ಟ್ ಕುರಾನ್ ಅನ್ನು ಪರಿಗಣನೆಗೆ ತೆಗೆದುಕೊಂಡು ಹಿಜಾಬ್ ಒಂದು ಅಗತ್ಯ ಧಾರ್ಮಿಕ ಪದ್ಧತಿ ಹೌದೇ ಅಲ್ಲವೇ ಎಂಬುದನ್ನು ವಿಚಾರಣೆ ನಡೆಸಬೇಕಿತ್ತು' ಎಂದರು.

ಈ ವೇಳೆ ಪೀಠವು, ಅರ್ಜಿದಾರರು ಇದೊಂದು ಅಗತ್ಯ ಧಾರ್ಮಿಕ ಪದ್ಧತಿ ಎಂದು ಸ್ಪಷ್ಟಪಡಿಸಿದ್ದರಿಂದ ಹೈಕೋರ್ಟ್‌ಗೆ ಆಯ್ಕೆ ಇರಲಿಲ್ಲ ಎಂದಿತು.

ಕೆ.ಎಸ್.ಪುಟ್ಟಸ್ವಾಮಿ ಪ್ರಕರಣದಲ್ಲಿ ಖಾಸಗಿತನದ ಹಕ್ಕಿನ ಕುರಿತು ಉಲ್ಲೇಖಿಸಿದ ವಕೀಲರು, ವಿದ್ಯಾರ್ಥಿಗಳ ಪ್ರಜ್ಞೆ, ಖಾಸಗಿತನ, ಗೌರವ ಹಾಗೂ ಶಿಕ್ಷಣದ ಹಕ್ಕಿನ ಉಲ್ಲಂಘನೆ ಆಗಿದೆ. ಏಕೆಂದರೆ, ಉಡುಪಿನ ಆಯ್ಕೆ ಕೂಡಾ ಖಾಸಗಿತನದ ಹಕ್ಕಿನ ಭಾಗ ಎಂದರು.

'ಈ ಪ್ರಕರಣವನ್ನು ಜನರ ಸಂವೇದನೆಯನ್ನು ಜಾಗೃತಗೊಳಿಸುವ ದೃಷ್ಟಿಯಿಂದ ನೋಡಬೇಕಿದೆ. ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆಯನ್ನು ಪ್ರೋತ್ಸಾಹಿಸಬೇಕಿದೆ. ಟರ್ಬನ್ (ಪಗಡಿ) ಧರಿಸುವುದನ್ನು ಒಪ್ಪುವುದಾದರೆ, ಹಿಜಾಬ್‌ಗೆ ವಿರೋಧ ಏಕೆ. ಇಂತಹ ತಾರತಮ್ಯ ಏಕೆ. ಹಿಜಾಬ್ ಧರಿಸುವುದರಿಂದ ಶಾಂತಿ ಕದಡುವುದಿಲ್ಲ' ಎಂದರು.

ಇದು ಸಂಸ್ಕೃತಿ: ಸಲ್ಮಾನ್ ಖುರ್ಷಿದ್

ಹಿರಿಯ ವಕೀಲ ಸಲ್ಮಾನ್ ಖುರ್ಷಿದ್ ವಾದ ಮಂಡಿಸಿ, 'ಉತ್ತರ ಭಾರತದಲ್ಲಿ ಅಥವಾ ಉತ್ತರ ಪ್ರದೇಶದಲ್ಲಿ ಗುಂಗಟ್ (ತಲೆ ಮೇಲೆ ಸೆರಗು ಹಾಕುವುದು) ಅತೀ ಅಗತ್ಯ ಪದ್ಧತಿಯಾಗಿದೆ. ಇದು ಸಂಸ್ಕೃತಿ ಎಂದು ಭಾವಿಸಲಾಗುತ್ತದೆ. ಕೆಲವು ದೇಶಗಳ ಮಸೀದಿಗಳಲ್ಲಿ ಜನರು ತಮ್ಮ ತಲೆಯನ್ನು ಬಟ್ಟೆಯಿಂದ ಮುಚ್ಚುವುದಿಲ್ಲ. ಆದರೆ, ಭಾರತದಲ್ಲಿ ಪ್ರತಿಯೊಬ್ಬರೂ ತಲೆ ಮೇಲೆ ಬಟ್ಟೆ ಧರಿಸುತ್ತಾರೆ. ಇದು ಇಲ್ಲಿನ ಸಂಸ್ಕೃತಿ' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,833
ಇಂದಿನ ಅಂತ್ಯ	17,936
▲	103
ದಿನದ ಗರಿಷ್ಠ	17,980

ವಿನಿಮಯ ದರ

$ ಡಾಲರ್	79.53
£ ಪೌಂಡ್	92.91
€ ಯುರೊ	80.73
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1650)
ಸೋಯಾ (ರಿಫೈನ್ಡ್)	₹1190 (1190)
ಸೂರ್ಯಕಾಂತಿ (ರಿಫೈನ್ಡ್)	₹1370 (1380)
ಪಾಮೋಲಿನ್	₹935 (940)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹130

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹373-690
ದ್ವಿತಳಿ (ಕೆ.ಜಿ)	₹426-823

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹800-1200
ಸಣ್ಣ	₹400-800

ಕೆಎಂಎಫ್‌ನ 'ಕ್ಷೀರಭಾಗ್ಯ' ಯೋಜನೆಗೆ ಪ್ರಶಸ್ತಿ

ನಂದಿನಿ ಮಳಿಗೆ: ಪ್ರಧಾನಿ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರು ಕೆಎಂಎಫ್‌ನ ನಂದಿನಿ ಉತ್ಪನ್ನಗಳ ಪ್ರದರ್ಶನಕ್ಕೆ ಭೇಟಿ ನೀಡಿದರು. ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ ಇದ್ದಾರೆ

ನವದೆಹಲಿ: ಕಳೆದ ಐದು ದಶಕಗಳಿಂದ ರೈತರ ಸೇವೆ ಮಾಡುತ್ತಿರುವ ಕೆಎಂಎಫ್‌ನ ಕಾರ್ಯ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ತರಪ್ರದೇಶದ ಗ್ರೇಟರ್ ನೋಯಿಡಾದಲ್ಲಿ ಸೋಮವಾರ ಆರಂಭವಾದ ವಿಶ್ವ ಡೇರಿ ಶೃಂಗ ಸಭೆಯಲ್ಲಿ ಕೆಎಂಎಫ್‌ನ ನಂದಿನಿ ಉತ್ಪನ್ನಗಳ ಮಳಿಗೆಗೆ ಭೇಟಿ ನೀಡಿದ ಅವರು ಮಾತನಾಡಿದರು.

ಹೈನುಗಾರಿಕೆಯನ್ನೇ ಅವಲಂಬಿತರಾಗಿರುವ ರೈತ ಸಮುದಾಯ ಅದರಲ್ಲೂ ವಿಶೇಷವಾಗಿ ರೈತ ಮಹಿಳೆಯರ ಆರ್ಥಿಕ ಸ್ವಾವಲಂಬಿ ಬದುಕಿಗೆ ವಿಶೇಷ ಯೋಜನೆಗಳನ್ನು ರೂಪಿಸುವಂತೆ ಮೋದಿ ಅವರು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರಿಗೆ ಸಲಹೆ ನೀಡಿದರು.

ಕೆಎಂಎಫ್ ಕಾರ್ಯಚಟುವಟಿಕೆಗಳ ಬಗ್ಗೆ ಬಾಲಚಂದ್ರ ಜಾರಕಿಹೊಳಿ ಮಾಹಿತಿ ನೀಡಿ, 'ಕರ್ನಾಟಕದಲ್ಲಿ 15,043 ಹಾಲು ಉತ್ಪಾದಕರ ಸಹಕಾರಿ ಸಂಘಗಳಿದ್ದು, 16 ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳನ್ನು ಹೊಂದಿದೆ. 26 ಲಕ್ಷ ಹಾಲು ಉತ್ಪಾದಕ ಸದಸ್ಯರಿದ್ದು, 10 ಲಕ್ಷ ಹಾಲು ಸರಬರಾಜುದಾರರು ಇದ್ದಾರೆ. 91.88 ಲಕ್ಷ ಕೆ.ಜಿ ಗರಿಷ್ಠ ಶೇಖರಣೆ ಹೊಂದಿದೆ. ಪ್ರತಿದಿನ ₹30 ಕೋಟಿಯನ್ನು ರೈತರಿಗೆ ಹಣ ಪಾವತಿ ಮಾಡುತ್ತಿದೆ' ಎಂದರು.

ಕೆಎಂಎಫ್ ಆಡಳಿತ ಮಂಡಳಿ ಸದಸ್ಯರು, ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ಮತ್ತು ಸದಸ್ಯರು, ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ, ಒಕ್ಕೂಟಗಳ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಈ ವೇಳೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಕೆಎಂಎಫ್‌ನ 'ಕ್ಷೀರಭಾಗ್ಯ' ಯೋಜನೆಯು ಪ್ರಶಸ್ತಿ ಗಳಿಸಿತು.

ಎಲೆಕ್ಟ್ರಿಕ್ ಹೆದ್ದಾರಿ ಅಭಿವೃದ್ಧಿ: ಗಡ್ಕರಿ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ಭಾರಿ ಟ್ರಕ್‌ಗಳು ಹಾಗೂ ಬಸ್ಸುಗಳ ಚಾರ್ಜಿಂಗ್‌ಗೆ ಅವಕಾಶ ಇರುವ, ಸೌರ ವಿದ್ಯುತ್ ಸಂಪರ್ಕ ಇರುವ ಎಲೆಕ್ಟ್ರಿಕ್ ಹೆದ್ದಾರಿಗಳ ಅಭಿವೃದ್ಧಿಯ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಸೌರವಿದ್ಯುತ್ ಹಾಗೂ ಪವನ ವಿದ್ಯುತ್ ಆಧಾರಿತ ಚಾರ್ಜಿಂಗ್ ವ್ಯವಸ್ಥೆಗೆ ಉತ್ತೇಜನ ನೀಡುತ್ತಿದೆ' ಎಂದಿದ್ದಾರೆ. ಎಲೆಕ್ಟ್ರಿಕ್ ಹೆದ್ದಾರಿ ಎಂದರೆ ಸಾಮಾನ್ಯವಾಗಿ, ಚಲಿಸುವ ವಾಹನಗಳಿಗೆ ವಿದ್ಯುತ್ ಪೂರೈಸುವ ವ್ಯವಸ್ಥೆ ಇರುವ ಮಾರ್ಗ ಎಂಬ ಅರ್ಥವಿದೆ. ರಾಷ್ಟ್ರೀಯ ಹೆದ್ದಾರಿಗಳ ಅಕ್ಕಪಕ್ಕ ಒಟ್ಟು 3 ಕೋಟಿ ಸಸಿಗಳನ್ನು ನೆಡಲಾಗುವುದು ಎಂದು ಹೇಳಿದ್ದಾರೆ.

ಸೆಪ್ಟೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ 2 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಕುಸಿದ ವಿದೇಶಿ ವಿನಿಮಯ ಸಂಗ್ರಹ

ಮುಂಬೈ (ರಾಯಿಟರ್ಸ್): ಭಾರತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು 2020ರ ಅಕ್ಟೋಬರ್ ನಂತರದ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ, ಸೆಪ್ಟೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹ 44.02 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಆಗಸ್ಟ್ 26ಕ್ಕೆ ಕೊನೆಗೊಂಡ ವಾರಕ್ಕೆ ಹೋಲಿಸಿದರೆ ಸೆಪ್ಟೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹ 63,680 ಕೋಟಿಯಷ್ಟು ಕಡಿಮೆ ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯ

ಹೆಚ್ಚಾಗುತ್ತಿರುವುದರಿಂದ ಭಾರತದ ಕರೆನ್ಸಿಯ ಮೌಲ್ಯ ಕುಸಿಯುವುದನ್ನು ತಡೆಯಲು ಆರ್‌ಬಿಐ ಮಧ್ಯಪ್ರವೇಶ ಮಾಡುತ್ತಿರುವುದೇ ಮೀಸಲು ಸಂಗ್ರಹದಲ್ಲಿ ಭಾರಿ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಸೆಪ್ಟೆಂಬರ್ 2ಕ್ಕೆ ಕೊನೆಗೊಂಡ ವಾರದಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ದಾಖಲೆಯ ಕನಿಷ್ಠ ಮಟ್ಟವಾದ ₹ 80.12ಕ್ಕೆ ಇಳಿಕೆ ಕಂಡಿತ್ತು. ಅಮೆರಿಕದ ಫೆಡರಲ್ ರಿಸರ್ವ್ ಹಣಕಾಸು ನೀತಿಯನ್ನು ಇನ್ನಷ್ಟು ಬಿಗಿಗೊಳಿಸಲಿದೆ ಎನ್ನುವ ನಿರೀಕ್ಷೆಯಿಂದಾಗಿ ರೂಪಾಯಿ ಮೌಲ್ಯವು ಈ ಪ್ರಮಾಣದ ಕುಸಿತ ಕಂಡಿತು.

ಮೀಸಲು ಸಂಗ್ರಹದಲ್ಲಿನ ಕುಸಿತಕ್ಕೆ ಆರ್‌ಬಿಐ ಮಧ್ಯಪ್ರವೇಶ ಒಂದೇ ಕಾರಣ ಅಲ್ಲ. ಮಾರುಕಟ್ಟೆ ಮೌಲ್ಯ ಮತ್ತು ವಾಯಿದಾ ವಹಿವಾಟು ಮೆಚ್ಯುರಿಟಿಯೂ ಪರಿಣಾಮ ಬೀರಿರುವ ಸಾಧ್ಯತೆ ಇದೆ ಎಂದು ಕ್ವಾಂಟ್‌ಇಕೊ ರಿಸರ್ಚ್‌ನ ಆರ್ಥಿಕ ತಜ್ಞ ವಿವೇಕ್ ಕುಮಾರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಕುಸಿತ ತಡೆಯಲು ಡಾಲರ್ ಖರೀದಿಸುವುದನ್ನು ಆರ್‌ಬಿಐ ಮುಂದುವರಿಸಲಿದೆ. ಸರಕುಗಳ ದರದ ಇಳಿಮುಖ ಚಲನೆ ಮುಂದುವರಿಯುವ ನಿರೀಕ್ಷೆ ಇದೆ. ಡಾಲರ್ ಮೌಲ್ಯ ಇನ್ನಷ್ಟು ಏರಿಕೆ ಆಗಲು ಹೆಚ್ಚಿನ ಕಾರಣಗಳು ಇರುವಂತೆ ಕಂಡುಬರುತ್ತಿಲ್ಲ ಎಂದು ಕುಮಾರ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಅಮೆರಿಕದ ಡಾಲರ್ ಮೌಲ್ಯ ವೃದ್ಧಿ
- ಹಣಕಾಸು ನೀತಿ ಇನ್ನಷ್ಟು ಬಿಗಿಗೊಳಿಸಲಿರುವ ಅಮೆರಿಕದ ಫೆಡರಲ್ ರಿಸರ್ವ್
- ಆರ್‌ಬಿಐನಿಂದ ಡಾಲರ್ ಖರೀದಿ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000

ಮುಂಬೈ ಧಾರಣೆ

ಶೇಂಗಾ

12–9–2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1660)
ಒಂದು ವಾರದ ಡೆಲಿವರಿ	1665 (1655)
ಸೋಯಾ ಕಚ್ಚಾ	1105 (1100)
ಪಾಮ್ ವಾರದ ಡೆಲಿವರಿ	933 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (50,550)
ಬೆಳ್ಳಿ ಕೆ.ಜಿ 56,000 (54,600)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಕುಮಟ	
ಚಿಪ್ಪು	31069-34089
ಕೋಕ	21509-33999
ಫ್ಯಾಕ್ಟರಿ	12099-24039
ಹಳೆಚಾಲಿ	44099-44099
ಹೊಸಚಾಲಿ	39019-44009
ಪುತ್ತೂರು	
ಹೊಸತು	34500-47500
ಸಾಗರ	
ಬಿಳಿಗೋಟು	23869-34888
ಚಾಲಿ	37699-41604
ಕೋಕ	11269-36499
ರಾಶಿ	38989-52937
ಸಿಪ್ಪೆಗೋಟು	6029-23400
ಶಿವಮೊಗ್ಗ	
ಬೆಟ್ಟೆ	50199-55669
ಗೊರಬಲು	17009-39490
ರಾಶಿ	48229-52599
ಸರಕು	60009-78196
ಸಿದ್ದಾಪುರ	
ಬಿಳಿಗೋಟು	28899-35699
ಚಾಲಿ	39599-44340
ಕೋಕ	27789-36299
ಕೆಂಪುಗೋಟು	34700-38416
ರಾಶಿ	50899-52339
ತಟ್ಟಿಬೆಟ್ಟೆ	42809-51089
ಶಿರಸಿ	
ಬೆಟ್ಟೆ	34601-47618
ಬಿಳಿಗೋಟು	28799-37899
ಚಾಲಿ	39529-44939
ಕೆಂಪುಗೋಟು	22011-36399
ರಾಶಿ	46109-52699
ಯಲ್ಲಾಪುರ	
ಬಿಳಿಗೋಟು	24009-35699
ಚಾಲಿ	39299-44601
ಕೋಕ	18099-32799
ಕೆಂಪುಗೋಟು	29618-37125
ರಾಶಿ	50199-55356
ತಟ್ಟಿಬೆಟ್ಟೆ	43140-48819

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16250	223.25 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4500	4700	2238 ಡಾಲರ್ಸ್

ಮತ್ತೆ ಏರಿಕೆಯ ಹಾದಿಗೆ ಚಿಲ್ಲರೆ ಹಣದುಬ್ಬರ

ಒಂದನೇ ಪುಟದಿಂದ

ಜುಲೈನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.71ರಷ್ಟಾಗಿತ್ತು. ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಶೇ 5.3ರಷ್ಟು ಇತ್ತು. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಹಣಕಾಸು ನೀತಿ ಸಮಿತಿಯ ಸಭೆಯ ಈ ತಿಂಗಳ 28ರಿಂದ 30ರವರೆಗೆ ಸಭೆ ನಡೆಸಲಿದೆ. ಈ ಸಭೆಯಲ್ಲಿ ರೆಪೊ ದರ ಏರಿಕೆ ಕುರಿತು ತೀರ್ಮಾನವಾಗುತ್ತದೆ.

ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ಈ ವರ್ಷದಲ್ಲಿ ರೆಪೊ ದರವನ್ನು ಒಟ್ಟು ಶೇ 1.40ರಷ್ಟು ಹೆಚ್ಚಿಸಿದೆ. 'ಸೆಪ್ಟೆಂಬರ್ ತಿಂಗಳ ಸಭೆಯಲ್ಲಿ ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು ಶೇ 0.50ರಷ್ಟು ಹೆಚ್ಚಿಸುವ ನಿರೀಕ್ಷೆ ಇದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

'ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಮೂಲಕ, ಠೇವಣಿಗಳಿಗೆ ಈಗ ಸಿಗುತ್ತಿರುವ ನಕಾರಾತ್ಮಕ ವಾಸ್ತವ ಬಡ್ಡಿಯ ಸಮಸ್ಯೆಯನ್ನು ಪರಿಹರಿಸಬಹುದು. ಅಕ್ಟೋಬರ್ ನಂತರದಲ್ಲಿ ಹಣದುಬ್ಬರ ಪ್ರಮಾಣವು ಕಡಿಮೆ ಆಗಬಹುದು' ಎಂದು ಆರ್‌ಬಿಐ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಮೃದುಲ್ ಸಗ್ಗರ್ ಹೇಳಿದ್ದಾರೆ.

ಹಣದುಬ್ಬರ ಪ್ರಮಾಣವನ್ನು ನಿರ್ಧರಿಸಲು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ನಗರ ಪ್ರದೇಶಗಳ 1,114 ಮಾರುಕಟ್ಟೆಗಳು ಹಾಗೂ ಗ್ರಾಮೀಣ ಪ್ರದೇಶಗಳ 1,181 ಮಾರುಕಟ್ಟೆಗಳಿಂದ ಅಂಕಿ–ಅಂಶಗಳನ್ನು ಸಂಗ್ರಹಿಸಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಚಿಲ್ಲರೆ ಹಣದುಬ್ಬರವು ಶೇ 7.15ರಷ್ಟಿದೆ, ನಗರ ಪ್ರದೇಶಗಳಲ್ಲಿ ಶೇ 6.72ರಷ್ಟಿದೆ.

ಸೆನ್ಸೆಕ್ಸ್ 322 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಐ.ಟಿ ಮತ್ತು ಇಂಧನ ವಲಯದ ಷೇರುಗಳು ಉತ್ತಮ ಗಳಿಕೆ ಕಂಡುಕೊಂಡವು. ಇದರಿಂದಾಗಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 322 ಅಂಶ ಹೆಚ್ಚಾಗಿ 60,115 ಅಂಶಗಳಿಗೆ ತಲುಪಿತು.

ಕೈಗಾರಿಕಾ ಉತ್ಪಾದನೆ 4 ತಿಂಗಳ ಕನಿಷ್ಠ

ತಗ್ಗಿದ ತಯಾರಿಕೆ, ವಿದ್ಯುತ್, ಗಣಿ ವಲಯಗಳ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ಜುಲೈನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದ್ದು, ಶೇಕಡ 2.4ರಷ್ಟು ಆಗಿದೆ.

ಮಾರ್ಚ್‌ನಲ್ಲಿ ವಲಯದ ಬೆಳವಣಿಗೆಯು ಶೇ 2.2ಕ್ಕೆ ಇಳಿಕೆಯಾಗಿತ್ತು. ಅದಾದ ನಂತರದ ಕನಿಷ್ಠ ಮಟ್ಟದ ಬೆಳವಣಿಗೆ ಜುಲೈನಲ್ಲಿ ದಾಖಲಾಗಿದೆ. ತಯಾರಿಕೆ, ವಿದ್ಯುತ್ ಮತ್ತು ಗಣಿ ವಲಯಗಳ ಬೆಳವಣಿಗೆಯಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣ.

ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧರಿಸಿದ ಕೈಗಾರಿಕಾ ಬೆಳವಣಿಗೆಯು 2021ರ ಜುಲೈನಲ್ಲಿ ಶೇ 11.5ರಷ್ಟು ಆಗಿತ್ತು.

ತಯಾರಿಕಾ ವಲಯದ ಬೆಳವಣಿಗೆಯು ಕಳೆದ ವರ್ಷದ ಜುಲೈನಲ್ಲಿ ಶೇ 10.5ರಷ್ಟು ಇತ್ತು. ಇದು ಈ ವರ್ಷದ ಜುಲೈನಲ್ಲಿ ಶೇ 3.2ಕ್ಕೆ ಕುಗ್ಗಿದೆ



ವಿದ್ಯುತ್ ವಲಯದ ಬೆಳವಣಿಗೆಯು ಶೇ 11.1ರಷ್ಟು ಇದ್ದಿದ್ದು ಶೇ 2.3ಕ್ಕೆ ಇಳಿಕೆ ಆಗಿದೆ. ಗಣಿ ವಲಯದ ಬೆಳವಣಿಗೆ 19.5ರಷ್ಟು ಇದ್ದಿದ್ದು ಶೇ 3.3ಕ್ಕೆ ಕುಸಿದಿದೆ. ಬಂಡವಾಳ ಸರಕುಗಳ ಬೆಳವಣಿಗೆಯು ಶೇ 30.3ರಿಂದ ಶೇ 5.8ಕ್ಕೆ ಇಳಿಕೆ ಆಗಿದೆ.

ಸೂಚ್ಯಂಕಕ್ಕೆ ಶೇ 34ರಷ್ಟು ಕೊಡುಗೆ ನೀಡುವ ಪ್ರಾಥಮಿಕ ಸರಕುಗಳ ಬೆಳವಣಿಗೆಯು ಶೇ 2.5ರಷ್ಟು ಆಗಿದೆ. ಹಿಂದಿನ ಅವಧಿಯಲ್ಲಿ ಶೇ 12.4ರಷ್ಟು ಬೆಳವಣಿಗೆ ಕಂಡಿತ್ತು.

ಏಪ್ರಿಲ್–ಜುಲೈ ಅವಧಿಯಲ್ಲಿ ಐಐಪಿ ಶೇ 10ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 33.9ರಷ್ಟು ಬೆಳವಣಿಗೆ ದಾಖಲಾಗಿತ್ತು.

ಐಪಿಒ: ಈ ವರ್ಷ ಸರಾಸರಿ ಶೇ 50 ಲಾಭ

ಮುಂಬೈ (ಪಿಟಿಐ): 2022ರಲ್ಲಿ ಐಪಿಒಗಳಲ್ಲಿ ಹಣ ತೊಡಗಿಸಿದವರಿಗೆ ಸರಾಸರಿ ಶೇಕಡ 50ರಷ್ಟು ಲಾಭ ಸಿಕ್ಕಿದೆ ಎಂದು ಅಧ್ಯಯನವೊಂದು ತಿಳಿಸಿದೆ. ಈ ವರ್ಷ ಒಟ್ಟು 51 ಕಂಪನಿಗಳು ಐಪಿಒ ಮೂಲಕ ₹ 38,155 ಕೋಟಿ ಬಂಡವಾಳ ಸಂಗ್ರಹಿಸಿವೆ.

ಐಪಿಒದಲ್ಲಿ ಈ ವರ್ಷದಲ್ಲಿ ನಷ್ಟ ಉಂಟುಮಾಡಿದ ಕಂಪನಿಗಳ ಪ್ರಮಾಣ ಶೇ 40ರಷ್ಟು, ಶೇ 20ಕ್ಕಿಂತ ಹೆಚ್ಚು ಲಾಭ ನೀಡಿದ ಕಂಪನಿಗಳ ಪ್ರಮಾಣ ಶೇ 45ರಷ್ಟು ಹಾಗೂ ಶೇ 100ಕ್ಕಿಂತ ಹೆಚ್ಚು ಲಾಭ ನೀಡಿದ ಕಂಪನಿಗಳ ಸಂಖ್ಯೆ ಐದು ಎಂದು 'ಬ್ಯಾಂಕ್ ಆಫ್ ಬರೋಡ'ದ ಅರ್ಥಶಾಸ್ತ್ರಜ್ಞೆ ದೀಪಾನ್ವಿತಾ ಮಜುಮ್ದಾರ್ ನಡೆಸಿದ ಅಧ್ಯಯನವು ಕಂಡುಕೊಂಡಿದೆ.

'ಪಂಪ ಮಹಾಕವಿ ರಸ್ತೆ: ಹೆಸರು ಬದಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯಲ್ಲಿನ ಪಂಪ ಮಹಾಕವಿ ರಸ್ತೆಯ ಹೆಸರು ಬದಲಾಯಿಸಲು ಮುಂದಾಗಿಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ ಸ್ಪಷ್ಟಪಡಿಸಿದೆ.

'ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿನ ಪಂಪ ಮಹಾಕವಿ ಮಾರ್ಗವನ್ನು ಕನ್ನಡಮಯ ಮಾಡಬೇಕು ಹಾಗೂ ಆಕರ್ಷಣೀಯವನ್ನಾಗಿಸಲು, ಈ ರಸ್ತೆಯನ್ನು ಅಭಿವೃದ್ಧಿ ಪಡಿಸಬೇಕೆಂಬ ಮನವಿಯನ್ನು ಮಾತ್ರ ಬಿಬಿಎಂಪಿಗೆ ಸಲ್ಲಿಸಲಾಗಿದೆ' ಎಂದು ಪರಿಷತ್ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಪಂಪ ಮಹಾಕವಿ ರಸ್ತೆಯ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಸ್ತೆ ಎಂದು ಬದಲಾಯಿಸುವ ಬಗ್ಗೆ ಕಸಾಪ ಪ್ರಸ್ತಾವ ಮುಂದಿಟ್ಟಿದ್ದ ಬಗ್ಗೆ ಸಾಹಿತ್ಯ ವಲಯದ ಪ್ರಮುಖರು ಮತ್ತು ಕನ್ನಡ ಸಂಘಟನೆಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಮಹೇಶ ಜೋಶಿ, 'ಪಂಪ ಮಹಾಕವಿಯ ಬಗ್ಗೆ ಪರಿಷತ್ ಅಪಾರ ಗೌರವ ಹೊಂದಿದೆ. ಪರಿಷತ್ತಿನ ಕೆಲವು ಅಭಿಮಾನಿಗಳು ಹಾಗೂ ಕನ್ನಡ ಪ್ರೇಮಿಗಳು, ಪಂಪ ಮಹಾಕವಿ ಹೆಸರಿನೊಂದಿಗೆ ಪರಿಷತ್ತಿನ ಹೆಸರನ್ನು ಸೇರಿಸಿ ಪಂಪ ಮಹಾಕವಿ - ಕನ್ನಡ ಸಾಹಿತ್ಯ ಪರಿಷತ್ತು ರಸ್ತೆ ಅಥವಾ ಆದಿಕವಿ ಪಂಪನಿಗೆ ನಾಡಿನ ಮೊದಲ ಗುರು ನಾಡೋಜ ಎಂಬ ಹೆಗ್ಗಳಿಕೆ ಇರುವುದರಿಂದ, ನಾಡೋಜ ಪಂಪ ಮಹಾಕವಿ-ಕನ್ನಡ ಸಾಹಿತ್ಯ ಪರಿಷತ್ತು ರಸ್ತೆ ಎಂದು ನಾಮಕರಣಕ್ಕೆ ಸಲಹೆ ನೀಡಿದ್ದರು. ಆದರೆ, ಪರಿಷತ್ ಈ ಬಗ್ಗೆ ಕೇವಲ ಸಲಹೆ, ಸೂಚನೆಗಳನ್ನು ಪಡೆದಿದೆಯೇ ಹೊರತು, ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ಜೋಶಿ ಸ್ಪಷ್ಟಪಡಿಸಿದ್ದಾರೆ.

'ಕೆಲವು ಪೂರ್ವಗ್ರಹಪೀಡಿತರು ಪರಿಷತ್ತಿನ ಏಳ್ಗೆ ಸಹಿಸಲಾಗ ದೆಯೇ ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಾರೆ. ಯಾವುದೇ ನಿರ್ಣಯ ಕೈಗೊಳ್ಳಲು ಪರಿಷತ್ತಿನಲ್ಲಿ ಕಾರ್ಯಕಾರಿ ಸಮಿತಿ ಎನ್ನುವ ಮಹತ್ವದ ವ್ಯವಸ್ಥೆ ಇದೆ. ಈ ಸಮಿತಿಯಲ್ಲೇ ಎಲ್ಲಾ ನಿರ್ಣಯಗಳು ಕೈಗೊಳ್ಳಲಾಗುತ್ತದೆಯೇ ಹೊರತು, ವೈಯಕ್ತಿಕ ತೀರ್ಮಾನ ತೆಗೆದುಕೊಳ್ಳುವುದು ಸಾಧ್ಯವೇ ಇಲ್ಲ' ಎಂದಿದ್ದಾರೆ.

ಸಭಾಂಗಣದ ಹೆಸರೂ ಬದಲಿಸಲಾಗಿತ್ತು!

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಈ ಹಿಂದೆಯೂ 'ಆದಿಕವಿ ಪಂಪ ಸಭಾಂಗಣ'ದ ಹೆಸರನ್ನು 'ಮಹಾಕವಿ ಕುವೆಂಪು ಸಭಾಂಗಣ'ವಾಗಿ ಬದಲಾಯಿಸಲಾಗಿತ್ತು. ಡಾ.ಆರ್.ಕೆ. ನಲ್ಲೂರುಪ್ರಸಾದ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮೂರನೇ ಮಹಡಿಯಲ್ಲಿದ್ದ ಸಭಾಂಗಣದ ಹೆಸರನ್ನು ಏಕಾಏಕಿ ಮರುನಾಮಕರಣ ಮಾಡಲಾಗಿತ್ತು. ಹರಿಕೃಷ್ಣ ಪುನರೂರು ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕಸಾಪ ಮೂರನೇ ಮಹಡಿಯಲ್ಲಿರುವ ಸಭಾಂಗಣಕ್ಕೆ 'ಪಂಪ ಸಭಾಂಗಣ' ಎಂದು ನಾಮಕರಣ ಮಾಡಲಾಗಿತ್ತು.

ಭಾರತ– ಚೀನಾ: ನಿಗದಿಯಂತೆ ಸೇನೆ ವಾಪಸ್

ನವದೆಹಲಿ (ಪಿಟಿಐ): 'ಭಾರತ -ಚೀನಾ ಗಡಿಯಲ್ಲಿನ ಗೋಗ್ರಾ -ಹಾಟ್‌ಸ್ಪ್ರಿಂಗ್ ಬಳಿಯ 15ನೇ ಗಸ್ತು (ಪಿಪಿ–15) ತಾಣದಿಂದ ಉಭಯ ದೇಶಗಳ ಸೇನಾ ತುಕಡಿಗಳನ್ನು ವಾಪಸು ಕರೆಸಿಕೊಳ್ಳುವ ಪ್ರಕ್ರಿಯೆ ಬಹುತೇಕ ಮುಗಿದಿದ್ದು, ಆ ತಾಣದ ಬಳಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಮೂಲ ಸೌಕರ್ಯಗಳನ್ನು ತೆರವುಗೊಳಿಸಲಾಗಿದೆ.

'ಪಿಪಿ–15 ಭಾಗದಿಂದ ಎರಡೂ ದೇಶಗಳ ಸೇನಾ ತುಕಡಿಗಳು ಬಹುತೇಕ ನಿರ್ಗಮಿಸಿವೆ. ಆದರೆಡೆಮ್‌ಚೋಕ್‌ಮತ್ತು ಡೆಪ್ಸಾಂಗ್ ಪ್ರದೇಶಗಳಲ್ಲಿನ ಬಿಕ್ಕಟ್ಟು ಪರಿಹರಿಸುವಲ್ಲಿಯಾವುದೇ ಪ್ರಗತಿಯಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

ಭಾರತ ಮತ್ತು ಚೀನಾ ಸೇನೆಗಳು ಪಿಪಿ–15 ಭಾಗದಿಂದ ಸೇನಾ ವಾಪಸಾತಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ಉಭಯ ದೇಶಗಳು ಸೆ. 8ರಂದು ಘೋಷಿಸಿದ್ದವು.

ಲಡಾಖ್‌ಗೆ ಎರಡು ದಿನಗಳ ಭೇಟಿ ನೀಡಿದ್ದ ಜನರಲ್ ಪಾಂಡೆ ಅವರು, 'ಈ ಕುರಿತ ವಸ್ತುಸ್ಥಿತಿ ವಿವರ ಪಡೆಯಬೇಕಿದೆ. ಆದರೆ, ಅದು ನಿಗದಿತ ವೇಳಾಪಟ್ಟಿಯಂತೆ ನಡೆಯುತ್ತಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಪಿಪಿ–15ರ ಎರಡೂ ಬದಿಯಲ್ಲಿ 'ಬಫರ್ ವಲಯ' ನಿರ್ಮಿಸಲಾಗುತ್ತದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. 'ಬಫರ್ ವಲಯ'ದಲ್ಲಿ ಯಾವುದೇ ಕಡೆಯವರು ಗಸ್ತು ತಿರುಗುವುದಿಲ್ಲ.

ಸಂಕ್ಷಿಪ್ತ ಸುದ್ದಿ

ಉಕ್ರೇನ್‌ಗೆ ಭಾರತದ ವೈದ್ಯಕೀಯ ನೆರವು

ಮಾಸ್ಕೊ (ಪಿಟಿಐ): ರಷ್ಯಾ ಜೊತೆಗಿನ ಯುದ್ಧದಿಂದಾಗಿ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ಉಕ್ರೇನ್‌ಗೆ ಭಾರತವು ವೈದ್ಯಕೀಯ ನೆರವು ಒದಗಿಸಿದೆ.

'ಭಾರತದ ರಾಯಭಾರಿ ಹರ್ಷ ಕುಮಾರ್ ಜೈನ್ ಅವರು ಅಗತ್ಯ ಔಷಧಗಳು ಹಾಗೂ ವೈದ್ಯಕೀಯ ಸಲಕರಣೆಗಳನ್ನು ಉಕ್ರೇನ್‌ನ ಸಹಾಯಕ ಆರೋಗ್ಯ ಸಚಿವ ಒಲೆಕ್ಸಿ ಇರೆಮೆಂಕೊ ಅವರಿಗೆ ಹಸ್ತಾಂತರಿಸಿದ್ದಾರೆ' ಎಂದು ಕೀವ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಸೋಮವಾರ ಟ್ವೀಟ್ ಮಾಡಿದೆ.

ಶೃಂಗಸಭೆಗೆ ಹಾಜರಾಗಲಿರುವ ಜಿನ್‌ಪಿಂಗ್

ಬೀಜಿಂಗ್ (ಪಿಟಿಐ): ಎರಡು ವರ್ಷಗಳ ಬಳಿಕ ವಿದೇಶ ಪ್ರಯಾಣ ಹೊರಟಿರುವ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಈ ವಾರ ಕಜಕಿಸ್ತಾನಕ್ಕೆ ಭೇಟಿ ನೀಡಿ, ಬಳಿಕ ಉಜ್ಬೇಕಿಸ್ತಾನದಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ 22ನೇ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಚೀನಾ ಅಧಿಕೃತವಾಗಿ ಸೋಮವಾರ ಘೋಷಿ ಸಿದೆ.

ಷಿ ಅವರು ಸಮರ್ಕಂಡ್ ನಗರದಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸೆ. 14 ರಿಂದ 16 ರವರೆಗೆ ಕಜಕಿಸ್ತಾನ ಮತ್ತು ಉಜ್ಬೇಕಿಸ್ತಾನಕ್ಕೆ ಭೇಟಿ ನೀಡುವರು ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಹುವಾ ಚುನ್ಯಿಂಗ್ ತಿಳಿಸಿದ್ದಾರೆ.

ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾಗವಹಿಸುವ ನಿರೀಕ್ಷೆಯಿದೆ. ಪುಟಿನ್ ಮತ್ತು ಷಿ ಅವರು ಸಮರ್ಕಂಡ್‌ನಲ್ಲಿ ನಡೆಯುವ ಸಭೆಯಲ್ಲಿ ಭೇಟಿಯಾಗಲಿದ್ದಾರೆ ಎಂದು ರಷ್ಯಾ ಅಧಿಕಾರಿಗಳು ಹೇಳಿದ್ದಾರೆ. ಈ ವರ್ಷದ ಫೆಬ್ರುವರಿಯಲ್ಲಿ ರಷ್ಯಾ, ಉಕ್ರೇನ್ ಮೇಲೆ ದಾಳಿ ಮಾಡಿದ ನಂತರ ಇದು ಮೊದಲ ಭೇಟಿಯಾಗಲಿದೆ.

ಸೌದಿ ದೊರೆಗೆ ಮೋದಿ ಲಿಖಿತ ಸಂದೇಶ ಹಸ್ತಾಂತರ

ಜೆಡ್ಡಾ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೌದಿ ಅರೇಬಿಯಾ ದೊರೆ ಮೊಹಮ್ಮದ್ ಬಿನ್ ಸಲ್ಮಾನ್ ಅವರನ್ನು ಭೇಟಿ ಮಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಲಿಖಿತ ಸಂದೇಶ ಹಸ್ತಾಂತರಿಸಿದರು.

ಉಭಯ ದೇಶಗಳ ನಡುವಿನ ಸಂಬಂಧ ಮತ್ತಷ್ಟು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಲು ಜೈಶಂಕರ್ ಅವರು ಮೂರು ದಿನಗಳ ಭೇಟಿಗಾಗಿ ಶನಿವಾರ ಸೌದಿ ಅರೇಬಿಯಾಕ್ಕೆ ಬಂದಿದ್ದಾರೆ. ವಿದೇಶಾಂಗ ಸಚಿವರಾಗಿ ಸೌದಿಗೆ ಇದು ಅವರ ಮೊದಲ ಭೇಟಿ.

'ಮೊಹಮ್ಮದ್ ಬಿನ್ ಸಲ್ಮಾನ್ ಪ್ರಧಾನಿ ಮೋದಿ ಅವರ ಲಿಖಿತ ಸಂದೇಶ ಸ್ವೀಕರಿಸಿದ್ದಾರೆ' ಎಂದು ಸೌದಿ ಅಧಿಕೃತ ಪ್ರೆಸ್ ಏಜೆನ್ಸಿ ವರದಿ ಮಾಡಿದೆ.

ಬಾಲ್ ಬ್ಯಾಡ್ಮಿಂಟನ್: ಕೆ.ಆರ್.ನಗರಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೆ.ಆರ್.ನಗರ ಕಿಂಗ್ಸ್' ತಂಡವು ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯು ಇಲ್ಲಿನ ಹಾರ್ಡ್ವಿಕ್ ಶಾಲೆಯ ಅಂಗಳದಲ್ಲಿ ಆಯೋಜಿಸಿದ್ದ ಚೊಚ್ಚಲ ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್‌ನಲ್ಲಿ (ಕೆಬಿಬಿಪಿಎಲ್–2022) ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾನುವಾರ ತಡರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ 'ಸಿದ್ಧಗಂಗಾ ಶ್ರೀ ತುಮಕೂರು' ತಂಡವನ್ನು 35–33, 35–30 ರಲ್ಲಿ ಮಣಿಸಿದ 'ಕಿಂಗ್ಸ್' ತಂಡದ ಆಟಗಾರರು ಟ್ರೋಫಿ ಎತ್ತಿಹಿಡಿದರು.

ಮೊದಲ ಎರಡು ಸ್ಥಾನ ಪಡೆದ ತಂಡಗಳಿಗೆ ಟ್ರೋಫಿ ಜೊತೆಗೆ ಕ್ರಮವಾಗಿ ₹ 50 ಸಾವಿರ ಹಾಗೂ ₹ 30 ಸಾವಿರ ನಗದು ಬಹುಮಾನ ನೀಡಲಾಯಿತು.

'ಕೆ.ಆರ್.ನಗರ ಕಿಂಗ್ಸ್', 'ಸಿದ್ಧಗಂಗಾ ಶ್ರೀ ತುಮಕೂರು', ಬಳ್ಳಾರಿಯ ಶರವಣ ಹೆಬ್ಬಾಳ್ ಸ್ಟಾರ್ಸ್, ಬೆಂಗಳೂರಿನ ಸ್ಕಾಲ್ವಿ- ಅಸ್ತ್ರ ತಂಡ ಗಳು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದ್ದವು.

ಸೆಮಿಫೈನಲ್‌ನಲ್ಲಿ ಕೆ.ಆರ್.ನಗರ ತಂಡ 35–32, 23–35, 35–25 ಸೆಟ್‌ಗಳಿಂದ ಬಳ್ಳಾರಿಯ ತಂಡವನ್ನು ಮಣಿಸಿದರೆ, ತುಮಕೂರು ತಂಡ 28–35, 35–27 ಹಾಗೂ 35–30 ಸೆಟ್‌ಗಳಿಂದ 'ಸ್ಕಾಲ್ವಿ- ಅಸ್ತ್ರ' ತಂಡವನ್ನು ಸೋಲಿಸಿತ್ತು. ಬಳ್ಳಾರಿ ಹಾಗೂ ಬೆಂಗಳೂರು ತಂಡಗಳು ಮೂರನೇ ಸ್ಥಾನ ಪಡೆದು ತಲಾ ₹ 10 ಸಾವಿರ ನಗದು ಬಹುಮಾನ ಹಂಚಿಕೊಂಡವು.

ಮಹಾರಾಜ ಬಾಲ್ ಬ್ಯಾಡ್ಮಿಂ ಟನ್ ಕ್ಲಬ್, ಜಿಲ್ಲಾಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಲೀಗ್‌ನಲ್ಲಿ ಕೆ.ಆರ್‌ನಗರ ತಂಡದ ಸಂಜಯ್ 'ಸರಣಿ ಶ್ರೇಷ್ಠ' ಹಾಗೂ 'ಬೆಸ್ಟ್ ಬ್ಯಾಕ್' ಪ್ರಶಸ್ತಿ ಪಡೆದರೆ, 'ಬೆಸ್ಟ್ ಫ್ರಂಟ್' ಪ್ರಶಸ್ತಿಗೆ ವಿವೇಕ್ ಅವರು ಭಾಜನರಾದರು.

ಟ್ರೋಫಿಯೊಂದಿಗೆ ಎಂ. ಎಸ್ ಅರುಣ್

ರೆಡ್ ಸ್ನೂಕರ್: ಅರುಣ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಎಸ್.ಅರುಣ್ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ 6-ರೆಡ್ ಸ್ನೂಕರ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಕೆಎಸ್‌ಬಿಎನಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಅರುಣ್ 35-0, 21-59, 47-3, 38-07, 45-0, 4-45, 39-7, 26-42, 35-23ರಿಂದ (6-3) ರೋಹಿತ್ ರವಿಂದ್ರನ್ ಅವರನ್ನು ಸೋಲಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಮೊಹಮ್ಮದ್ ಷಹಜಹಾನ್ 19-37, 52-0, 51-1, 27-34, 48-29, 50-4ರಿಂದ ಮೊಹಮ್ಮದ್ ಅಲಿ ಅವರನ್ನು ಮಣಿಸಿದರು. ಬಿ.ಸಿ. ಕಾರ್ತಿಕ್ ಐದನೇ ಸ್ಥಾನ ಗಳಿಸಿದರು.

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್: ಭಾರತ ತಂಡದಲ್ಲಿ ಉನ್ನತಿ ಹೂಡಾ

ನವದೆಹಲಿ (ಪಿಟಿಐ): ವಿಶ್ವ ಜೂನಿಯರ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಅನುಪಮಾ ಉಪಾಧ್ಯಾಯ ಮತ್ತು ಒಡಿಶಾ ಓಪನ್ ಚಾಂಪಿಯನ್ ಉನ್ನತಿ ಹೂಡಾ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಸ್ಪೇನ್‌ನಲ್ಲಿ ಅಕ್ಟೋಬರ್ 17ರಿಂದ 30ರವರೆಗೆ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ. ಕೋವಿಡ್ ಕಾರಣದಿಂದಾಗಿ ಎರಡು ವರ್ಷ ಸ್ಥಗಿತಗೊಂಡಿದ್ದ ಚಾಂಪಿಯನ್‌ಷಿಪ್ ಈ ಬಾರಿ ನಿಗದಿಯಾಗಿದೆ.

ಅಖಿಲ ಭಾರತ ರ‍್ಯಾಂಕಿಂಗ್ ಟೂರ್ನಿಗಳು ಮತ್ತು ಆಯ್ಕೆ ಟ್ರಯಲ್ಸ್ ಮೂಲಕ ತಂಡಗಳನ್ನು ಆಯ್ಕೆ ಮಾಡಲಾಗಿದೆ.

ಉತ್ತಮ ಫಾರ್ಮ್‌ನಲ್ಲಿರುವ ಭರತ್ ರಾಘವ್ ಹಾಗೂ ವಿಶ್ವ ರ‍್ಯಾಂಕಿಂಗ್‌ನಲ್ಲಿ ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಶಂಕರ್ ಮುತ್ತುಸ್ವಾಮಿ ಅವರು ಬಾಲಕರ ಸಿಂಗಲ್ಸ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಈ ಹಿಂದಿನ ಚಾಂಪಿಯನ್‌ಷಿಪ್‌ಗಳಲ್ಲಿ ಭಾರತ ತಲಾ ಮೂರು ಚಿನ್ನ, ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಜಯಿಸಿದೆ.

ಉನ್ನತಿ ಹೂಡಾ– ಟ್ವಿಟರ್ ಚಿತ್ರ

ಭಾರತ ತಂಡ ಇಂತಿದೆ: ಬಾಲಕರು: ಸಿಂಗಲ್ಸ್: ಭರತ್ ರಾಘವ್, ಶಂಕರ್ ಮುತ್ತುಸಾಮಿ ಎಸ್, ಆಯುಷ್ ಶೆಟ್ಟಿ. ಡಬಲ್ಸ್: ಅರ್ಷ್ ಮೊಹಮ್ಮದ್/ ಅಭಿನವ್ ಠಾಕೂರ್, ನಿಕೋಲಸ್ ನಾಥನ್ ರಾಜ್/ತುಷಾರ್ ಸುವೀರ್.

ಬಾಲಕಿಯರು: ಸಿಂಗಲ್ಸ್: ಉನ್ನತಿ ಹೂಡಾ, ರಕ್ಷಿತಾ ಶ್ರೀ ಎಸ್, ಅನುಪಮಾ ಉಪಾಧ್ಯಾಯ. ಡಬಲ್ಸ್: ಇಶಾರಾಣಿ ಬರುವಾ/ದೇವಿಕಾ ಸಿಹಾಗ್, ಶ್ರೇಯಾ ಬಾಲಾಜಿ/ಶ್ರೀನಿಧಿ ಎನ್.

ಮಿಶ್ರ ಡಬಲ್ಸ್: ಸಮರವೀರ್/ ರಾಧಿಕಾ ಶರ್ಮಾ, ವಿಘ್ನೇಶ್ ತತಿನೇನಿ/ ಶ್ರೀ ಸಾಯಿ ಶ್ರಾವ್ಯಾ ಲಕ್ಕಮ್‌ರಾಜು.

ಲಾಂಗ್‌ಜಂಪ್: ಜೆಸ್ವಿನ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಲಾಂಗ್‌ಜಂಪ್ ಸ್ಪರ್ಧಿ ಜೆಸ್ವಿನ್ ಆಲ್ಡ್ರಿನ್ ಅವರು ಲಿಕ್‌ಟೆನ್‌ಸ್ಟೈನ್‌ನಲ್ಲಿ ನಡೆದ ಮೂರನೇ ಗೋಲ್ಡನ್ ಫ್ರೈ ಸೀರಿಸ್ ಅಥ್ಲೆಟಿಕ್ ಕೂಟದಲ್ಲಿ ಚಿನ್ನ ಗೆದ್ದರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ ಅವರು 8.12 ಮೀ. ದೂರ ಜಿಗಿದರು. ಭಾರತದ ಅಥ್ಲೀಟ್ ವಿದೇಶದಲ್ಲಿ ನಡೆದ ಕೂಟದಲ್ಲಿ 8 ಮೀ.ಗಿಂತ ಹೆಚ್ಚಿನ ಸಾಧನೆ ಮಾಡಿದ್ದು ಇದೇ ಮೊದಲು. ಈ ಹಿಂದೆ ಐದು ಕೂಟಗಳಲ್ಲಿ ಪಾಲ್ಗೊಂಡಿದ್ದರೂ 8 ಮೀ. ಗಡಿ ತಲುಪಿರಲಿಲ್ಲ. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 8.26 ಮೀ. ಆಗಿದೆ. ಜೆಕ್‌ಗಣರಾಜ್ಯದ ರಾಡೆಕ್ ಜಸ್ಕಾ (7.70 ಮೀ.) ಬೆಳ್ಳಿ ಹಾಗೂ ನಾರ್ವೆಯ ಹೆನ್ರಿಕ್ ಫ್ಲಾಟ್ನೆಸ್ (7.66 ಮೀ.) ಕಂಚು ಗೆದ್ದುಕೊಂಡರು. ಟ್ರಿಪಲ್ ಜಂಪ್ ಸ್ಪರ್ಧಿ ಪ್ರವೀಣ್ ಚಿತ್ರವೇಲ್ ಅವರು ಇಲ್ಲಿ ಲಾಂಗ್‌ಜಂಪ್‌ನಲ್ಲಿ ಸ್ಪರ್ಧಿಸಿ 7.58 ಮೀ. ಸಾಧನೆಯೊಂದಿಗೆ 4ನೇ ಸ್ಥಾನ ಪಡೆದರು.

ಕೈದಿಗಳನ್ನು ಕೊಂದ ಗ್ರಾಮಸ್ಥರು

ಶಿಲ್ಲಾಂಗ್ (ಪಿಟಿಐ): ಜೊವಯ್ ಜೈಲಿನಿಂದ ಪರಾರಿಯಾಗಿದ್ದ ನಾಲ್ವರು ಕೈದಿಗಳನ್ನು ವೆಸ್ಟ್ ಜಯಂತಿಯಾ ಹಿಲ್ಸ್ ಜಿಲ್ಲೆಯ ಶಂಗ್‌ಪುಂಗ್ ಗ್ರಾಮದ ಸುಮಾರು 5,000 ಸಾವಿರ ಗ್ರಾಮಸ್ಥರು ಸೇರಿ ಭಾನುವಾರ ಹತ್ಯೆ ಮಾಡಿದ್ದಾರೆ. ಗುಂಪುಹತ್ಯೆ ಹಾಗೂ ಜೈಲಿನಿಂದ ಪರಾರಿಯಾದ ಘಟನೆ ಸಂಬಂಧ ತನಿಖೆಗೆ ಆದೇಶಿಸಲಾಗಿದೆ ಎಂದು ಗೃಹ ಸಚಿವ ಲಹಕಮನ್ ರಿಂಬುಯಿ ವಿಧಾನಸಭೆಯಲ್ಲಿ ಸೋಮವಾರ ಹೇಳಿದರು.

ಸೆ. 10ರಂದು ಆರು ಕೈದಿಗಳು ಜೈಲಿನಿಂದ ಪರಾರಿಯಾಗಿದ್ದರು. ಇವರಲ್ಲಿ ಮೂವರು ವಿಚಾರಣಾಧೀನ ಕೈದಿಗಳು ಹಾಗೂ ಒಬ್ಬ ಅಪರಾಧಿಯನ್ನು ಕೋಲುಗಳನ್ನು ಹಿಡಿದು ಬಂದ ಗ್ರಾಮಸ್ಥರು ಹತ್ಯೆ ಮಾಡಿದ್ದಾರೆ ಎಂದರು.

ಬಂಧನ: ಪ್ರಕರಣದ ಸಂಬಂಧ ಜೊವಯ್ ಜೈಲಿನ ಮುಖ್ಯ ವಾರ್ಡನ್, ಮೂವರು ಜೈಲು ಅಧಿಕಾರಿಗಳು, ಸಹಾಯಕ ಸಿಬ್ಬಂದಿಯನ್ನು ಬಂಧಿಸಲಾಗಿದೆ.

'ನಿಸ್ವಾರ್ಥ ಕರ್ತವ್ಯ ನಿರ್ವಹಣೆಗೆ ಮಾದರಿ ನನ್ನ ತಾಯಿ'

ಬ್ರಿಟನ್ ರಾಜನಾಗಿ ಸಂಸತ್ತಿನಲ್ಲಿ ಪ್ರಥಮ ಭಾಷಣ ಮಾಡಿದ ಮೂರನೇ ಚಾರ್ಲ್ಸ್

ಲಂಡನ್ (ಪಿಟಿಐ): ಇಲ್ಲಿನ ವೆಸ್ಟ್ ಮಿನಿಸ್ಟರ್ ಹಾಲ್‌ನಲ್ಲಿ ಸೋಮವಾರ ಬ್ರಿಟನ್‌ನ ದೊರೆ ಮೂರನೇ ಚಾರ್ಲ್ಸ್ ಸಂಸತ್ ಅನ್ನು ಉದ್ದೇಶಿಸಿ ಪ್ರಥಮ ಬಾರಿಗೆ ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ನನ್ನ ಪ್ರೀತಿಯ ತಾಯಿ ಬ್ರಿಟನ್ ರಾಣಿ 2ನೇ ಎಲಿಜಬೆತ್ ಅವರು ನಿಸ್ವಾರ್ಥ ಕರ್ತವ್ಯಕ್ಕೆ ನಿರ್ವಹಣೆಗೆ ಉದಾಹರಣೆಯಾಗಿದ್ದರು. ಅವರ ಅಮೂಲ್ಯ ತತ್ವಗಳನ್ನು ಎತ್ತಿಹಿಡಿಯುವಲ್ಲಿ ಅವರ ಕರ್ತವ್ಯದ ಮಾದರಿಯನ್ನು ನಾನು ಅನುಸರಿಸುತ್ತೇನೆ' ಎಂದು ಪ್ರತಿಜ್ಞೆ ಮಾಡಿದರು.

ಸಂಸತ್ತಿನಲ್ಲಿ ರಾಣಿ ಎಲಿಜಬೆತ್ ಅವರಿಗೆ ಸಂತಾಪ ವ್ಯಕ್ತಪಡಿಸಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, 'ನನ್ನ ತಾಯಿ ಚಿಕ್ಕ ವಯಸ್ಸಿನಲ್ಲೇ ದೇಶ ಸೇವೆ ಮತ್ತು ಜನಸೇವೆಗೆ ತಮ್ಮನ್ನು ಮುಡುಪಾಗಿಟ್ಟಿದ್ದರು. ಅಂತೆಯೇ ಸಾಂವಿಧಾನಿಕ ಸರ್ಕಾರದ ಅಮೂಲ್ಯ ತತ್ವಗಳನ್ನು ಎತ್ತಿ ಹಿಡಿಯುವಲ್ಲಿ ಸಫಲರಾಗಿದ್ದರು. ಬ್ರಿಟನ್ ರಾಜನಾಗಿ ನಾನೂ ಅವರ ಆದರ್ಶಗಳನ್ನು ಪಾಲಿಸುತ್ತೇನೆ' ಎಂದು ಚಾರ್ಲ್ಸ್ ಹೇಳಿದರು.

ಲಂಡನ್‌ನ ವೆಸ್ಟ್ ಮಿನಿಸ್ಟರ್ ಹಾಲ್‌ನಲ್ಲಿ ಸೋಮವಾರ ಸಂಸತ್ ಅನ್ನು ಉದ್ದೇಶಿಸಿ ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಭಾಷಣ ಮಾಡಿದರು –ಪಿಟಿಐ ಚಿತ್ರ

ಗೌರವ ಸಲ್ಲಿಸಿದ ಹ್ಯಾರಿ: ಬ್ರಿಟನ್‌ನ ರಾಜಕುಮಾರ ಹ್ಯಾರಿ ಅವರು ಸೋಮವಾರ ರಾಣಿ 2ನೇ ಎಲಿಜಬೆತ್ ಅವರಿಗೆ ಗೌರವ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, 'ನೀವು ಮತ್ತು ಅಜ್ಜ ಮತ್ತೆ ಒಂದಾಗಿರುವುದನ್ನು ತಿಳಿದು ನಾವು ಮುಗುಳ್ನಗೆ ಬೀರುತ್ತೇವೆ' ಎಂದಿದ್ದಾರೆ.

'ನಮ್ಮ ಅಜ್ಜಿ ಅವರ ಅಗಲಿಕೆಯು ನಮಗೆ ಅತೀವ ನೋವುಂಟು ಮಾಡಿದೆ. ಅವರೊಂದಿಗಿನ ಬಾಲ್ಯದ ನೆನಪುಗಳನ್ನು ಮರೆಯ ಲಾಗದು. ಅವರ ಕರ್ತವ್ಯಬದ್ಧತೆ ಅನೇಕರಿಗೆ ಮಾರ್ಗದರ್ಶನ ನೀಡು ವಂತಿತ್ತು. ಅವರು ಜಾಗತಿಕವಾಗಿ ಮೆಚ್ಚುಗೆಗೆ ಮತ್ತು ಗೌರವಕ್ಕೆ ಪಾತ್ರರಾಗಿದ್ದರು' ಎಂದೂ ಹ್ಯಾರಿ ಹೇಳಿದ್ದಾರೆ.

ಅಂತ್ಯಸಂಸ್ಕಾರಕ್ಕೂ ಮುನ್ನ ಮೌನಾಚರಣೆ: ರಾಣಿ 2ನೇ ಎಲಿಜಬೆತ್ ಅವರ ಅಂತ್ಯಸಂಸ್ಕಾರಕ್ಕೂ ಮುನ್ನ ಬ್ರಿಟನ್‌ನಲ್ಲಿ ಸೆ.18ರ ಭಾನುವಾರ ಸ್ಥಳೀಯ ಕಾಲಮಾನ ರಾತ್ರಿ 8 ಗಂಟೆಗೆ ಒಂದು ನಿಮಿಷಗಳ ಕಾಲ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ಸೆ.19ರಂದು ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ರಾಣಿಯ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಡೌನಿಂಗ್ ಸ್ಟ್ರೀಟ್ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡ: ಹೊಸಬರಿಗೆ ಮಣೆ ಹಾಕದ ಆಯ್ಕೆ ಸಮಿತಿ

ಬೂಮ್ರಾ, ಹರ್ಷಲ್ ವಾಪಸ್

ನವದೆಹಲಿ (ಪಿಟಿಐ): ಫಿಟ್‌ನೆಸ್ ಮರಳಿ ಪಡೆದಿರುವ ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಹರ್ಷಲ್ ಪಟೇಲ್ ಅವರು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಅ.16 ರಿಂದ ನಡೆಯಲಿರುವ ವಿಶ್ವಕಪ್‌ಗೆ 15 ಸದಸ್ಯರ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ಆಯ್ಕೆ ಸಮಿತಿಯು ಯಾವುದೇ ಅಚ್ಚರಿಗೆ ಅವಕಾಶ ನೀಡಿಲ್ಲ.

ಬೆನ್ನು ನೋವಿನಿಂದ ಬಳಲಿದ್ದ ಬೂಮ್ರಾ ಮತ್ತು ಪಕ್ಕೆಲುಬು ಗಾಯದ ಸಮಸ್ಯೆ ಎದುರಿಸಿದ್ದ ಹರ್ಷಲ್ ಅವರು ಏಷ್ಯಾ ಕಪ್ ಟೂರ್ನಿಯಲ್ಲಿ ಆಡಿರಲಿಲ್ಲ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಮರುಚೈತನ್ಯ ಶಿಬಿರದಲ್ಲಿ ಪಾಲ್ಗೊಂಡ ಇಬ್ಬರೂ ಫಿಟ್‌ನೆಸ್ ಸಾಬೀತುಪಡಿಸಿದ್ದರಿಂದ ವಿಶ್ವಕಪ್‌ಗೆ ಪರಿಗಣಿಸಲಾಗಿದೆ.

ಏಷ್ಯಾ ಕಪ್‌ನಲ್ಲಿ ಆಡಿದ್ದ ವೇಗಿ ಆವೇಶ್ ಖಾನ್ ಮತ್ತು ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಅವರನ್ನು ಕೈಬಿಡಲಾಗಿದೆ. ಬಿಷ್ಣೋಯಿ ಬದಲು ಅನುಭವಿ ಸ್ಪಿನ್ನರ್ ಆರ್.ಅಶ್ವಿನ್‌ಗೆ ಅವಕಾಶ ನೀಡಲಾಗಿದೆ.

ರೋಹಿತ್ ಶರ್ಮ ನೇತೃತ್ವದ ತಂಡದಲ್ಲಿ ಬ್ಯಾಟಿಂಗ್ ವಿಭಾಗದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ದೀಪಕ್ ಹೂಡಾ ಹೊರತುಪಡಿಸಿ ಇತರ ಎಲ್ಲ ಬ್ಯಾಟರ್‌ಗಳು ಕಳೆದ ಟಿ20 ವಿಶ್ವಕಪ್ ನಲ್ಲಿ ಆಡಿದ್ದರು.

ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ತವರಿನಲ್ಲಿ ನಡೆಯಲಿರುವ ಟಿ20 ಸರಣಿಗೂ ತಂಡಗಳನ್ನು ಹೆಸರಿಸಲಾಗಿದೆ.

ಜಸ್‌ಪ್ರೀತ್ ಬೂಮ್ರಾ

ಹರ್ಷಲ್ ಪಟೇಲ್

ಅನುಭವಿ ವೇಗಿ ಮೊಹಮ್ಮದ್ ಶಮಿ ಅವರು ಸ್ಥಾನ ಪಡೆದಿದ್ದಾರೆ. ಶಮಿ ಅವರನ್ನು ವಿಶ್ವಕಪ್‌ಗೆ ಪರಿಗಣಿಸದಿದ್ದರೂ, ಹೆಚ್ಚುವರಿ ಆಟಗಾರರಾಗಿ ಅವರು ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲಿದ್ದಾರೆ. ಶ್ರೇಯಸ್ ಅಯ್ಯರ್, ಬಿಷ್ಣೋಯಿ ಮತ್ತು ವೇಗಿ ದೀಪಕ್ ಚಾಹರ್ ಅವರೂ ಹೆಚ್ಚುವರಿ ಆಟಗಾರರಾಗಿ ಜತೆ ತೆರಳಲಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ಭುವನೇಶ್ವರ್‌ಗೆ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಸರಣಿಗೆ ಹಾರ್ದಿಕ್ ಪಾಂಡ್ಯ, ಅರ್ಷದೀಪ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಆಸ್ಟ್ರೇಲಿಯಾ ಎದುರಿನ ಸರಣಿ ಸೆ.20 ರಿಂದ ಆರಂಭವಾಗಲಿದೆ. ಆ ಬಳಿಕ ದಕ್ಷಿಣ ಆಫ್ರಿಕಾ ಜತೆ ಆಡಲಿದೆ.

ಆಸ್ಟ್ರೇಲಿಯಾ ಎದುರಿನ ಸರಣಿಗೆ ತಂಡ: ರೋಹಿತ್ ಶರ್ಮ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್ (ವಿಕೆಟ್ ಕೀಪರ್), ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಆರ್.ಅಶ್ವಿನ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ದೀಪಕ್ ಚಾಹರ್, ಜಸ್‌ಪ್ರೀತ್ ಬೂಮ್ರಾ

ದಕ್ಷಿಣ ಆಫ್ರಿಕಾ ಎದುರಿನ ಸರಣಿ: ರೋಹಿತ್ ಶರ್ಮ (ನಾಯಕ), ಕೆ.ಎಲ್.ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್ (ವಿಕೆಟ್ ಕೀಪರ್), ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಆರ್. ಅಶ್ವಿನ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ದೀಪಕ್ ಚಾಹರ್ ಮತ್ತು ಜಸ್‌ಪ್ರೀತ್ ಬೂಮ್ರಾ.

ಟಿ20 ವಿಶ್ವಕಪ್‌ಗೆ ತಂಡ

ರೋಹಿತ್ ಶರ್ಮ (ನಾಯಕ), ಕೆ.ಎಲ್.ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್ (ವಿಕೆಟ್ ಕೀಪರ್), ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಆರ್.ಅಶ್ವಿನ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್

ರೋಹಿತ್

ಕಾಯ್ದಿರಿಸಿದ ಆಟಗಾರರು: ಮೊಹಮ್ಮದ್ ಶಮಿ, ಶ್ರೇಯಸ್ ಅಯ್ಯರ್, ರವಿ ಬಿಷ್ಣೋಯ್, ದೀಪಕ್ ಚಾಹರ್

ಸ್ಯಾಫ್ ಫುಟ್‌ಬಾಲ್ ಟೂರ್ನಿ: ಫೈನಲ್‌ಗೆ ಭಾರತ ಯುವ ತಂಡ

ಕೊಲಂಬೊ (ಪಿಟಿಐ): ಥಂಗ್ಲಾಲ್‌ಸನ್ ಗಂಗ್ಟೆ ಅವರ ಮಿಂಚಿನ ಆಟದ ಬಲದಿಂದ ಭಾರತ ಪುರುಷರ ತಂಡವು 17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್ ಹಣಾಹಣಿಯಲ್ಲಿ ಭಾರತ 2–1ರಿಂದ ಬಾಂಗ್ಲಾದೇಶವನ್ನು ಸೋಲಿಸಿತು. ಥಂಗ್ಲಾಲ್‌ಸನ್ (51 ಮತ್ತು 59ನೇ ನಿಮಿಷ) ಪಂದ್ಯದ ದ್ವಿತೀಯಾರ್ಧದಲ್ಲಿ ಎರಡು ಗೋಲು ಗಳಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು.

62ನೇ ನಿಮಿಷದಲ್ಲಿ ಮಿರಾಜುಲ್ ಇಸ್ಲಾಂ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿ ಬಾಂಗ್ಲಾದೇಶ ತಂಡದ ಹಿನ್ನಡೆಯನ್ನು ತಗ್ಗಿಸಿದರೂ ಸೋಲು ತಪ್ಪಿಸಲು ಆಗಲಿಲ್ಲ.

ಅಲ್ಕರಾಜ್: ಟೆನಿಸ್ ಯುವರಾಜ

ಅಮೆರಿಕ ಓಪನ್ ಗೆದ್ದು ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ಸ್ಪೇನ್ ಆಟಗಾರ

ಹೆಸರು	ಕಾರ್ಲೋಸ್ ಅಲ್ಕರಾಜ್
ದೇಶ	ಸ್ಪೇನ್
ಜನ್ಮದಿನ	ಮೇ 5, 2003
ಹುಟ್ಟೂರು	ಎಲ್ ಪಾಮರ್, ಮರ್ಸಿಯಾ, ಸ್ಪೇನ್
ಎತ್ತರ	6 ಅಡಿ

ನ್ಯೂಯಾರ್ಕ್ (ಎಪಿ/ ರಾಯಿಟರ್ಸ್): ಫ್ಲಶಿಂಗ್ ಮಿಡೋಸ್‌ನ ಆರ್ಥರ್ ಆ್ಯಷ್ ಕ್ರೀಡಾಂಗಣವು ಭಾನುವಾರ, ಪುರುಷರ ಟೆನಿಸ್‌ನಲ್ಲಿ ಯುವಶಕ್ತಿಯೊಂದರ ಉದಯಕ್ಕೆ ಸಾಕ್ಷಿಯಾಯಿತು.

ಸ್ಪೇನ್‌ನ 19 ವರ್ಷದ ಪ್ರತಿಭೆ ಕಾರ್ಲೋಸ್ ಅಲ್ಕರಾಜ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ ಗೆದ್ದು ಮಿರುಗುವ ಟ್ರೋಫಿಗೆ ಮುತ್ತಿಕ್ಕಿದರು. ಮಾತ್ರವಲ್ಲ, ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಅಲಂಕರಿಸಿದರು.

ಅಲ್ಕರಾಜ್ ಫೈನಲ್‌ನಲ್ಲಿ 6-4, 2-6, 7-6(1), 6-3 ರಲ್ಲಿ ನಾರ್ವೆಯ ಕ್ಯಾಸ್ಪರ್ ರೂಡ್ ಅವರನ್ನು ಮಣಿಸಿದರು. ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ಅತಿಕಿರಿಯ ಆಟಗಾರ (19 ವರ್ಷ 4 ತಿಂಗಳು) ಎಂಬ ಗೌರವ ಅವರಿಗೆ ಒಲಿಯಿತು. ಆಸ್ಟ್ರೇಲಿಯಾದ ಲೀಟನ್ ಹೆವಿಟ್ ಹೆಸರಲ್ಲಿದ್ದ ದಾಖಲೆಯನ್ನು ಮುರಿದರು. ಹೆವಿಟ್ 2001 ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ಅಗ್ರ ರ‍್ಯಾಂಕಿಂಗ್ ಅಲಂಕರಿಸಿದ್ದರು.

ಅಮೆರಿಕದ ಪೀಟ್ ಸಾಂಪ್ರಾಸ್ ಬಳಿಕ ಅಮೆರಿಕ ಓಪನ್ ಗೆದ್ದ ಅತಿಕಿರಿಯ ಆಟಗಾರ ಎಂಬ ಹೆಗ್ಗಳಿಕೆ ಅವರಿಗೆ ಒಲಿದಿದೆ. ಸಾಂಪ್ರಾಸ್ 1990 ರಲ್ಲಿ ತಮ್ಮ 19ನೇ ವಯಸ್ಸಿನಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು. ಅದೇ ರೀತಿ, ರಫೆಲ್ ನಡಾಲ್ (2005ರ ಫ್ರೆಂಚ್ ಓಪನ್) ಬಳಿಕ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿದ ಅತಿಕಿರಿಯ ಆಟಗಾರ ಎಂಬ ಗೌರವಕ್ಕೂ ಪಾತ್ರರಾದರು.

ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್, ಸ್ಪೇನ್‌ನ ರಫೆಲ್ ನಡಾಲ್ ಮತ್ತು ಸರ್ಬಿಯದ ನೊವಾಕ್ ಜೊಕೊವಿಚ್ ಕಳೆದ ಎರಡು ದಶಕಗಳಿಂದ ಪುರುಷರ ಟೆನಿಸ್‌ಅನ್ನು ಆಳುತ್ತಿದ್ದಾರೆ. ಮೂವರು ಕೂಡಾ ನಿವೃತ್ತಿಯ ಅಂಚಿನಲ್ಲಿರುವಾಗ ಅಲ್ಕರಾಜ್ ನೇತೃತ್ವದಲ್ಲಿ ಹೊಸ ತಲೆಮಾರಿನ ಆಟಗಾರರ ಉದಯಕ್ಕೆ ಈ ಬಾರಿಯ ಅಮೆರಿಕ ಓಪನ್ ವೇದಿಕೆಯೊದಿಸಿತು ಎಂದು ವಿಶ್ಲೇಷಿಸಲಾಗುತ್ತಿದೆ. ಅಲ್ಕರಾಜ್ ಅವರ ಗೆಲುವನ್ನು ನಡಾಲ್, ಫೆಡರರ್ ಮತ್ತು ಜೊಕೊವಿಚ್ ಅವರ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಜಯಕ್ಕೆ ಹೋಲಿಸಲಾಗುತ್ತಿದೆ.

ಪ್ರೀ ಕ್ವಾರ್ಟರ್, ಕ್ವಾರ್ಟರ್ ಮತ್ತು ಸೆಮಿಫೈನಲ್‌ನಲ್ಲಿ ಅಲ್ಕರಾಜ್ ಐದು ಸೆಟ್‌ಗಳನ್ನು ಆಡಿದ್ದರು. ಈ ಪಂದ್ಯಗಳು ತಡರಾತ್ರಿಯವರೆಗೂ ಮುಂದುವರಿದಿದ್ದವು. ಸುದೀರ್ಘ ಪಂದ್ಯಗಳನ್ನು ಆಡಿದ ಬಳಲಿಕೆಯನ್ನು ತೋರ್ಪಡಿಸದ ಅವರು ಫೈನಲ್‌ನಲ್ಲಿ ಚೇತೋಹಾರಿ ಪ್ರದರ್ಶನ ನೀಡಿದರು. ವೇಗದ ಸರ್ವ್, ಬಿರುಸಿನ ರಿಟರ್ನ್‌ಗಳ ಜತೆ ನೆಟ್ ಬಳಿ ಚಾಕಚಕ್ಯತೆಯ ಆಟವಾಡಿ ಪ್ರೇಕ್ಷಕರನ್ನು ರಂಜಿಸಿದರು.

ಮುಖ್ಯಾಂಶಗಳು

- ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಸಂಭ್ರಮ
- ಫೈನಲ್‌ನಲ್ಲಿ ರೂಡ್ ಎದುರು 6-4, 2-6, 7-6(1), 6-3 ಗೆಲುವು
- ಪೀಟ್ ಸಾಂಪ್ರಾಸ್ ಬಳಿಕ ಅಮೆರಿಕ ಓಪನ್ ಗೆದ್ದ ಅತಿಕಿರಿಯ ಆಟಗಾರ
- ₹ 20.71 ಕೋಟಿ ನಗದು ಬಹುಮಾನ

‘ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಬೇಕು, ಗ್ರ್ಯಾನ್‌ಸ್ಲಾಮ್ ಟೂರ್ನಿ ಗೆಲ್ಲಬೇಕು ಎಂಬ ಕನಸನ್ನು ಬಾಲ್ಯದಲ್ಲೇ ಕಂಡಿದ್ದೆ. ಈ ಪ್ರಶಸ್ತಿ ತುಂಬಾ ವಿಶೇಷವಾದುದು’ ಎಂದು ಸಂತಸದಿಂದ ಬೀಗುತ್ತಿದ್ದ ಅಲ್ಕರಾಜ್ ಪ್ರತಿಕ್ರಿಯಿಸಿದರು.

‘ಇನ್ನೂ ಹಲವು ವಾರಗಳು ಮಾತ್ರವಲ್ಲ ವರ್ಷಗಳ ಕಾಲ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಬೇಕು ಎಂಬುದೇ ನನ್ನ ಬಯಕೆ. ಆ ನಿಟ್ಟಿನಲ್ಲಿ ಕಠಿಣ ಪ್ರಯತ್ನ ನಡೆಸುತ್ತೇನೆ’ ಎಂದಿದ್ದಾರೆ.

ದಾಖಲೆ ಸಂಖ್ಯೆಯ ಪ್ರೇಕ್ಷಕರು

ಈ ಬಾರಿಯ ಅಮೆರಿಕ ಓಪನ್ ಟೂರ್ನಿಯ ಪಂದ್ಯಗಳನ್ನು ದಾಖಲೆ ಸಂಖ್ಯೆಯ ಪ್ರೇಕ್ಷಕರು ವೀಕ್ಷಿಸಿದ್ದಾರೆ. ಎರಡು ವಾರಗಳಲ್ಲಿ ಒಟ್ಟು 7.76 ಲಕ್ಷ ಟೆನಿಸ್ ಪ್ರೇಮಿಗಳು ಕ್ರೀಡಾಂಗಣಕ್ಕೆ ಬಂದಿದ್ದಾರೆ. 2019ರ ಟೂರ್ನಿಯ ಪಂದ್ಯಗಳನ್ನು 7.37 ಲಕ್ಷ ಮಂದಿ ವೀಕ್ಷಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

23,859 ಆಸನ ಸಾಮರ್ಥ್ಯದ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ನಡೆದ ಎಲ್ಲ ಪಂದ್ಯಗಳಿಗೂ ಟಿಕೆಟ್ ‘ಸೋಲ್ಡ್ ಔಟ್’ ಆಗಿತ್ತು ಎಂದು ಸಂಘಟಕರು ಹೇಳಿದ್ದಾರೆ.

ಕ್ರೆಚಿಕೋವಾ– ಸಿನಿಯಕೋವಾ ಚಾಂಪಿಯನ್: ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಚಿಕೋವಾ ಮತ್ತು ಕ್ಯಾಥೆರಿನಾ ಸಿನಿಯಕೋವಾ ಅವರು ಮಹಿಳೆಯರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು 3–6, 7–5, 6–1 ರಲ್ಲಿ ಅಮೆರಿಕದ ಕ್ಯಾಥೆರಿನ್ ಮೆಕ್‌ನಲಿ–ಟೇಲರ್ ಟೌನ್‌ಸೆಂಡ್ ಎದುರು ಗೆದ್ದರು.

ಇಂಗ್ಲೆಂಡ್‌ಗೆ ಸರಣಿ

ಲಂಡನ್ (ಎಎಫ್‌ಪಿ): ಮೂರನೇ ಮತ್ತು ನಿರ್ಣಾಯಕ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿದ ಇಂಗ್ಲೆಂಡ್ ಟೆಸ್ಟ್ ಸರಣಿಯನ್ನು 2–1ರಿಂದ ತನ್ನದಾಗಿಸಿಕೊಂಡಿದೆ.

ಮೂರು ದಿನ ಮಾತ್ರ ನಡೆದ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಪಾರಮ್ಯ ಮೆರೆಯಿತು. ಒಂಬತ್ತು ವಿಕೆಟ್‌ಗಳಿಂದ ಪ್ರವಾಸಿ ತಂಡವನ್ನು ಸೋಲಿಸಿತು. ಮೊದಲ ದಿನ ಮಳೆಯಿಂದಾಗಿ ಆಟ ನಡೆದಿರಲಿಲ್ಲ. ರಾಣಿ ಎರಡನೇ ಎಲಿಜಬೆತ್ ಸಾವಿನ ಕಾರಣ ಎರಡನೇ ದಿನದಾಟ ರದ್ದುಗೊಂಡಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 36.2 ಓವರ್ ಗಳಲ್ಲಿ 118; ಇಂಗ್ಲೆಂಡ್: 36.2 ಓವರ್‌ಗಳಲ್ಲಿ 158: ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 56.2 ಓವರ್ ಗಳಲ್ಲಿ 169; ಇಂಗ್ಲೆಂಡ್: 22.3 ಓವರ್‌ಗಳಲ್ಲಿ 1ಕ್ಕೆ 130 (ಅಲೆಕ್ಸ್ ಲೀಸ್ 39, ಜಾಕ್ ಕ್ರಾವ್ಲಿ ಔಟಾಗದೆ 69, ಒಲಿ ಪೋಪ್ ಔಟಾಗದೆ 11).

ಚೆನ್ನೈ ಓಪನ್: ಬೊಶಾಡ್ ಶುಭಾರಂಭ

ಚೆನ್ನೈ (ಪಿಟಿಐ): ಕೆನಡಾದ ಯೂಜಿನಿ ಬೊಶಾಡ್, ಚೆನ್ನೈ ಓಪನ್ ಡಬ್ಲ್ಯುಟಿಎ–250 ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 7–5, 6–2 ರಲ್ಲಿ ಸ್ವಿಟ್ಜರ್‌ಲೆಂಡ್‌ನ ಯೊವಾನ್ ಜುಗೆರ್ ವಿರುದ್ಧ ಗೆದ್ದರು.

28 ವರ್ಷದ ಬೊಶಾಡ್ ಈ ಹಿಂದೆ ವಿಶ್ವ ರ‍್ಯಾಂಕಿಂಗ್‌ನಲ್ಲಿ 5ನೇ ಸ್ಥಾನದಲ್ಲಿದ್ದರು. ಗಾಯದ ಕಾರಣದಿಂದಾಗಿ ಅವರು ಒಂದೂವರೆ ವರ್ಷ ಅಂಗಳದಿಂದ ದೂರವುಳಿದಿದ್ದರು. 2021ರ ಮಾರ್ಚ್‌ನಲ್ಲಿ ಕೊನೆಯ ಡಬ್ಲ್ಯುಟಿಎ ಟೂರ್ನಿ ಆಡಿದ್ದರು.

ಇನ್ನೊಂದು ಪಂದ್ಯದಲ್ಲಿ ಪೋಲೆಂಡ್‌ನ ಕ್ಯಾಥರಿನಾ ಕವಾ 6–4, 6–3 ರಲ್ಲಿ ಆಸ್ಟ್ರೇಲಿಯಾದ ಅಸ್ತ್ರಾ ಶರ್ಮಾ ಅವರನ್ನು ಮಣಿಸಿದರು. ಜಪಾನ್‌ನ ನವೊ ಹಿಬಿನೊ 6–0, 6–4 ರಲ್ಲಿ ಯಾನಾ ಫೆಟ್ ವಿರುದ್ಧ ಜಯಿಸಿದರು.

ಯೂಜೆನಿ ಬೊಶಾಡ್ ಚೆಂಡನ್ನು ಹಿಂದಿರುಗಿಸಿದ ಕ್ಷಣ –ಪಿಟಿಐ ಚಿತ್ರ

ಬಿಸಿಸಿಐ ಮೇಲ್ಮನವಿ: ವಿಚಾರಣೆ ಇಂದು

ನವದೆಹಲಿ (ಪಿಟಿಐ): ನಿಯಮಾವಳಿ ಪರಿಷ್ಕರಣೆಗೆ ಅನುಮತಿ ಕೋರಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕೈಗೆತ್ತಿಕೊಳ್ಳಲಿದೆ.

ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯು ಶಿಫಾರಸು ಮಾಡಿರುವ ನಿಯಮಾವಳಿಯಲ್ಲಿರುವ ಕೂಲಿಂಗ್ ಆಫ್ ಅವಧಿ, ಪದಾಧಿಕಾರಿಗಳ ವಯೋಮಿತಿ ಕುರಿತ ನಿಯಮಗಳ ಪರಿಷ್ಕರಣೆ ಮಾಡಬೇಕು ಎಂದು ಬಿಸಿಸಿಐ ಮೇಲ್ಮನವಿ ಸಲ್ಲಿಸಿತ್ತು.

ಬಿಸಿಸಿಐ ಸಲ್ಲಿಸಿರುವ ಮೇಲ್ಮನವಿ ಮತ್ತು ಮಂಡಳಿಯ ಆಡಳಿತಕ್ಕೆ ಸಂಬಂಧಿಸಿದ ಇತರ ಪ್ರಕರಣಗಳ ವಿಚಾರಣೆಯನ್ನು ಮಂಗಳವಾರ ಮಧ್ಯಾಹ್ನ ತೆಗೆದುಕೊಳ್ಳುತ್ತೇವೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿತು.

ಸಂಕ್ಷಿಪ್ತ ಸುದ್ದಿ

ಏಷ್ಯಾಕಪ್ ಗೆಲುವು ದೇಶದ ಜನರಿಗೆ ಅರ್ಪಣೆ: ಭಾನುಕಾ

ದುಬೈ (ಪಿಟಿಐ): ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ವಿಜಯವನ್ನು ಬಿಕ್ಕಟ್ಟು ಎದುರಿಸುತ್ತಿರುವ ದೇಶದ ಜನರಿಗೆ ಅರ್ಪಿಸುವುದಾಗಿ ಶ್ರೀಲಂಕಾ ತಂಡದ ಬ್ಯಾಟರ್ ಭಾನುಕಾ ರಾಜಪಕ್ಸ ಹೇಳಿದ್ದಾರೆ.

ದ್ವೀಪರಾಷ್ಟ್ರವು ಕಳೆದ ಕೆಲ ದಿನಗಳಿಂದ ರಾಜಕೀಯ ಬಿಕ್ಕಟ್ಟು ಮತ್ತು ಆರ್ಥಿಕ ಸಂಕಷ್ಟದಿಂದ ನಲುಗಿದೆ.

ಭಾನುವಾರ ನಡೆದ ಏಷ್ಯಾಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 23 ರನ್‌ಗಳಿಂದ ಪರಾಭವಗೊಳಿಸಿದ್ದ ಶ್ರೀಲಂಕಾ, ಆರನೇ ಬಾರಿ ಟ್ರೋಫಿ ತನ್ನದಾಗಿಸಿಕೊಂಡಿತ್ತು. 2014ರ ಬಳಿಕ ಮೊದಲ ಬಾರಿ ಚಾಂಪಿಯನ್ ಆಗಿತ್ತು. ಪಂದ್ಯದಲ್ಲಿ ಶ್ರೀಲಂಕಾ ಸಂಕಷ್ಟದಲ್ಲಿದ್ದ ವೇಳೆ ಭಾನುಕಾ 45 ಎಸೆತಗಳಲ್ಲಿ ಗಳಿಸಿದ 71 ರನ್‌ಗಳು ಆಸರೆಯಾಗಿದ್ದವು.

‘ಕೆಲವು ವರ್ಷಗಳ ಹಿಂದೆ ನಮ್ಮ ತಂಡ ಆಕ್ರಮಣಕಾರಿಯಾಗಿತ್ತು. ಒಗ್ಗಟ್ಟಿನೊಂದಿಗೆ ಅಂತಹ ಕ್ಷಣಗಳನ್ನು ಮತ್ತೆ ಸೃಷ್ಟಿಸಲು ನಾವು ಬಯಸಿದ್ದೆವು. ನಾವು ಏನೆಂದು ವಿಶ್ವಕ್ಕೆ ತೋರಿಸುವ ಉದ್ದೇಶವಿತ್ತು’ ಎಂದು ಭಾನುಕಾ ಪಂದ್ಯದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಕ್ರಿಕೆಟ್: ಡಿಸ್ನಿ ಸ್ಟಾರ್‌ಗೆ ಪ್ರಸಾರ ಹಕ್ಕು

ಬೆಂಗಳೂರು: ಲೆಜೆಂಡ್ಸ್ ಲೀಗ್ ಕ್ರಿಕೆಟ್ ಎರಡನೇ ಆವೃತ್ತಿಯ ಪಂದ್ಯಗಳ ನೇರ ಪ್ರಸಾರದ ಹಕ್ಕನ್ನು ಡಿಸ್ನಿ ಸ್ಟಾರ್ ತನ್ನದಾಗಿಸಿಕೊಂಡಿದೆ.

ಇದೇ 16ರಿಂದ ಆರಂಭವಾಗುವ ಟೂರ್ನಿಯ ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್‌ನಲ್ಲಿ ಪ್ರಸಾರವಾಗಲಿವೆ. ಅಕ್ಟೋಬರ್ ಐದರವರೆಗೆ ಟೂರ್ನಿ ನಡೆಯಲಿದೆ.

ರೆಬೆಲ್ಸ್‌ಗೆ ಜಯ

ಬೆಂಗಳೂರು: ರೆಬೆಲ್ಸ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 5–0ಯಿಂದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು 1–0ಯಿಂದ ಥಾಂಕೊಸ್ ಸ್ಟೂಡೆಂಟ್ಸ್ ಯೂನಿಯನ್ ವಿರುದ್ಧ ಗೆದ್ದಿತು. ಸ್ಪೋರ್ಟಿಂಗ್ ಪರ ಅರುಣ್ ಕುಮಾರ್ (78ನೇ ನಿ.) ಗೋಲು ಹೊಡೆದರು.

ಮತ್ತೊಂದು ಹಣಾಹಣಿಯಲ್ಲಿ ಬಿಎಫ್‌ಸಿ 3–0ಯಿಂದ ಎಫ್‌ಸಿ ಅಗ್ನಿಪುತ್ರ ವಿರುದ್ಧ ಗೆದ್ದಿತು.